ಭಾರತದ ಕುರಿತಾದ ವಿದೇಶಗಳ ಟೀಕೆ ಹೊಸತಲ್ಲ

ಅವುಗಳನ್ನು ನಿರ್ಲಕ್ಷಿಸುವುದೇಲೇಸೆಂದು ಪ್ರಧಾನಿ ಇಂದಿರಾಗಾಂಧಿ

ಅರುಣ

ಬೆಲೆ: 25 ಪೈಸೆ.   ಪ್ರಗತಿಶೀಲ ಕನ್ನಡ ವಾರ ಪತ್ರಿಕೆ, ಮಂಗಳೂರು–1.

ಸಂಪುಟ 29   2—11—1975 ಆದಿತ್ಯವಾರ   ಸಂಚಿಕೆ 44

"ವಿದೇಶಾಂಗ ನೀತಿಯ ಪ್ರಶ್ನೆಯಲ್ಲಿ ಹೆಚ್ಚಿನ ದೊಡ್ಡ ದೊಡ್ಡ ವೃತ್ತ ಪತ್ರಿಕೆಗಳು ತಂತಮ್ಮ ದೇಶಗಳ ವಿದೇಶಾಂಗ ಕಛೇರಿಗಳ ನೀತಿಯ ಗುರಿಯನ್ನೇ ಅತ್ಯಂತ ನಿಕಟವಾಗಿ ಹೊಂದಿಕೊಂಡಿವೆ. ಇಂತಹ ಸಂಪ್ರದಾಯ ಇಲ್ಲದಿರುವುದಾದರೆ ನಾನು ಕಾಣುವಂತೆ ಭಾರತದಲ್ಲಿ ಮಾತ್ರ! ಹೆಚ್ಚು ಕಡಿಮೆ ಈ ವಿಷಯದಲ್ಲಿ ಪತ್ರಿಕೆಗಳು ತಮ್ಮ ಸರಕಾರಗಳ ಸೂಚನೆಯಂತೆ ವರ್ತಿಸುತ್ತಿವೆ. ಇಂತಹ ಟೀಕೆಗಳು ಈಗಲೇನೂ ಹೊಸದಲ್ಲವೆಂಬುದನ್ನು ನಾವು ತಿಳಿದುಕೊಳ್ಳಬೇಕು. ಸ್ವಾತಂತ್ರ್ಯ ಹೋರಾಟ ಕಾಲದಲ್ಲೂ ಮಹಾತ್ಮಾ ಗಾಂಧಿಯವರ ಜೀವಿತ ಕಾಲದಲ್ಲೂ ಹೆಚ್ಚೇಕೆ ನನ್ನ ತಂದೆಯವರು ಜೀವಿಸಿದ್ದಾಗಲೂ ಅವರ ವಿರುದ್ಧ ಇಂತಹ ಟೀಕೆಗಳು ಇದ್ದುವು. ಇವು (ಈ ವಿದೇಶೀ ಪತ್ರಿಕೆಗಳು) ಏನು ಹೇಳುತ್ತವೆ ಎಂಬುದರ ಕುರಿತು ನಾವು ಹೆಚ್ಚು ಚಿಂತಿಸುವ ಅಗತ್ಯವಿಲ್ಲವೆಂದು ನನಗೆ ಕಾಣುತ್ತದೆ.

"ಆದರೆ ಒಂದು ಉತ್ತಮ ಪರಿಣಾಮವೆಂದರೆ ಹಿಂದೆ ಅದರಲ್ಲೂ ನಾವು ಸ್ವತಂತ್ರರಾಗದೆ ಇದ್ದ ಕಾಲದಲ್ಲಿ ನಮಗೆ ಪ್ರಾಮಾಣಿಕತೆಯನ್ನೂ, ನ್ಯಾಯವಾದ ವರ್ತನೆಯನ್ನೂ ಬೋಧಿಸಿದ ಜನರೇ ಈಗ ಬಟ್ಟ ಬಯಲಾಗಿದ್ದಾರೆ. ನಮ್ಮ ವಿಷಯದಲ್ಲಿ ಅಪ್ಪಟ ಸುಳ್ಳಾದ ಸುದ್ದಿಗಳನ್ನು ಪ್ರಕಟಿಸುತ್ತಿರುವ ಪತ್ರಿಕೆಗಳಿಗೆ ನಾವು ಸ್ಪಷ್ಟೀಕರಣ ನೀಡಿದರೂ ಪತ್ರಿಕೆಗಳು ಅವನ್ನು ಪ್ರಕಟಿಸುವುದಿಲ್ಲ. ಉದಾಹರಣೆಗೆ ಜಸ್ಟಿಸ್ ಸಿನ್ಹಾರು ಕೊಲ್ಲಲ್ಪಟ್ಟರು ಎಂದು ವಿದೇಶೀ ಪತ್ರಿಕೆಗಳು ಭಾರೀ ಪ್ರಚಾರ ನೀಡಿದುವು. ಅದನ್ನು ಕೂಡಲೇ ನಮ್ಮ ಹೈಕಮಿಶನರರು ಅಲ್ಲಗಳೆದು ಹೇಳಿಕೆ ಕೊಟ್ಟರು. ಆದರೆ ಅತ್ಯಂತ ಪ್ರಮುಖ ಪತ್ರಿಕೆಯೊಂದು ಈ ಹೇಳಿಕೆಯನ್ನು ಪ್ರಕಟಿಸಲಿಲ್ಲ. ಏಕೆಂದು ಕೇಳಿದರೆ 'ಹೇಳಿಕೆ ಭಾರೀ ದೀರ್ಘವಾಯಿತು' ಎಂಬ ಉತ್ತರ ಬಂತು. ಈ ಪತ್ರಿಕೆಗಳು ಈ ಹೇಳಿಕೆಯನ್ನು ಪೂರ್ಣವಾಗಿ ಪ್ರಕಟಿಸಬೇಕೆಂದಿರಲಿಲ್ಲ. ಸಂಕ್ಷಿಪ್ತವಾಗಿ ಪ್ರಕಟಿಸಬಹುದಿತ್ತು. ಕನಿಷ್ಟ–ತಾವು ಪ್ರಕಟಿಸಿದ ಸುದ್ದಿ ಸುಳ್ಳು ಎಂದಾದರೂ ಪ್ರಕಟಿಸಬಹುದಿತ್ತು.... ಇದೊಂದೇ ಉದಾಹರಣೆಯಲ್ಲ ಇಂತಹ ಉದಾಹರಣೆಗಳು ಬೇಕಷ್ಟಿವೆ."

ಎಂಬುದಾಗಿ ಸಿಯನ್‌ಯಸ್. ವಾರ್ತಾ ಸಂಸ್ಥೆಗೆ ನೀಡಿದ ಸಂದರ್ಶನವೊಂದರಲ್ಲಿ ಪ್ರಧಾನಿ ಇಂದಿರಾ ಗಾಂಧಿ ಹೇಳಿದರು.

ಅಮೇರಿಕಾ, ಬ್ರಿಟನ್, ಪ. ಜರ್ಮನಿಗಳ ಗುತ್ತೇದಾರಿಗಳು ನಡೆಸುತ್ತಿರುವ ಪತ್ರಿಕೆಗಳಲ್ಲಿ ನಿಮ್ಮನ್ನು ಅವಹೇಳನೆ ಗೊಳಿಸುವಂತಹ ಸುದ್ದಿಗಳ ಸಮೇತ ಸುಳ್ಳು ವದಂತಿಗಳು ಪ್ರಕಟವಾಗುತ್ತಿರುವಾಗ ಸಮಾಜವಾದೀ ಶಿಬಿರದ ಮತ್ತು ತೃತೀಯ ಜಗತ್ತಿನ ಪತ್ರಿಕೆಗಳು ನೀವು ಕೈಗೊಂಡ ಫಾಸಿಸ್ಟ್ ವಿರೋಧಿ ಕ್ರಮಗಳಿಗೂ 20 ಅಂಶಗಳ ಕಾರ್ಯಕ್ರಮಗಳಿಗೂ ಬೆಂಬಲ ಕೊಡುತ್ತಿವೆಯಲ್ಲ? ನಮ್ಮ ದೇಶದ ರಾಷ್ಟ್ರೀಯ ಅಂತರರಾಷ್ಟ್ರೀಯ ಸ್ಥಾನಮಾನಗಳ ನೆಲೆಯಲ್ಲಿ ಇಂತಹ ವೃತ್ತ ಪತ್ರಿಕಾ ಪ್ರಕಟಣೆಗಳ ಮಹತ್ವವೇನು? ಎಂದು ಸಿ. ಯನ್. ಯಸ್. ಪ್ರತಿನಿಧಿ ಪ್ರಶ್ನಿಸಿದ್ದರು.

ಸಿ. ಯನ್. ಯಸ್. ವಾರ್ತಾ ಸಂಸ್ಥೆ ರಾಷ್ಟ್ರೀಯ ಅಂತರರಾಷ್ಟ್ರೀಯ ಸಮಸ್ಯೆಗಳಿಗೆ ಸಂಬಂಧಿಸಿ ಕೇಳಿದ ಅನೇಕ ಪ್ರಶ್ನೆಗಳಿಗೆ ಪ್ರಧಾನಿಯವರು ಉತ್ತರಿಸಿದ್ದು ಅವುಗಳನ್ನಿಲ್ಲಿ ನೀಡುತ್ತಿದ್ದೇವೆ.

(8ನೇ ಪುಟ ನೋಡಿರಿ)

ಫಾಸಿಸಂನ ವಿರುದ್ಧ ಗೌಹಾತಿಯಲ್ಲಿ ಕಾಂಗ್ರೆಸ್ - ಕಮ್ಯುನಿಸ್ಟ್ ಪಾರ್ಟಿಗಳ ಆಶ್ರಯದಲ್ಲಿ ಅಭೂತಪೂರ್ವ ಸಭೆ - ಮೆರವಣಿಗೆ

ಕಾಂಗ್ರೆಸ್ ಮತ್ತು ಕಮ್ಯುನಿಸ್ಟ್ ಪಾರ್ಟಿಗಳ ನೇತೃತ್ವದಲ್ಲಿ ಕಳೆದ ತಾ. 26ರಂದು ಅಸ್ಸಾಮಿನ ರಾಜಧಾನಿಯಲ್ಲಿ ಫಾಸಿಸ್ಟ್ ಶಕ್ತಿಗಳ ವಿರುದ್ಧವಾಗಿ ನಡೆದ ರ್‍ಯಾಲಿಯೊಂದು ರಾಜಧಾನಿಯ ಇತಿಹಾಸದಲ್ಲೇ ಅಪೂರ್ವವಾಗಿತ್ತು. ಈ ರ್‍ಯಾಲಿಯಲ್ಲಿ ಕಾಂಗ್ರೆಸ್ ಅಧ್ಯಕ್ಷ ಡಿ. ಕೆ. ಬರುವಾ ಹಾಗೂ ಭಾರತ ಕಮ್ಯುನಿಸ್ಟ್ ಪಾರ್ಟಿಯ ಪ್ರಧಾನ ಕಾರ್ಯದರ್ಶಿ ಶ್ರೀ ಸಿ. ರಾಜೇಶ್ವರ ರಾವ್ ಇವರು ಮುಖ್ಯ ಭಾಷಣಗಾರರಾಗಿದ್ದರು.

ಕಾಂಗ್ರೆಸ್ ಪಕ್ಷಕ್ಕಾಗಲೀ, ಕಮ್ಯುನಿಸ್ಟ್ ಪಾರ್ಟಿಗಾಗಲೀ ಏಕಾಂಗಿಯಾಗಿ ಇಂತಹ ಬೃಹತ್ ಸಭೆಯನ್ನು ಏರ್ಪಾಡಿಸಲು ಸಾಧ್ಯವಾಗುತ್ತಿರಲಿಲ್ಲ–ಎಂಬುದು ವೀಕ್ಷಕರ ಅಭಿಪ್ರಾಯವಾಗಿತ್ತು.

ಅಂದು ಬೆಳಗ್ಗಿನಿಂದಲೇ ರಾಜ್ಯದ ನಾನಾ ಭಾಗಗಳಿಂದ ವಿವಿಧ ವಾಹನಗಳಲ್ಲಿ ಗೌಹಾತಿಗೆ ಜನಸಮೂಹ ಪ್ರವಹದೋಪಾದಿಯಾಗಿ ಬರಲಾರಂಭಿಸಿತು. ಗ್ರಾಮಾಂತರಗಳಿಂದ ನೂರಾರು ಬಸ್‌ಗಳು ಕಾಂಗ್ರೆಸಿನ ತ್ರಿವರ್ಣ ಧ್ವಜ ಮತ್ತು ಕೆಂಬಾವುಟಗಳಿಂದ ಅಲಂಕರಿಸಲ್ಪಟ್ಟ ಸಹಸ್ರಾರು ಜನರನ್ನು ಹೊತ್ತು ತಂದಿದ್ದುವು. ರೈಲುಗಳ ಮೂಲಕವೂ ಸಹಸ್ರಾರು ಜನರು ಆಗಮಿಸಿದ್ದರು.

ಬಿಸಿಲಿನ ಉಗ್ರತಾಪವಿದ್ದರೂ ಸಭೆಯಲ್ಲಿ ಸೇರಿದ ಜನ, ಸ್ತ್ರೀ ಪುರುಷರಾದಿಯಾಗಿ ನಾಲ್ಕು ತಾಸುಗಳ ತನಕ ತಮ್ಮ ಮುಖಂಡರುಗಳ ಭಾಷಣಗಳನ್ನು ಆಲಿಸಿದರು. ಇತ್ತೀಚಿಗಿನ ತನಕ ರಾಜಕೀಯ ಚಟುವಟಿಕೆಗಳಿಂದ ದೂರವಿರುತ್ತಿದ್ದ ನಗರದ ಮಧ್ಯಮ ವರ್ಗದ ಜನತೆ ಈ ಸಭೆಗೆ ಹೆಚ್ಚಿನ ಸಂಖ್ಯೆಯಲ್ಲಿ ಬಂದಿದ್ದುದು ಒಂದು ಮುಖ್ಯ ವೈಶಿಷ್ಟ್ಯವಾಗಿತ್ತು. ಎರಡು ಪಕ್ಷಗಳ ಧ್ವಜಗಳೂ ವಿವಿಧ ಸಾಮೂಹಿಕ ಸಂಘಟನೆಗಳ ಧ್ವಜಗಳೂ ಸಹಸ್ರ ಗಟ್ಟಲೆಯಾಗಿ ಹಾರಾಡುತಿದ್ದುವು.

ಈ ಸಭೆಗೆ ಅಸ್ಸಾಮಿನ ಮುಖ್ಯಮಂತ್ರಿ ಅರುಣಾಚಲದ ಮುಖ್ಯಮಂತ್ರಿ ಮೇಘಾಲಯದ ಮುಖ್ಯಮಂತ್ರಿಯವರ ಪರವಾಗಿ ಅಲ್ಲಿನ ಸಾರ್ವಜನಿಕ ಕಾಮಗಾರೀ ಸಚಿವ ಇವರು ಶುಭಾಶಯ ಕೋರಿದರು. ಇವರಲ್ಲದೆ ಭಾರತ ಕಮ್ಯುನಿಸ್ಟ್ ಪಾರ್ಟಿಯ ಕೇಂದ್ರ ಸಮಿತಿಯ ಸದಸ್ಯ ಶ್ರೀ ಫಾನಿ ಬೋರ, ಇಂಟಕ್ ಅಧ್ಯಕ್ಷ ಬಿ ಭಗವತಿ ಇವರೂ ಸಭೆಯನ್ನುದ್ದೇಶಿಸಿ ಭಾಷಣಮಾಡಿದರು. ಆರಂಭದಲ್ಲಿ ಕಮ್ಯುನಿಸ್ಟ್ ಪಾರ್ಟಿಯ ರಾಜ್ಯಮಂಡಲಿಯ ಕಾರ್ಯದರ್ಶಿ ಪ್ರಮೋದ್ ಗೋಗಿ ಇವರು ಸಭೆಯ ಉದ್ದೇಶವನ್ನು ವಿವರಿಸಿದರು.

ಶ್ರೀ ಬರೂವ ಇವರ ಭಾಷಣ

ತನ್ನ ಭಾಷಣದಲ್ಲಿ ಬರೂವರವರು ಫಾಸಿಸಂನ ವಿರುದ್ಧದ ಹೋರಾಟದಲ್ಲಿ ಎಲ್ಲ ದೇಶಪ್ರೇಮಿ ಶಕ್ತಿಗಳ ಐಕ್ಯದ ಅಗತ್ಯವನ್ನು ಒತ್ತಿಹೇಳಿದ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ನಿರ್ಣಯವನ್ನು ನೆನಪಿಗೆ ತಂದು ಫಾಸಿಸಂನ ವಿರುದ್ಧ ಭಾರತ ಮಾತ್ರವೇ ಹೋರಾಡುವುದಲ್ಲವೆಂದು ಹೇಳಿದರು. ಭಾರತದ ಜನತೆಯಿಂದು ನಡೆಸುತ್ತಿರುವ ಹೋರಾಟವನ್ನು ಮೊದಲಿಗೆ ಬೆಂಬಲಿಸಿದ ರಾಷ್ಟ್ರವೆಂದರೆ ಸೋವಿಯೆತ್ ಯೂನಿಯನ್ ಮತ್ತು ಸಮಾಜವಾದಿ ರಾಷ್ಟ್ರಗಳು ಎಂದು ಬರುವ ನುಡಿದರು. ಭಾರತಕ್ಕೆ ಈಗಲೂ ಬೆಂಬಲ ನೀಡುತ್ತಿರುವ ರಾಷ್ಟ್ರ ಸೋವಿಯೆತ್ ಯೂನಿಯನ್ ಎಂಬುದಾಗಿ ಅವರು ಹೇಳಿದರು.

ರಾಜೇಶ್ವರ ರಾಯರ ಭಾಷಣ

ಕಾಂಗ್ರೆಸ್ ಪಕ್ಷದೊಡನೆ ಕಾರ್ಯಕ್ರಮ ಮತ್ತಿತರ ವಿಚಾರಗಳಲ್ಲಿ ಮತಭೇದವಿದ್ದರೂ ಕೂಡಾ ಕಮ್ಯುನಿಸ್ಟ್ ಪಾರ್ಟಿಯು ಭಾರತದ ಸ್ವಾತಂತ್ರ್ಯ, ಭದ್ರತೆ ಮತ್ತು ಪ್ರಜಾಪ್ರಭುತ್ವವನ್ನು ರಕ್ಷಿಸಲು ಕಾಂಗ್ರೆಸಿನೊಂದಿಗೆ ಸೇರಿ ಹೋರಾಡುತ್ತದೆ ಎಂದು ಕಮ್ಯುನಿಸ್ಟ್ ಪಾರ್ಟಿಯ ಪ್ರಧಾನ ಕಾರ್ಯದರ್ಶಿ ಶ್ರೀ ಸಿ. ರಾಜೇಶ್ವರ ರಾವ್ ಸ್ಪಷ್ಟಪಡಿಸಿದರು.

ತುರ್ತು ಪರಿಸ್ಥಿತಿಯು ಸಾರಲ್ಪಟ್ಟ ನಂತರ ಎಲ್ಲ ಮಟ್ಟಗಳಲ್ಲೂ ಕಾಂಗ್ರೆಸ್ ಮತ್ತು ಕಮ್ಯುನಿಸ್ಟ್ ಪಕ್ಷಗಳು ಜಂಟಿ ಪ್ರಕ್ಷೋಭೆಯನ್ನು ನಡೆಸಿದ ಪರಿಣಾಮವಾಗಿ ಈ ಬೃಹತ್ ರ್‍ಯಾಲಿ ನಡೆದುದಾಗಿತ್ತು.

(ಸಿ. ಯನ್. ಯಸ್.)

— ೦ — ೦ —

ಗೇರುಬೀಜ ದಾಸ್ತಾನು ಬಿಕ್ಕಟ್ಟು ಪರಿಹಾರಕ್ಕೆ ಸೋವಿಯೆತ್ ಯೂನಿಯನ್ ನೆರವು

ಪಾಶ್ಚಿಮಾತ್ಯ ರಾಷ್ಟ್ರಗಳು ಮುಖ್ಯವಾಗಿ ಅಮೇರಿಕಾವು ಭಾರತದ ಗೇರುಬೀಜ (ಗೋಡಂಬಿ)ಯ ಆಮದನ್ನು ಕಡಿಮೆಗೊಳಿಸಿದ್ದರಿಂದ ದೇಶದಲ್ಲಿ ಗೇರು ಬೀಜ ದಾಸ್ತಾನು ಹೆಚ್ಚಾಗಿದ್ದು ಈ ಕೈಗಾರಿಕೆಯಲ್ಲಿ ಬಿಕ್ಕಟ್ಟೇ ತಲೆದೋರಿತ್ತು.

ಭಾರತ–ಸೋವಿಯೆತ್ ವಾಣಿಜ್ಯ ಒಪ್ಪಂದದಂತೆ ಸೋವಿಯೆತ್ ಯೂನಿಯನ್ ಭಾರತದಿಂದ ವರುಷಕ್ಕೆ 25000 ಟನ್ ಗೇರುಬೀಜವನ್ನು ತರಿಸಿಕೊಳ್ಳುತಿತ್ತು. ಸೋವಿಯೆತ್ ಯೂನಿಯನ್ ಕಳೆದ ವರುಷ 39 ಸಾವಿರ ಟನ್ ಗೇರುಬೀಜವನ್ನು ಕೊಂಡಿದ್ದು–ಕಳೆದ ವರುಷ ಹೆಚ್ಚು ಕೊಂಡದ್ದನ್ನು ಭರ್ತಿ ಮಾಡಲು ಈ ತನಕ 12 ಸಾವಿರ ಟನ್ ಗೇರುಬೀಜವನ್ನು ಖರೀದಿಸಿತ್ತು.

ಅಮೇರಿಕಾವಾದರೋ 1970–71 ರಲ್ಲಿ 23 ಸಾವಿರ ಟನ್ ಗೇರುಬೀಜ ಕೊಂಡಿದ್ದರೆ, ಈ ವರುಷ ಕೊಂಡುದು ಕೇವಲ 11000 ಟನ್.

ಪರಿಣಾಮವಾಗಿ ದೇಶದಲ್ಲಿ ಗೇರುಬೀಜ ದಾಸ್ತಾನು ಉಳಿದಿದೆ. ಕೈಗಾರಿಕೆಯಲ್ಲಿ ಬಿಕ್ಕಟ್ಟುಂಟಾದ ಪರಿಣಾಮವಾಗಿ ಭಾರತ ಸರಕಾರ ಇನ್ನಷ್ಟು ಗೇರುಬೀಜ ಕೊಳ್ಳುವಂತೆ ಸೋವಿಯೆತ್ ಸರಕಾರವನ್ನು ಕೇಳಿಕೊಂಡಿದ್ದು–ಈ ಸೂಚನೆಯನ್ನು ಸೋವಿಯೆತ್ ಯೂನಿಯನ್ ಒಪ್ಪಿದೆ ಎಂದು ವರದಿಯಾಗಿದೆ.

ಸಮಾಜವಾದಿ ಭಾರತದಲ್ಲಿ ಸಮೃದ್ಧ ಕರ್ನಾಟಕ ರಚಿಸೋಣ!

ಕರ್ನಾಟಕ ರಾಜ್ಯೋತ್ಸವ ದಿನದ ಶುಭಾಶಯ

ಕರ್ನಾಟಕ ರಾಜ್ಯೋತ್ಸವದ 19ನೇ ವರ್ಧಂತಿಯ ದಿನದಂದು ಎಲ್ಲ ಕನ್ನಡಿಗರಿಗೂ ಅರುಣ ಶುಭಾಶಯ ಕೋರುತ್ತದೆ. ನಾಡಿಗಾಗಿ ನುಡಿಗಾಗಿ ಶ್ರಮಿಸಿದ, ಹೋರಾಡಿದ ಎಲ್ಲರನ್ನೂ ಈ ಶುಭ ದಿನದಂದು ನಾವು ಸ್ಮರಿಸುತ್ತೇವೆ. ನಾಡಿನ ಭಾವೈಕ್ಯಕಾಗಿ ದುಡಿಸುವ, ಅದೇ ವೇಳೆ ಸಂಕುಚಿತ ಪ್ರಾಂತಾಭಿಮಾನ, ಭಾಷಾದುರಭಿಮಾನ, ಅನ್ಯಭಾಷಾಕ್ರಮಣಶೀಲ ಶಕ್ತಿಗಳ ವಿರುದ್ಧ ಮುಂದಕ್ಕೂ ಸ್ವರವೆತ್ತುವ ಪಣವನ್ನು ನಾವಿಂದು ತೊಡುತ್ತೇವೆ.

ಹರಿದು ಹಂಚಿಹೋಗಿದ್ದ ಕರ್ನಾಟಕ ಒಂದಾಗಿ 19 ವರುಷಗಳು ಕಳೆದುವು. ನಾಡಿನ ಬೆಳವಣಿಗೆಯ ಇತಿಹಾಸದಲ್ಲಿ ಇದೊಂದು ದೀರ್ಘಕಾಲವಲ್ಲವಾದರೂ ಕನ್ನಡಿಗರ ದೃಷ್ಟಿಯಲ್ಲಿ ಇದೊಂದು ಸಂದಿಗ್ಧವಾದ ಕಾಲಾವಧಿಯಾಗಿತ್ತು. ಹರಿದು ಹಂಚಿಹೋಗಿದ್ದ ರಾಜ್ಯ ಒಂದಾದಾಗ ಎಷ್ಟೋ ಗಂಭೀರ ಸಮಸ್ಯೆಗಳನ್ನು ಇದಿರಿಸಬೇಕಾಗಿತ್ತು. ಬೆಳವಣಿಗೆಯಲ್ಲಿ, ಆರ್ಥಿಕತೆಯಲ್ಲಿ, ಅಸಮಾನತೆ ಹಿಂದುಳಿದ, ಮುಂದರಿದ ಪ್ರದೇಶಗಳ ನಡುವೆ ತಾರತಮ್ಯ, ಪರಸ್ಪರ ಸಂದೇಹ, ಇದಕ್ಕೂ ಮಿಕ್ಕಿ ಆಳುವ ವರ್ಗದ ಅಸಡ್ಡೆ ಇವೆಲ್ಲವನ್ನೂ ಇದಿರಿಸಿ ರಾಜ್ಯ ಮುಂದರಿದಿದೆ; ಬೆಳೆಯಬೇಕಾದಷ್ಟು, ಸಮೃದ್ಧಿಯಾಗಬೇಕಾದಷ್ಟು ಆಗಿಲ್ಲ ಎಂಬುದನ್ನು ಒಪ್ಪುವಾಗಲೇ ಈ ಎಡರುತೊಡರುಗಳನ್ನು ಇದಿರಿಸಿ ಕನ್ನಡಿಗರು ತಮ್ಮ ಅಮೂಲ್ಯವಾದ ಶ್ರಮಶಕ್ತಿಯಿಂದ ಹೇರಳವಾದ ನೈಸರ್ಗಿಕ ಸಂಪತ್ತನ್ನು ಸಾಧ್ಯವಾದಷ್ಟು ಮಟ್ಟಿಗೆ ಉಪಯೋಗಿಸಿ ರಾಜ್ಯದ ಪ್ರಗತಿಗೆ ಅಮೂಲ್ಯವಾದ ಕೊಡುಗೆ ನೀಡಿದ್ದಾರೆ ಎಂಬುದನ್ನು ಮರೆಯುವಂತಿಲ್ಲ. ಹೊಲಗಳಲ್ಲಿ, ಕಾರ್ಖಾನೆಗಳಲ್ಲಿ, ಕಛೇರಿಗಳಲ್ಲಿ ದುಡಿಯುವ ಮಂದಿ ತಮ್ಮ ಬೆವರಿಳಿಸಿ ರಾಜ್ಯದ ಬೆಳವಣಿಗೆಗೆ ನೀಡಿದ ಕಾಣಿಕೆಯನ್ನು ಅಲಕ್ಷಿಸುವಂತಿಲ್ಲ.

ಏಕೆ ಬೆಳೆದಿಲ್ಲ

ಆದರೆ ರಾಜ್ಯ ಬೆಳೆಯಬೇಕಾದಷ್ಟು ಬೆಳೆದಿದೆಯೆ? ಅಭಿವೃದ್ಧಿ ಹೊಂದಬೇಕಾದಷ್ಟು ಹೊಂದಿದೆಯೆ? ಪ್ರಗತಿ ಸಾಧಿಸಬೇಕಾದಷ್ಟು ಸಾಧಿಸಿದೆಯೆ? ಎಂದು ಹೇಳುವಾಗ ಇಲ್ಲ ಎಂಬ ಉತ್ತರವನ್ನು ನಾವು ಕೊಡಬೇಕಾಗಿದೆ. ಇದಕ್ಕೆ ನಾಡಿನ ಜನರನ್ನು ದೂರಿ ಪ್ರಯೋಜನವಿಲ್ಲ.

ಕರ್ನಾಟಕ ಏಕೀಕರಣವಾದ ನಂತರವೂ ನಾಡಿಗೊಂದು ನಾಮಕರಣವಾಗಬೇಕಾದರೆ 17 ವರುಷಗಳು ಬೇಕಾದುವು. 1956ರಿಂದ 1972ರ ತನಕ ಅಧಿಕಾರದಲ್ಲಿದ್ದ ಪ್ರತಿಯೊಂದು ಮಂತ್ರಿಮಂಡಲವೂ ತನ್ನ ಸ್ಥಾನದ ಭದ್ರತೆ ತಮ್ಮವರ ಸ್ಥಾಪಿತ ಹಿತಾಸಕ್ತಿಗಳ ರಕ್ಷಣೆಗಳೇ ನಾಡಿನ ಹಿತಕ್ಕಿಂತ ಮೇಲು ಎಂದು ಭಾವಿಸಿಕೊಂಡಿತ್ತು. ಜನತೆಯ ಮೂಲಭೂತ ಹಿತಗಳ ಪ್ರಶ್ನೆ ಬಂದಾಗ ನೆಲ ಜಲಗಳ ರಕ್ಷಣೆಯ ಹುಯ್ಲೆಬ್ಬಿಸಿ ಜನರ ದೃಷ್ಟಿಗಳನ್ನು ಬೇರೆಡೆಗೆ ಸೆಳೆಯಿತು. ನಾಡಿನ ಹಿತವನ್ನು ಮರೆಯಿತು; ಭಾಷಾ ಬೆಳವಣಿಗೆಯನ್ನು ಅಲಕ್ಷಿಸಿತು.

1972ರ ನಂತರ ನಾವು ಈ ನೀತಿಯಲ್ಲಿ ಸ್ವಲ್ಪ ಬದಲಾವಣೆಯನ್ನು ಕಾಣುತ್ತೇವೆ. ನಾಡಿಗೆ ನಾಮಕರಣವಾಯಿತು; ಭಾಷೆಯನ್ನು ತಾಲೂಕು ಮಟ್ಟದ ಆಡಳಿತ ಭಾಷೆಯಾಗಿ ಸ್ವೀಕರಿಸಲಾಯಿತು; ನಾಡಿನ ರೈತರ ಶತಮಾನಗಳ ಕನಸಾದ ಭೂಸುಧಾರಣಾ ಕಾನೂನು ಜ್ಯಾರಿಯಾಯಿತು.

ನಮ್ಮ ಪಣ

ಆದರೆ ಇಷ್ಟರಲ್ಲೇ ನಾವು ತೃಪ್ತಿಯಾಗಿ ಕೂಡ್ರುವಂತಿಲ್ಲ. ಅದರಲ್ಲೂ ಇಂದು ದೇಶ ಎದಿರಿಸುತ್ತಿರುವ ಪರಿಸ್ಥಿತಿಯಲ್ಲಿ ಕನ್ನಡದ ಜನ ಕೋಟಿಯ ಹೊಣೆ ಹೆಚ್ಚಿದೆ. ಪ್ರಧಾನಿಯವರು ಮುಂದಿಟ್ಟ 20 ಅಂಶಗಳ ಕಾರ್ಯಕ್ರಮದ ಜ್ಯಾರಿಗೆ; ರೈತ ಕಾರ್ಮಿಕರ ಕೃಷಿ ಕೂಲಿಗಾರರ ಹಿತರಕ್ಷಣೆಗೆ; ವಿಛಿದ್ರಕಾರಿ ಶಕ್ತಿಗಳನ್ನು ಸೋಲಿಸಲಿಕ್ಕೆ, ಪ್ರತಿಗಾಮಿ ಮೂಲಗಳನ್ನು ಹಿಮ್ಮೆಟ್ಟಿಸಲಿಕ್ಕೆ, ಸಮಾಜವಾದೀ ಐಕ್ಯ ಭಾರತದಲ್ಲಿ ಸಮೃದ್ಧ ಕರ್ನಾಟಕವನ್ನು ಕಟ್ಟಲಿಕ್ಕೆ ಒಂದಾಗಿ ದುಡಿಯುವುದೇ ಇಂದು ಕರ್ನಾಟಕದ ಎಲ್ಲ ಪುರೋಗಾಮಿ ಜನವಿಭಾಗದ ಕರ್ತವ್ಯ. ಈ ಕರ್ತವ್ಯ ಈಡೇರಿಕೆಗೆ ಈ ವರುಷದ ರಾಜ್ಯೋತ್ಸವದ ದಿನದಂದು ಪ್ರತಿಜ್ಞೆಗೈಯ್ಯೋಣ.

ಕೊಡಗು ಜಿಲ್ಲೆಯಲ್ಲಿ ಯಶಸ್ವೀ ಫಾಸಿಸ್ಟ್ ವಿರೋಧಿ ಜಿಲ್ಲಾ ಸಮ್ಮೇಳನ

ಸುಮಾರು ಒಂದು ತಿಂಗಳ ಹಿಂದೆ ಅಸ್ತಿತ್ವಕ್ಕೆ ಬಂದ ಕಾಂಗ್ರೆಸ್, ಕಮ್ಯುನಿಸ್ಟ್ ಮತ್ತು ಇತರ ಪುರೋಗಾಮಿ ಸಂಘಟನೆಗಳನ್ನೊಳಗೊಂಡ ಕೊಡಗು ಜಿಲ್ಲಾ ಫಾಸಿಸ್ಟ್ ವಿರೋಧಿಗಳ ಕೂಟವು ಇದೇ ತಾ. 3ರಿಂದ ಆರಂಭಿಸಿ ಕೊಡಗಿನ 9 ಮುಖ್ಯ ಕೇಂದ್ರಗಳಲ್ಲಿ ಫಾಸಿಸ್ಟ್ ವಿರೋಧಿ ಪ್ರಚಾರ ಸಭೆಗಳನ್ನು ಜರುಗಿಸಿ ಕಳೆದ ತಾ. 21-10-75ರಂದು ಮಡಿಕೇರಿ ಪುರಭವನದಲ್ಲಿ ಯಶಸ್ವಿಯಾಗಿ ಜಿಲ್ಲಾ ಸಮ್ಮೇಳನವನ್ನು ಜರುಗಿಸಿ ಒಂದು ವಾರದ ಕಾರ್ಯಕ್ರಮವನ್ನು ಮುಕ್ತಾಯಗೊಳಿಸಿತು.

ಜಿಲ್ಲಾ ಸಮ್ಮೇಳನದ ಕಾರ್ಯಕ್ರಮವು ಕೊಡಗಿನ ಎಲ್ಲ ಭಾಗಗಳಿಂದ ಆಗಮಿಸಿದ್ದ 250ಕ್ಕೂ ಮಿಕ್ಕಿದ ಪ್ರತಿನಿಧಿಗಳು ಕಾಂಗ್ರೆಸ್, ಕಮ್ಯುನಿಸ್ಟ್ ಬಾವುಟಗಳನ್ನು ಹಿಡಿದು ಫಾಸಿಸ್ಟ್ ವಿರೋಧಿ ಘೋಷಣೆಗಳನ್ನು ಕೂಗುತ್ತಾ ಸಮ್ಮೇಳನ ನಡೆದ ನಗರ ಸಭಾಭವನಕ್ಕೆ ಪೂರ್ವಾಹ್ನ 11 ಗಂಟೆಗೆ ಆಗಮಿಸಿದರು. ಸಮ್ಮೇಳನದ ಅಧ್ಯಕ್ಷತೆಯನ್ನು ಶಾಸಕರೂ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರೂ ಆದ ಶ್ರೀ ಎ ಯು. ಬೆಳ್ಯಪ್ಪನವರು ವಹಿಸಿದ್ದರು.

ಡಾ| ಜಿ. ರಾಮಕೃಷ್ಣರಿಂದ ಉದ್ಘಾಟನೆ

ಆರಂಭದಲ್ಲಿ ಜಿಲ್ಲಾ ಕಮ್ಯುನಿಸ್ಟ್ ಪಾರ್ಟಿ ಕಾರ್ಯದರ್ಶಿ ಸಿ. ಬಿ. ಮಣ್ಣಯ್ಯನವರು ಸರ್ವರನ್ನು ಸ್ವಾಗತಿಸಿದರು. ಮುಖ್ಯಅತಿಥಿಗಳಾಗಿ ಬಂದು ಸಮ್ಮೇಳನವನ್ನು ಉದ್ಘಾಟಿಸಿದ ಬೆಂಗಳೂರು ನ್ಯಾಷನಲ್ ಕಾಲೇಜಿನ ಇಂಗ್ಲೀಷ್ ಅಧ್ಯಾಪಕರೂ, ಭಾರತ-ರಶ್ಯಾ ಸಾಂಸ್ಕೃತಿಕ ಸಂಘದ ರಾಜ್ಯ ಮಂಡಳಿಯ ಪ್ರಧಾನ ಕಾರ್ಯದರ್ಶಿಯೂ ಆದ ಡಾ| ಜಿ. ರಾಮಕೃಷ್ಣನವರನ್ನು ಸಭಿಕರಿಗೆ ಪರಿಚಯ ಮಾಡಿಕೊಟ್ಟರು. ಡಾ| ರಾಮಕೃಷ್ಣನವರು ಸುಮಾರು ಎರಡು ಗಂಟೆಗಳ ಕಾಲ ಫ್ಯಾಸಿಸಮಿನ ಹುಟ್ಟು ಬೆಳವಣಿಗೆ ಇಂದದರ ಮುಂದಾಳತ್ವವನ್ನು ಅಮೇರಿಕನ್ ಸಾಮ್ರಾಜ್ಯಶಾಹಿಯು ತನ್ನ ಕೈಯಲ್ಲಿಟ್ಟುಕೊಂಡು ಒಂದೊಂದೂ ರಾಷ್ಟ್ರದ ಒಳಾಡಳಿತದಲ್ಲಿ ಪ್ರವೇಶಿಸಿ ವಿಶೇಷವಾಗಿ ಅಲಿಪ್ತ ಬಣದ ರಾಷ್ಟ್ರಗಳಲ್ಲಿ ಅಸ್ಥಿರತೆ ಉಂಟುಮಾಡಿ ಕೊಲೆ, ದೌರ್ಜನ್ಯಗಳನ್ನೆಸಗಿ ಗುತ್ತಿಗೆ ಭಂಡವಾಳಶಾಹಿಗಳ ಪ್ರತಿಗಾಮಿ ಫಾಸಿಸ್ಟ್ ಶಕ್ತಿಗೆ ಅಧಿಕಾರವನ್ನು ಕೈವಶ ಮಾಡುತ್ತಿದೆಯೆಂಬುದನ್ನು ಚಿಲಿ, ಇಂಡೋನೇಷ್ಯ ವಿಯೆಟ್ನಾಂ ಮೊನ್ನೆ ಮೊನ್ನೆಯಾಗಿ ಬಾಂಗ್ಲಾದಲ್ಲಿ ನಡೆಸಿದ ಕಗ್ಗೊಲೆ ಮುಂತಾದ ಎಲ್ಲ ಘಟನೆಗಳನ್ನೂ ವಿಷದವಾಗಿ ವಿವರಿಸಿದರು. ಈ ಅಮೇರಿಕನ್ ಸಾಮ್ರಾಜ್ಯಶಾಹೀ ದುಷ್ಟ ಫಾಸಿಸ್ಟ್ ಶಕ್ತಿಯು ನಮ್ಮ ಭಾರತದೊಳಗಿನ ಪ್ರತಿಗಾಮಿಗಳನ್ನು ತನ್ನ ಪಂಚಮ ದಳವನ್ನಾಗಿ ಹೇಗೆ ಉಪಯೋಗಿಸಿಕೊಳ್ಳುತ್ತಿದೆ ಎಂಬುದನ್ನು 1969ರ ಲಾಗಾಯ್ತು ದೇಶದೊಳಗೆ ಈ ಪ್ರತಿಗಾಮಿ ಶಕ್ತಿಗಳು ನಡೆಸಿಕೊಂಡುಬಂದ ವಿದ್ಯಮಾನಗಳನ್ನು ಜೆ. ಪಿ.ಯವರ ಸಮಗ್ರಕ್ರಾಂತಿಯ ನಿಜ ಸ್ವರೂಪವನ್ನು ಉದಾಹರಿಸಿದರು. ಜೂನ್ 26ರಂದು ರಾಷ್ಟ್ರಪತಿಯವರು ಆಂತರಿಕ ತುರ್ತು ಪರಿಸ್ಥಿತಿಯನ್ನು ಘೋಷಿಸಿ ಮುಂಜಾಗ್ರತೆಯನ್ನು ವಹಿಸದಿರುತ್ತಿದ್ದರೆ ಜೂನ್ 29ರಂದು ಏನಾಗಬಹುದಿತ್ತು ಎಂಬುದನ್ನು ವಿವರಿಸಿದರು. ಫ್ಯಾಸಿಸಮ್ ತಲೆ ಎತ್ತದಂತೆ ಮಾಡಲು ಆರ್ಥಿಕ ಅಸಮಾನತೆಯನ್ನು ಹೋಗಲಾಡಿಸಿ ಜನಸಾಮಾನ್ಯರ ಮಧ್ಯೆ ತಾಂಡವಾಡುತ್ತಿರುವ ಬಡತನ, ನಿರುದ್ಯೋಗವನ್ನು ಹೋಗಲಾಡಿಸುವುದೊಂದೇ ಸರಿಯಾದ ಮಾರ್ಗ. ಈ ದಿಶೆಯಲ್ಲಿ 20 ಅಂಶಗಳ ಆರ್ಥಿಕ ಕಾರ್ಯಕ್ರಮ ಪ್ರಥಮ ಹೆಜ್ಜೆ ಎಂಬುದನ್ನು ಸ್ಪಷ್ಟಪಡಿಸಿ ಪುರೋಗಾಮಿ ವಿಶಾಲ ಜನತೆ ಇವನ್ನು ಕಾರ್ಯಗತಗೊಳಿಸಲು ಸಹಕರಿಸಬೇಕೆಂಬುದಾಗಿ ವಿನಂತಿಸಿಕೊಂಡರು.

ಶ್ರೀಯುತರುಗಳಾದ ಎ. ಯು. ಕಾವೇರಪ್ಪ, ಯು. ಜಿ. ಕುಟ್ಟಪ್ಪ, ಡಾಕ್ಟರ್ ನಾಣಯ್ಯ, ಕುಮಾರಿ ಭುವನೇಶ್ವರಿಯವರೂ ಮಾತಾಡಿದ ನಂತರ ಶಾಸಕರಾದ ಜಿ. ಕೆ. ಸುಬ್ಬಯ್ಯನವರು ಮುಂದಿಟ್ಟ ಪ್ರತಿಜ್ಞೆಯ ತೀರ್ಮಾನವನ್ನು ಸರ್ವಾನುಮತದಿಂದ ಒಪ್ಪಲಾಯಿತು. ಅಧ್ಯಕ್ಷರ ಭಾಷಣದ ನಂತರ ಶ್ರೀಮತಿ ಜಲಜಾಕ್ಷಿಯವರಿಂದ ವಂದನಾರ್ಪಣೆಯಾಗಿ ರಾಷ್ಟ್ರಗೀತೆಯೊಂದಿಗೆ ಪ್ರತಿನಿಧಿ ಸಮ್ಮೇಲನ ಮುಕ್ತಾಯವಾಯಿತು.

ಸಂಜೆ 6 ಗಂಟೆಗೆ ಮಾರ್ಕೆಟ್ ಮಠಾರದಲ್ಲಿ ಶ್ರೀ ಕೆ. ಡಿ. ಬೋಪಯ್ಯನವರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆಯೂ ಜರುಗಿತು: ಡಾ| ರಾಮಕೃಷ್ಣ ರಾಜ್ಯ ವಿದ್ಯಾರ್ಥಿ ಫೆಡರೇಶನ್ನಿನ ಅಧ್ಯಕ್ಷ ಶ್ರೀ ವಾಸುದೇವ ಮೋಹನ್ ಭಂಡಾರಿ, ಎ. ಯು. ಕಾವೇರಪ್ಪ ಇವರು ಭಾಷಣ ಮಾಡಿದರು.

— — — —

ತುಂಬೆಯಲ್ಲಿ ರೈತ ಕಾರ್ಮಿಕರ ಸಭೆ

ಕಳೆದ ತಾ. 19ರಂದು ತುಂಬೆ ಗ್ರಾಮದ ರೈತ ಮಜೂರರ ಸಭೆಯು ತುಂಬೆ ಮಂಜಿ ಶ್ರೀ ಕೊಗ್ಗಪ್ಪ ಬೆಳ್ಚಡ ಇವರ ಅಧ್ಯಕ್ಷತೆಯಲ್ಲಿ ತುಂಬೆ ಶಾಲೆಯ ಬಳಿಯಲ್ಲಿ ಜರಗಿತು.

ಸಭೆಯ ಉದ್ದೇಶವನ್ನು ತುಂಬೆ ಶಾಖೆ ಕಾರ್ಯದರ್ಶಿ ಶ್ರೀ ಟಿ. ಪೂವಪ್ಪ ಬಗೇರ ಇವರು ವಿವರಿಸಿದರು.

ಸಭಾಧ್ಯಕ್ಷರು ಮೂರ್ತೆದಾರರ ಸಮಸ್ಯೆಗಳನ್ನು ವಿವರಿಸಿದರು. ಸಭೆಯಲ್ಲಿ ಉಪಸ್ಥಿತರಿದ್ದ ಬಂಟ್ವಾಳ ತಾಲೂಕು ಕಮ್ಯುನಿಸ್ಟ್ ಪಾರ್ಟಿಯ ಕಾರ್ಯದರ್ಶಿ ಶ್ರೀ ಬಿ. ವಿಶ್ವನಾಥ ನಾಯ್ಕರು ಪ್ರಧಾನಿಯವರ 20 ಅಂಶಗಳ ಆರ್ಥಿಕ ಕಾರ್ಯಕ್ರಮಗಳನ್ನು ಸಭೆಗೆ ಮನದಟ್ಟಾಗುವಂತೆ ವಿವರಿಸಿ ಅದರ ಅನುಷ್ಠಾನಕ್ಕೆ ತೀವ್ರ ಕ್ರಮ ಕೈಗೊಳ್ಳಬೇಕೆಂದು ಹೇಳಿದರು. ಪಕ್ಷದ ನಿಧಿಗೆ ರೈತರೆಲ್ಲರೂ ಸಹಾಯ ನೀಡಬೇಕೆಂದು ಕೋರಿದರು.

ಕೊನೆಗೆ ಟಿ. ಪೂವಪ್ಪ ಬಂಗೇರ ಇವರ ಧನ್ಯವಾದದೊಂದಿಗೆ ಸಭೆಯು ಮುಕ್ತಾಯವಾಯಿತು.

ಬಿಜಾಪುರದಲ್ಲಿ ಅಕ್ಟೋಬರ ಕ್ರಾಂತಿ ದಿನಾಚರಣೆ

ಕಳೆದ ತಾ. 21ರಂದು ಸಂಜೆ 7 ಘಂಟೆಗೆ ಇಂಡೊ-ಜಿ. ಡಿ. ಆರ್. ಫ್ರೆಂಡ್‌ಶಿಫ್ ಅಸೋಶಿಯನ್ ಸರ್ವಸದಸ್ಯರ ಸಭೆಯು ಸೇರಿ ಶ್ರೀ ಎಲ್.ಕೆ. ಚಂಚಲಕರವರ ಅಧ್ಯಕ್ಷತೆಯಲ್ಲಿ ಅಕ್ಟೋಬರ ಕ್ರಾಂತಿಯ ದಿನವನ್ನು ಆಚರಿಸಲಾಯಿತು. ಪ್ರಧಾನ-ಕಾರ್ಯದರ್ಶಿ ಶ್ರೀ ವಿ. ಎಂ. ಕಟ್ಟಿ ವಕೀಲರು ಸ್ವಾಗತ ಕೋರಿದರು. ಕಾರ್ಯದರ್ಶಿ ಶ್ರೀ ಎಂ. ಜಿ. ಕವಲಗಿ ಮತ್ತು ಕಾರ್ಯಕಾರಿ ಮಂಡಳಿಯ ಸದಸ್ಯರಾದ ಶ್ರೀ ಕೆ. ಎಫ್. ಅಂಕಲಗಿ ವಕೀಲರು ಹಾಗೂ ಶ್ರೀ ಎಂ. ಜಿ. ಕುಲಕರ್ಣಿಯವರು ಮಾತನಾಡಿದರು. ಎಲ್ಲ ಸದಸ್ಯರು ಸಭೆಗೆ ಹಾಜರಿದ್ದುದ್ದು ತೀವ್ರ ಚಟುವಟಿಕೆಯ ಸಂಕೇತವಾಗಿದೆ. ಕೊನೆಯಲ್ಲಿ ಅ. ಭಾ. ವಿದ್ಯಾರ್ಥಿ ಫೆಡರೇಶನಿನ ಶ್ರೀ ಆರ್. ಎ. ಹಿಪ್ಪರಗಿಯವರು ಅಭಾರ ಮನ್ನಣೆ ಮಾಡಿದರು.

"ಅರುಣ"
ಪ್ರಗತಿಶೀಲ ಕನ್ನಡ ವಾರ ಪತ್ರಿಕೆ
ಮಂಗಳೂರು-1.
ಚಂದಾ ವಿವರ

ಒಂದು ವರುಷಕ್ಕೆ	ರೂ. 12-00
ಅರ್ಧ ವರುಷಕ್ಕೆ	ರೂ. 6-00

ಉತ್ತರ ಕೊರಿಯ-ಭಾರತ ಕಮ್ಯುನಿಸ್ಟ್ ಪಾರ್ಟಿಗಳ ಸಂಬಂಧ

ಉ. ಕೊರಿಯ ರಾಯಭಾರಿಯ ಶ್ಲಾಘನೆ

ಉ. ಕೊರಿಯದ ವರ್ಕರ್ಸ್ ಪಾರ್ಟಿಯ ಸ್ಥಾಪನೆಯ 30ನೇ ವರ್ಧಂತಿಯ ಸಲುವಾಗಿ ಭಾರತ ಕಮ್ಯುನಿಸ್ಟ್ ಪಾರ್ಟಿಯ ಕೇಂದ್ರ ಕಛೇರಿಯಲ್ಲಿ ಸೇರಿದ ಸಮಾರಂಭವೊಂದರಲ್ಲಿ ಭಾರತದಲ್ಲಿರುವ ಉ. ಕೊರಿಯದ ರಾಯಭಾರಿಯಾ ಸೊಂಗ್-ಜಿನ್ ಇವರು ಮಾತನಾಡುತ್ತಾ ಭಾರತ ಕಮ್ಯುನಿಸ್ಟ್ ಪಾರ್ಟಿ ಮತ್ತು ಕೊರಿಯನ್ ವರ್ಕರ್ಸ್ ಪಾರ್ಟಿಗಳ ನಡುವಣ ಸಂಬಂಧಗಳನ್ನು ಬಹುವಾಗಿ ಶ್ಲಾಘಿಸಿದರು ಅವರೆಂದರು.

"ಭಾರತ ಕಮ್ಯುನಿಸ್ಟ್ ಪಾರ್ಟಿಯು ಕೊರಿಯ ಮತ್ತು ಭಾರತಗಳ ಜನತೆಗಳ ನಡುವಣ ಸಂಬಂಧವನ್ನು ವೃದ್ಧಿಪಡಿಸಲು ಸತತವಾಗಿ ದುಡಿದಿದೆ.

"ಅಮೇರಿಕನ್ ಸಾಮ್ರಾಜ್ಯವಾದಿಗಳ ಆಕ್ರಮಣದ ವಿರುದ್ಧವಾಗಿಯೂ ಸಮಗ್ರ ಕೊರಿಯದ ಶಾಂತಯುತ ಏಕೀಕರಣಕ್ಕಾಗಿಯೂ ಕೊರಿಯದ ಜನತೆ ನಡೆಸುತ್ತಾ ಬಂದ ಹೋರಾಟಕ್ಕೆ ಭಾರತ ಕಮ್ಯುನಿಸ್ಟ್ ಪಾರ್ಟಿ ತನ್ನ ಐಕ್ಯವನ್ನು ವ್ಯಕ್ತಪಡಿಸಿದೆ. ಬೆಂಬಲವನ್ನು ನೀಡಿದೆ.

''ಸ್ವತಂತ್ರವಾದ ಏಕೀಕೃತ ಕೊರಿಯದ ರಚನೆಯ ನ್ಯಾಯವಾದ ನಮ್ಮ ಹೋರಾಟಕ್ಕೆ ಸದಾಕಾಲವೂ ಸಕ್ರಿಯವಾದ ಬೆಂಬಲ ನೀಡುತ್ತಿರುವ ಭಾರತ ಕಮ್ಯುನಿಸ್ಟ್ ಪಾರ್ಟಿಯ ಸರ್ವಸದಸ್ಯ ವೃಂದಕ್ಕೂ ನನ್ನ ಕೃತಜ್ಞತೆಗಳು.

''ತನ್ನ ಸದಸ್ಯ ವರ್ಗದಲ್ಲಿ ಸಂಘಟನಾತ್ಮಕವಾಗಿಯೂ ಐಕ್ಯವನ್ನುಂಟುಮಾಡುವ ಹೋರಾಟದಲ್ಲೂ; ದೇಶದ ಪುರೋಗಾಮಿ ಪ್ರಜಾಪ್ರಭುತ್ವವಾದೀ ಶಕ್ತಿಗಳೊಂದಿಗೆ ಐಕ್ಯವನ್ನು ಬಲಪಡಿಸುವಲ್ಲೂ ಭಾರತ ಕಮ್ಯುನಿಸ್ಟ್ ಪಾರ್ಟಿಯು ಭಾರೀ ವಿಜಯವನ್ನು ಗಳಿಸಿದೆ.

"ಸಾಮ್ರಾಜ್ಯವಾದಿಗಳ ಮತ್ತು ವಸಾಹತುವಾದಿಗಳ ವಿರುದ್ಧವಾದ ಹೋರಾಟದಲ್ಲೂ, ದೇಶದ ಸ್ವಾತಂತ್ರ್ಯ, ಸಾರ್ವಭೌಮತೆಗಳನ್ನು ರಕ್ಷಿಸುವಲ್ಲೂ, ಆರ್ಥಿಕ ಸ್ವಾವಲಂಬನೆ ಮತ್ತು ರಾಷ್ಟ್ರದ ಪುರೋಗಮನ ಸಾಧಿಸುವಲ್ಲೂ ಭಾರತ ಕಮ್ಯುನಿಸ್ಟ್ ಪಾರ್ಟಿಯೂ ಭಾರತದ ಜನತೆಯೂ ಮಹಾ ವಿಜಯಗಳನ್ನು ಸಾಧಿಸಿವೆ.''

ಕೊನೆಯಲ್ಲಿ ಹೀಗೆ ಈ ವಿಜಯವನ್ನು ಸಾಧಿಸಿದ ಭಾರತ ಕಮ್ಯುನಿಸ್ಟ್ ಪಾರ್ಟಿಗೂ ಭಾರತ ಜನತೆಗೂ ಅವರು ಶುಭಾಶಯಗಳನ್ನು ಅರ್ಪಿಸಿದರು. ದಿಯಗೋಗಾರ್ಶಿಯದಲ್ಲಿ ಸಾಮ್ರಾಜ್ಯವಾದಿಗಳು ಮಿಲಿಟರಿ ನೆಲೆ ಕಟ್ಟುವುದಕ್ಕೆ ತನ್ನ ರಾಷ್ಟ್ರ ಪೂರ್ಣ ವಿರೋಧವಿದೆಯೆಂದು ಹೇಳಿದರು. ಭಾರತ ಮತ್ತು ದ. ಕೊರಿಯಗಳ ಪಾರ್ಟಿಗಳ ನಡುವಣ ಸ್ನೇಹ ಸಂಬಂಧಗಳು ಮಾರ್ಕ್ಸ್‌ವಾದ ಲೆನಿನ್‌ವಾದದ, ಶ್ರಮಜೀವಿ ಅಂತರರಾಷ್ಟ್ರೀಯತೆಯ ಆಧಾರದಲ್ಲಿ ಇನ್ನಷ್ಟು ವೃದ್ಧಿಗೊಳ್ಳಲಿ ಎಂದು ಹಾರೈಸಿದರು.

ಸಭಾಧ್ಯಕ್ಷತೆಯನ್ನು ಶ್ರೀ ಭೂಪೇಶ ಗುಪ್ತ ಇವರು ವಹಿಸಿದ್ದು ಶ್ರೀ ರಾಜೇಶ್ವರ ರಾವ್, ಯಸ್. ಜಿ. ಸರ್ದೇಸಾಯಿ ಇವರು ಮಾತನಾಡಿ ಕೊರಿಯನ್ ವರ್ಕರ್ಸ್ ಪಾರ್ಟಿಗೆ ಶುಭಾಶಯವನ್ನು ಕೋರಿದರು.

ಆರ್. ಯಸ್. ಪಿ. ನಾಯಕತ್ವದಲ್ಲಿ ಪುನರಾಲೋಚನೆ

ಕ್ರಾಂತಿಕಾರೀ ಸೋಶಿಯಲಿಸ್ಟ್ ಪಾರ್ಟಿ (ಆರ್.ಯಸ್.ಪಿ.)ಯ ಕೇಂದ್ರ ಸಮಿತಿಯ ಸಭೆಯೊಂದು ಇತ್ತೀಚೆಗೆ ನಡೆಯಿತು. ಈ ಸಭೆಯ ತೀರ್ಮಾನಗಳನ್ನು ನೋಡುವಾಗ ಈ ಪಕ್ಷದ ನಾಯಕತ್ವದಲ್ಲಿ ಪುನರಾಲೋಚನೆ ಆರಂಭವಾಗಿದೆಯೆಂದು ತಿಳಿಯುತ್ತದೆ.

"ಕಾಂಗ್ರೆಸ್ ಪಕ್ಷವನ್ನು ಅಧಿಕಾರದಿಂದ ಹೊರ ಹಾಕುವ ಒಂದೇ ಕಾರಣಕ್ಕಾಗಿ ಪ್ರಜಾಪ್ರಭುತ್ವ ವಿರೋಧಿ ಮತ್ತು ಪ್ರತಿಗಾಮಿ ಶಕ್ತಿಗಳೊಂದಿಗೆ ತತ್ವಭ್ರಷ್ಟವಾದ ರಾಜಕೀಯ ಸಖ್ಯಕ್ಕೆ" ತಾನು ಪರವಾಗಿಲ್ಲವೆಂದು ಆರ್. ಯಸ್. ಪಿ.ಯ ಕೇಂದ್ರ ಸಮಿತಿಯ ನಿರ್ಣಯ ಹೇಳುತ್ತದೆ.

ಕಾಂಗ್ರೆಸ್ ಸರಕಾರದ ಸಮಗ್ರ ಆರ್ಥಿಕ ಕಾರ್ಯಕ್ರಮದಿಂದ ಈ 20 ಅಂಶಗಳ ಕಾರ್ಯಕ್ರಮವನ್ನು ಪ್ರತ್ಯೇಕವಾಗಿ ನೋಡಲು ಸಾಧ್ಯವಿಲ್ಲವೆಂದು ಆರ್.ಯಸ್.ಪಿ.ಯ ಕೇಂದ್ರ ಸಮಿತಿ ಹೇಳಿದರೂ ಭೂಹಿಡುವಳಿ ಪರಿಮಿತಿಯ ನಿರ್ಣಯ, ಮಿಗಿತೆಯ ಭೂಮಿಯನ್ನು ಕೃಷಿ ಕಾರ್ಮಿಕರಿಗೆ ವಿತರಣೆ ಎಲ್ಲ ಭೂರಹಿತರಿಗೆ ವಾಸ್ತವ್ಯಕ್ಕಾಗಿ ನಿವೇಶನಗಳ ಒದಗಿಸುವಿಕೆ. ಜೀತ ಪದ್ಧತಿಯ ನಿರ್ಮೂಲನ ಇವೇ ಮೊದಲಾದ ಅಂಶಗಳು ಪುರೋಗಾಮಿ ಜನವಿಭಾಗದ ಕೋರಿಕೆಯಾಗಿದೆ ಎಂದು ಒಪ್ಪಿದೆ.

ಆದುದರಿಂದ 20 ಅಂಶಗಳ ಕಾರ್ಯಕ್ರಮದಲ್ಲಿ ಸೂಚಿಸಲ್ಪಟ್ಟಿರುವ ಈ ಅಂಶಗಳನ್ನು ಒಡನೇ ಕಾರ್ಯರೂಪಕ್ಕೆ ತರುವಂತೆ ಮಾಡಲಿಕ್ಕೆ ಬೇಕಾಗಿ ಜನಸಮೂಹವನ್ನು ಜಾಗೃತಿಗೊಳಿಸಬೇಕೆಂದು ಕೇಂದ್ರ ಸಮಿತಿ ತನ್ನೆಲ್ಲ ಸದಸ್ಯರಿಗೂ ಕರೆ ಕೊಟ್ಟಿದೆ.

ಹೀಗೆ "ಪ್ರಜಾಪ್ರಭುತ್ವ ವಿರೋಧಿ ಮತ್ತು ಪ್ರತಿಗಾಮಿ ಶಕ್ತಿಗಳೊಂದಿಗೆ ತತ್ವಭ್ರಷ್ಟವಾದ ರಾಜಕೀಯ ಸಖ್ಯ ಮಾಡುವುದನ್ನು" ವಿರೋಧಿಸಿದ ಆರ್. ಯಸ್. ಪಿ. ಕೇಂದ್ರ ಸಮಿತಿಯ ನಿರ್ಣಯ ಸ್ವಾಗತಾರ್ಹವಿದೆ. ಆದರೆ ಕಾಂಗ್ರೆಸ್ ಕುರುಡು ದ್ವೇಷವನ್ನು ಅಡಗಿಸಿಡಲು ಇದು ಇನ್ನೊಂದು ವೇಷವೆಂದಾದರೆ ಮಾತ್ರ ಇಂತಹ ಆಟ ಆಡುವುದರಿಂದ ಪ್ರಯೋಜನವಾಗದು.

—o—o—

ದಾವಣಗೆರೆಯಲ್ಲಿ ನೂತನ 'ಸರ್ಕಲ್' ಉದ್ಘಾಟನೆ

ಕಳೆದ ತಾ. 25ರಂದು ಸಂಜೆ ಕೆ. ಟಿ. ಜಂಬಣ್ಣ ನಗರದ ನಿಟುವಳ್ಳಿ ರಸ್ತೆಯಲ್ಲಿ ಹೊಸದಾಗಿ ರಚಿಸಲ್ಪಟ್ಟ ಸರ್ಕಲ್‌ಗೆ ವಿಧಾನ ಪರಿಷತ್ತಿನ ಮಾಜಿ ಸದಸ್ಯರೂ ಹಿಂದಿನ ನಗರ ಸಭಾಧ್ಯಕ್ಷರೂ ಆದ ಶ್ರೀ ಶಿವಾನಂದ ಸ್ವಾಮಿ ಇವರ ತಂದೆಯವರಾದ 'ಅ. ಹಿ. ಶಿವಪ್ಪಯ್ಯ ಸರ್ಕಲ್' ಎಂದು ನಾಮಕರಣ ಮಾಡುವ ಸಮಾರಂಭವು ಜರಗಿತು. ಸಭಾಧ್ಯಕ್ಷತೆಯನ್ನು ನಗರಸಭಾಪತಿ ಶ್ರೀ ಪಂಪಾಪತಿ ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಕೆ. ಟಿ. ಜಂಬಣ್ಣನವರು ಆಗಮಿಸಿದ್ದರು.

ಆರಂಭದಲ್ಲಿ ಕಮ್ಯುನಿಸ್ಟ್ ನಗರಸಭಾ ಸದಸ್ಯ ಶ್ರೀ ಬುಡಾನ್ ಸಾಹೇಬ್ ಇವರು ತಾನು ರಚಿಸಿದ ಲಾವಣಿಯನ್ನು ಹಾಡಿದರು. ನಂತರ ನಗರಸಭಾ ಸದಸ್ಯ ವೈ. ಯು. ವೀರಣ್ಣನವರು ಸ್ವಾಗತ ಭಾಷಣ ಮಾಡಿದರು.

ನಗರಸಭಾಧ್ಯಕ್ಷರಾದ ಪಂಪಾಪತಿಯವರು ಮಾತನಾಡುತ್ತಾ 'ಈ ಹಿಂದೆ ಬಂದೂರು ಕ್ಯಾಂಪ್'' ಎಂದು ಕರೆಯಲ್ಪಡುತ್ತಿದ್ದ ಈ ಪ್ರದೇಶಕ್ಕೆ ಈಗ ಕೆ. ಟಿ. ಜಂಬಣ್ಣ ನಗರವೆಂದು ನಾಮಕರಣ ಮಾಡಲಾಗಿದೆ. ಶ್ರೀ ಕೆ. ಟಿ. ಜಂಬಣ್ಣನವರು ನಗರದ ಪ್ರಮುಖ ವ್ಯಕ್ತಿ ಎಂದರು.

ನಂತರ ಶ್ರೀ ಕೆ. ಟಿ. ಜಂಬಣ್ಣನವರು ಮಾತನಾಡಿ ತಾನು ಹಿಂದೆ ನಗರಸಭಾಧ್ಯಕ್ಷನಾಗಿದ್ದಾಗ ನನ್ನ ಕರ್ತವ್ಯವನ್ನು ಮಾಡಿದ್ದೆ. ದುಡಿಯುವವರಿಗಾಗಿ ಶ್ರಮಪಟ್ಟಿದ್ದೆ. ಇಂದು ಯಾರಿಗಾಗಿ ನಾನು ದುಡಿದಿದ್ದೆನೋ ಅವರೇ ಇಂದು ನಗರಸಭಾ ಆಡಳಿತ ನಡೆಸುತ್ತಿರುವುದನ್ನು ನೋಡಿ ನನಗೆ ತುಂಬಾ ಸಂತೋಷವಾಗಿದೆ. ಕಾರ್ಮಿಕರಿಗಾಗಿ ಜನತೆಗಾಗಿ ಶ್ರಮಿಸಿದ ಪಂಪಾಪತಿಯವರಂತಹ ಜನಪ್ರಿಯ ವ್ಯಕ್ತಿ ನಗರಸಭಾಧ್ಯಕ್ಷರಾಗಿರುವುದು ಸಂತೋಷದ ಸಂಗತಿ ಎಂದರು.

ನಂತರ ನಗರಸಭಾ ಕಮಿಷನರ್ ಶ್ರೀ ನರಸೇಕರ್, ನಗರಸಭಾ ಉಪಾಧ್ಯಕ್ಷ ಶ್ರೀ ದುರುಗಪ್ಪ ಇವರ ಭಾಷಣದ ನಂತರ ಚಲಚಿತ್ರ ಪ್ರದರ್ಶನದೊಂದಿಗೆ ಸಮಾರಂಭ ಮುಕ್ತಾಯವಾಯಿತು.

—o—o—

ನಿರಂಜನರ ವಿಮೋಚನೆ

ಕಾದಂಬರಿಯ ಭಾಷಾಂತರ ಪೋಲೆಂಡಿನಿಂದ ಪ್ರಕಟಣೆ

ರಶ್ಯನ್ ಭಾಷೆಯಲ್ಲಿ ಮುದ್ರಿಸಲ್ಪಟ್ಟು ಅಪಾರ ಜನಪ್ರಿಯತೆ ಗಳಿಸಿದ ನಿರಂಜನರ ಕಾದಂಬರಿ 'ವಿಮೋಚನೆ'ಯು ಇದೀಗ ಪೋಲೆಂಡಿನ ಭಾಷೆಯಾದ ಪೋಲಿಶ್ ಭಾಷೆಯಲ್ಲೂ ಪ್ರಕಟವಾಗಲಿದೆ ಎಂದು ತಿಳಿದು ಬರುತ್ತದೆ.

ಪಂಜಾಬದಲ್ಲಿ ಮಾರ್ಕ್ಸಿಸ್ಟ್ ಪಾರ್ಟಿಗೆ ಮತ್ತಷ್ಟು ರಾಜಿನಾಮೆ

ಪಂಜಾಬದಲ್ಲಿ ಮಾರ್ಕ್ಸಿಸ್ಟ್ ಪಾರ್ಟಿಗೆ ಇನ್ನಷ್ಟು ಸದಸ್ಯರು ರಾಜಿನಾಮೆಕೊಟ್ಟು ಭಾರತ ಕಮ್ಯುನಿಸ್ಟ್ ಪಾರ್ಟಿಯನ್ನು ಸೇರಿದ ವರದಿಗಳು ಬಂದಿವೆ.

ಫರೀದ್‌ಕೋಟೆ ಜಿಲ್ಲೆಯ ಮಾತಾತ್ ಮಂಡಿ ಎಂಬಲ್ಲಿನ ಮಾರ್ಕ್ಸಿಸ್ಟ್ ಪಾರ್ಟಿಯ ಇಡಿಯ ಘಟಕವೇ ವಿಸರ್ಜನೆಗೊಂಡು ಅದರ ಎಲ್ಲ ಸದಸ್ಯರೂ ಭಾರತ ಕಮ್ಯುನಿಸ್ಟ್ ಪಾರ್ಟಿಯನ್ನು ಸೇರುವ ನಿರ್ಧಾರ ಮಾಡಿದ್ದಾರೆ.

ಜಲಂಧರ್ ಜಿಲ್ಲೆಯ ಶಲಿಕೋಟೆ ಎಂಬಲ್ಲಿನ ಇನ್ನೊಬ್ಬ ಪ್ರಮುಖ ಮಾರ್ಕ್ಸಿಸ್ಟ್ ನಾಯಕ ಚರಣ್‌ಸಿಂಗ್ ಆ ಪಾರ್ಟಿಗೆ ರಾಜಿನಾಮೆ ನೀಡಿ ಭಾರತ ಕಮ್ಯುನಿಸ್ಟ್ ಪಾರ್ಟಿಯನ್ನು ಸೇರಿದ್ದಾರೆ.

(ಸಿ. ಯನ್. ಯಸ್.)

ಶ್ರೀ ಯಸ್. ಯಲ್. ಲೋಬೋ

ಸಾಮಾಜಿಕ ಸೇವಾಸಕ್ತರೂ, ಬಿ ಸಿ. ರೋಡಿನ ಮೋಡರ್ನ್ ಟೈಲ್ ವರ್ಕ್ಸ್‌ನ ಮಾಲಕರೂ, ಮಂಗಳೂರು ನಗರಸಭೆಯ ಮಾಜೀ ಸದಸ್ಯರೂ ಆದ ಶ್ರೀ ಯಸ್. ಯಲ್. ಲೋಬೋ ಇವರು ಇತ್ತೀಚೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಶ್ರೀ ಯಸ್. ಯಲ್. ಲೋಬೋರವರು ಉದಾರಿಯೂ ಸಜ್ಜನರೂ ಆಗಿದ್ದು ಮಂಗಳೂರು ನಗರಸಭಾ ಸದಸ್ಯನಾಗಿ, ಸ್ಟ್ಯಾಂಡಿಂಗ್ ಕಮಿಟಿ ಅಧ್ಯಕ್ಷನಾಗಿ ಹತ್ತು ಹಲವು ವಿಧಗಳಲ್ಲಿ ಸೇವೆ ಸಲ್ಲಿಸಿದ್ದರು. ಹಂಚಿನ ಕಾರ್ಖಾನೆಗಳಲ್ಲಿ ಕಾರ್ಮಿಕರೊಡನೆ ಉದಾರ ರೀತಿಯಿಂದ ವರ್ತಿಸುತ್ತಿದ್ದರು. ಇವರ ನಿಧನಕ್ಕೆ ಮೋಡರ್ನ್ ಟೈಲ್ ವರ್ಕ್ಸ್‌ನ ಕಾರ್ಮಿಕರು ತಮ್ಮ ಶೋಕವನ್ನು ವ್ಯಕ್ತಪಡಿಸಿದ್ದಾರೆ. ದಿ। ಯಸ್. ಯಲ್. ಲೋಬೋರವರ ಕುಟುಂಬದ ದುಃಖದಲ್ಲಿ ಅರುಣ ಸಹಭಾಗಿಯಾಗಿದೆ.

"ಕೋದಂಡ" ಇನ್ನಿಲ್ಲ

ನಿವೃತ್ತ ಶಿಕ್ಷಕರೂ, ಕನ್ನಡ ಸಾಹಿತ್ಯಕ್ಕೆ ತನ್ನದೇ ಆದ ಕಾಣಿಕೆ ನೀಡಿದವರೂ ಆದ ಶ್ರೀ ಜಿ. ವಾಮನ್ ಭಟ್ ಇವರು ನಿಧನರಾದ ದುಃಖಕರ ವಾರ್ತೆ ಬಂದಿದೆ.

ಮಂಗಳೂರಿನ ಕೆನರಾ ಹೈಸ್ಕೂಲಿನಲ್ಲಿ ಅಧ್ಯಾಪಕನಾಗಿ, ಬಳಿಕ ಕೆನರಾ ಹೈಸ್ಕೂಲಿನ ಮುಖ್ಯೋಪಾಧ್ಯಾಯನಾಗಿ ದುಡಿದ ಶ್ರೀ ಜಿ. ವಾಮನ ಭಟ್ಟರು ಸಾಹಿತ್ಯ ಕ್ಷೇತ್ರದಲ್ಲೂ ದುಡಿದಿದ್ದಾರೆ. 3ನೇ ದಶಕದಲ್ಲಿ ಮಂಗಳೂರಿನ ಕನ್ನಡ ಪ್ರೇಮಿಗಳಿಗೆ ಬರೆಹಗಾರರಿಗೆ ಆಗರವಾಗಿದ್ದ "ಮಿತ್ರ ಮಂಡಳಿ''ಯ ಸ್ಥಾಪಕರಲ್ಲಿ ಇವರೂ ಒಬ್ಬರು. ಆಗ ಮಿತ್ರ ಮಂಡಳಿ ಹಲವಾರು ಸಾಹಿತ್ಯ ಕೃತಿಗಳನ್ನು ಪ್ರಕಟಿಸಿತ್ತು.

ದಿ। ವಾಮನ ಭಟ್ಟರದು ಹರಿತವಾದ ಲೇಖನಿ. 'ಕೋದಂಡ'ನೆಂಬ ನಾಮಾಂಕಿತದಿಂದ ಹಲವಾರು ವ್ಯಂಗ್ಯ ಲೇಖನಗಳನ್ನು ಬರೆದವರು. 'ಕೋದಂಡ'ನ ಉಪನ್ಯಾಸಗಳು ಎಂಬ ಸಂಕಲನಗಳನ್ನು ಪ್ರಕಟಿಸಿದ್ದರು.

ದಿ। ವಾಮನ ಭಟ್ಟರ ನಿಧನದಿಂದ ಸಂತಾಪಕ್ಕೊಳಗಾದ ಅವರ ಕುಟುಂಬದೊಡನೆ 'ಅರುಣ' ತನ್ನ ಸಹತಾಪವನ್ನು ವ್ಯಕ್ತಪಡಿಸುತ್ತದೆ.

ಕೇರಳದ ಶಾಸನಸಭಾ ಕಾರ್ಯಕಲಾಪಗಳಲ್ಲಿ ಸುಧಾರಣೆ

ಶಾಸನಸಭಾ ಸದಸ್ಯರ ಸ್ವಾಗತಾರ್ಹ ಉಪಕ್ರಮ

ಸಂಯುಕ್ತ ರಂಗ ಸರಕಾರದ ಆಡಳಿತದಲ್ಲಿರುವ ಕೇರಳದಲ್ಲಿ ಈಗ ಇರುವುದು ನಾಲ್ಕನೇ ಶಾಸನ ಸಭೆ. ಐದು ವರುಷಗಳ ಪೂರ್ಣಾವಧಿಯನ್ನು ದಾಟಿದ ದಾಖಲೆ ಐಕ್ಯಕೇರಳದ 19ವರುಷಗಳ ಇತಿಹಾಸದಲ್ಲಿ ಈ ಶಾಸನಸಭೆಗೆ ಮಾತ್ರ. ಇಂತಹ ರಾಜಕೀಯ ಭದ್ರತೆಯನ್ನು ನೀಡುವ ಕೇರಳ ಶಾಸನಸಭೆಯನ್ನು ಅಭಿನಂದಿಸಲೇಬೇಕು.

ಶಾಸನಸಭೆಯು ಒಂದು ಸಂತೆಯಂತಿರಬೇಕೆ? ಅಥವಾ ರಾಜ್ಯದ ಭವಿಷತ್ತನ್ನು ನಿರ್ಮಿಸುವ ಇಂತಹ ಶಾಸನಸಭೆ ಒಂದು ಕಾರ್ಯಾಗಾರದಂತಿರಬೇಕೆ? ಎಂಬುದೇ ಮುಖ್ಯ ಪ್ರಶ್ನೆ. ಇಂತಹ ಸುಧಾರಣೆಯನ್ನು ಶಾಸಕರು ಸ್ವಾಗತಿಸುತ್ತಾರೆ. ಈ ಬಗ್ಗೆ ಶಾಸನ ಸಭಾ ಕಾರ್ಯಕಲಾಪಗಳಲ್ಲಿ ಸುಧಾರಣೆಯನ್ನು ತರಲಿಕ್ಕೆ ಮುಂದಿಟ್ಟ ಸೂಚನೆಗಳನ್ನು ಶಾಸನಸಭೆಯ ಐದನೇ ವರ್ಧಂತಿಯನ್ನು ಆಚರಿಸಲು ಸೇರಿದ ಶಾಸಕರ ಸಭೆಯಲ್ಲಿ ಹೃತ್ಪೂರ್ವಕವಾಗಿ ಸ್ವಾಗತಿಸಲಾಯಿತು. ಉಪಸಭಾಪತಿ ಆರ್. ಯಸ್. ಉನ್ನಿ ಇವರು ಅಧ್ಯಕ್ಷತೆ ವಹಿಸಿದ್ದರು.

ವಿಚಾರ ವಿನಿಮಯ

ಕಳೆದ 21ರಂದು ನಡೆದ ಐದನೇ ವರ್ಧಂತಿಯ ಅನೌಪಚಾರಿಕ ಸಭೆ ಶಾಸಕರಿಗೆ ವಿದಾಯ ಬಯಸುವ ಸಭೆಯಾಗಿರಲಿಲ್ಲ. ಏಕೆಂದರೆ ಈ ಶಾಸನ ಸಭೆಗೆ ಪಾರ್ಲಿಮೆಂಟು ಇನ್ನೂ ಆರು ತಿಂಗಳ ಜೀವದಾನ ಮಾಡಿದೆ. ಆದುದರಿಂದ ಶಾಸನಸಭಾ ಕಾರ್ಯಕಲಾಪಗಳ ಸುಧಾರಣೆಯ ಕುರಿತು ವಿಚಾರ ವಿನಿಮಯ ಮಾಡುವ ಸಭೆ ಇದಾಗಿತ್ತು.

ಹೀಗಾಗಿ ಶಾಸನ ಸಭೆಯ ಸಾಧನೆಗಳ ವಿವರವನ್ನು ಈ ಸಭೆ ಚರ್ಚಿಸುವ ಬದಲು ಐದು ವರುಷಗಳ ಕಾಲ ಬಾಳಿ ರಾಜ್ಯದ ಜನತೆಯ ಹಿತಗಳಿಗಾಗಿ ತಾವು ಮಾಡಿದ ಕಾನೂನು ಕಾಯಿದೆಗಳಿಗಾಗಿ ಶಾಸಕರು ತೃಪ್ತಿಪಟ್ಟರು.

ಈ ಕಾನೂನುಗಳಾದರೂ ಯಾವುವು? ಭೂಸಂಬಂಧವಾದ 15 ಶಿಕ್ಷಣದ ವಿಷಯವಾದ 18 ಸಾಮಾಜಿಕ ಸುಧಾರಣೆಯ 11; ಕಾರ್ಮಿಕ ರೈತರ ಏಳಿಗೆಗೆ ಸಂಬಂಧಪಟ್ಟ 8 ಕಾನೂನುಗಳು ಹಾಗೂ ರಾಜ್ಯದ ಸಂಪನ್ಮೂಲವನ್ನು ಹೆಚ್ಚಿಸುವಂತಹ ಇನ್ನೂ ಹತ್ತು ಹಲವು ಕಾಯಿದೆಗಳು.

ಚಿಕ್ಕಪುಟ್ಟ ಜಗಳಗಳು ದುರ್ನಡತೆಯ ವರ್ತನೆಗಳು, ಕೊಳಕು ಸಂಭವಗಳು ಶಾಸನ ಸಭಾಧಿವೇಶನದ ವೇಳೆ ನಡೆದಿಲ್ಲವೆ? ನಡೆದಿದ್ದುವು. ಆದರೆ ಇವನ್ನೇ ದೊಡ್ಡದು ಮಾಡಿ ಕೂಡ್ರುವಂತಿಲ್ಲ

ಕೆಲವು ಸಾಧನೆಗಳು

ಕೇರಳ ಶಾಸನ ಸಭೆ ತಂದಿರುವ ಎಲ್ಲ ಕಾನೂನುಗಳ ಸುಧಾರಣೆಗಳ ವಿವರಣೆ ನೀಡಬೇಕಿದ್ದರೆ 1972ರ ಭೂ ಸುಧಾರಣಾ ತಿದ್ದುಪಡಿ ಕಾನೂನು, ಇದರ ಜ್ಯಾರಿಗಾಗಿ ಗ್ರಾಮ ಮಟ್ಟದ ಸಮಿತಿಗಳು, ಪರಿಹಾರವಿಲ್ಲದೆ ಖಾಸಗಿ ಅರಣ್ಯಗಳ ರಾಷ್ಟ್ರೀಕರಣ; ಬ್ರಿಟಿಷ್ ಮಾಲಕತ್ವದಲ್ಲಿರುವ ಕನ್ನನ್ ದೇವನ್ ತೋಟಗಳ ಭೂಮಿಯನ್ನು ಪರಿಹಾರ ನೀಡದೆ ರಾಷ್ಟ್ರೀಕರಿಸಿದುದು; ಕೃಷಿ ಕಾರ್ಮಿಕರ ಹಿತರಕ್ಷಣಾ ಕಾನೂನು; ಮೋಟಾರ್ ಸಾರಿಗೆ ಕೆಲಸ ಕೆಲಸಗಾರರ ವೇತನ ಕಾನೂನು, ಗೇರು ಬೀಜ ಕಾರ್ಖಾನೆಗಳ ರಾಷ್ಟ್ರೀಕರಣ ಕಾಯಿದೆಗಳಲ್ಲದೆ ಕಾರ್ಮಿಕ ಕ್ಷೇಮಾಭಿವೃದ್ಧಿ ನಿಧಿ ಸ್ಥಾಪನೆ; ಗ್ರಾಮಾಂತರಗಳ ಜನರ ಋಣ ಪರಿಹಾರ, ಗಿರಿಜನರಿಂದ ಸಾಲಗಾರರು ವಶಪಡಿಸಿಕೊಂಡ ಭೂಮಿಯನ್ನು ಅವರಿಗೇ ಹಿಂದಿರುಗಿಸಿದ್ದು, ಎರಡು ಹೊಸ ಮತ್ತು ಒಂದು ಕೃಷಿ ವಿಶ್ವವಿದ್ಯಾನಿಲಯಗಳ ಸ್ಥಾಪನೆ; ವಿಶ್ವವಿದ್ಯಾನಿಲಯಗಳ ಸಿಂಡಿಕೇಟ್ ಮತ್ತು ಸೆನೇಟ್‌ಗಳಲ್ಲಿ ವಿದ್ಯಾರ್ಥಿ ಪ್ರತಿನಿಧಿಗಳಿಗೆ ಪ್ರಾತಿನಿಧ್ಯ – ಇವು ಕೆಲವು ಉದಾಹರಣೆಗಳು.

ಹೀಗೆ ಕಳೆದ 5ವರುಷಗಳ ಶಾಸನಸಭೆಯ ಅನುಭವದಿಂದ ಪ್ರಾಯೋಗಿಕ ಪಾಠಗಳನ್ನು ಕಲಿತುದರಿಂದಲೇ ಬ್ರಿಟಿಷ್ ಮಾದರಿಯ ಪಾರ್ಲಿಮೆಂಟರಿ ವಿಧಾನಗಳಿಗಿಂತ ಪ್ರತ್ಯೇಕವಾದ ವಿಧಾನಗಳನ್ನು ಅನುಸರಿಸಬೇಕೆಂಬ ಅಭಿಪ್ರಾಯ ಉಂಟಾದುದು ಸ್ವಾಭಾವಿಕ.

ಇದನ್ನೇ ಶಾಸಕಸಭೆಯ ಅಧ್ಯಕ್ಷತೆ ವಹಿಸಿದ್ದ ಶಾಸನಸಭಾ ಉಪಾಧ್ಯಕ್ಷರು ಹೇಳಿದ್ದು–ಅವರೆಂದರು ಇಂಗ್ಲೆಂಡಿನ ಹೌಸ್ ಆಫ್ ಕಾಮನ್ಸ್‌ನ ಕಾರ್ಯಕಲಾಪಗಳಿಂದ ಸ್ವಲ್ಪ ವ್ಯತ್ಯಯವಾದರೆ ಅದು ಪ್ರಜಾಪ್ರಭುತ್ವದಿಂದ ದೂರ ಸರಿದಂತೆ ಎಂದು ಭಾವಿಸುವವರಿದ್ದಾರೆ. ಆದುದರಿಂದ ಈ ಚಿಂತನೆಯನ್ನು ಕೈಬಿಡುವ ಕಾಲವೀಗ ಸನ್ನಿಹಿತವಾಗಿದೆ. ಅಮೇರಿಕಾ, ಸೋವಿಯೆತ್ ಯೂನಿಯನ್, ಫ್ರಾನ್ಸ್‌ಗಳ ಶಾಸನಸಭಾ ಕಾರ್ಯಕಲಾಪಗಳನ್ನು ಪರಿಶೀಲಿಸಿ ಅವುಗಳಲ್ಲಿ ಯೋಗ್ಯವಾದುದನ್ನು ಸ್ವೀಕರಿಸುವ ಕುರಿತು ನಾವು ಯೋಚಿಸಬೇಕು.

ಕಾನೂನುಗಳ ಪರಿಶೀಲನೆ

ಪ್ರತಿಯೊಂದು ಕಾನೂನು ಮುಂದೆ ಬಂದಾಗಲೂ ಅದರ ಪ್ರತಿಯೊಂದು ಪರಿಚ್ಛೇದವನ್ನು ಪರಿಶೀಲಿಸಲು, ಹಣಕಾಸಿನ ಬೇಡಿಕೆಗಳನ್ನು ವಿವರವಾಗಿ ಪರ್ಯಾಲೋಚಿಸಲು ಸ್ಥಾಯೀ ಸಮಿತಿಗಳಿರಬೇಕು ಎಂದು ಉಪ ಸಭಾಪತಿಗಳು ಹೇಳಿರುವುದು ಗಮನೀಯ. ಇದರಿಂದ ಹೆಚ್ಚು ಸಮಯ ಉಳಿದು ವಾದ ವಿವಾದಗಳು ಕಡಿಮೆಯಾಗುವುದಲ್ಲದೆ ಕಾನೂನುಗಳು ಅಂಗೀಕರಿಸಲ್ಪಡುವ ಮೊದಲು ಅವುಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಲು ಚರ್ಚೆಯಲ್ಲಿ ಪರಿಣಾಮಕಾರಿಯಾಗಿ ಭಾಗವಹಿಸಲು ಸದಸ್ಯರಿಗೆ ಅವಕಾಶವೊದಗುವುದು ಎಂದರು.

ಬೆಂಬಲ

ಈ ಸೂಚನೆಯನ್ನು ಈ ಚರ್ಚೆಯಲ್ಲಿ ಭಾಗವಹಿಸಿದ ಹಲವಾರು ಸದಸ್ಯರು ಒಪ್ಪಿದರು. ಈ ಸಾಮಾನ್ಯ ಅಭಿಪ್ರಾಯವನ್ನು ಒಪ್ಪಿದ ಮುಖ್ಯಮಂತ್ರಿ ಶ್ರೀ ಅಚ್ಯುತಮೆನನ್ ನಮ್ಮ ಶಾಸಕಾಂಗಗಳಲ್ಲಿ ಸ್ವಾತಂತ್ರ್ಯ ನಂತರವೂ ಬ್ರಿಟಿಸಿನ ಕಾಮನ್ಸ್ ಸಭೆಯ ವಿಧಾನಗಳಲ್ಲಿ ಕುರುಡಾಗಿ ಅನುಸರಿಸುವುದು ತಪ್ಪಾದೀತು ಎಂದರು. ಇದಕ್ಕೆ ಹಲವಾರು ಉದಾಹರಣೆಗಳನ್ನು ನೀಡಿ ಸ್ವಾತಂತ್ರ್ಯ ನಂತರದಲ್ಲೂ ಇದೇ ಆವೃತ್ತಿಯಾಗಿ ಬೆಳೆದುಬಂದಿದೆ. ಶಾಸನ ಸಭೆಯಲ್ಲಿದ್ದು ಒಮ್ಮೆ ತುಟಿಬಿಚ್ಚಿ ಮರುದಿನ ಪತ್ರಿಕೆಗಳಲ್ಲಿ ತಮ್ಮ ಹೆಸರು ಬರುವುದನ್ನು ಕಂಡಮಾತ್ರಕ್ಕೆ ತೃಪ್ತರಾಗುವವರಿದ್ದಾರೆ. ಈ ಪರಿಸ್ಥಿತಿಯಲ್ಲಿ ಬದಲಾವಣೆಬೇಕು. ಅದನ್ನು ಗಂಭೀರವಾಗಿ ಪರ್ಯಾಲೋಚಿಸಬೇಕು" ಎಂದೂ ಅಚ್ಯುತ ಮೆನನ್ ಹೇಳಿದರು.

ವಾರದಲ್ಲಿ ಏಳು ದಿನವೂ ಕೆಲಸ ನಡೆಸುವುದಕ್ಕೆ ಎಐಟಿಯುಸಿ ವಿರೋಧ-ಬೋನಸ್ ತುರ್ತು ಆಜ್ಞೆಗೆ ಸರ್ವರಿಂದಲೂ ಆಕ್ಷೇಪ

ಕೈಗಾರಿಕಾ ರಂಗದಲ್ಲಿ ಕಾರ್ಮಿಕರ ಮತ್ತು ಮಾಲಕರ ಪ್ರತಿನಿಧಿಗಳನ್ನೊಳಗೊಂಡ ರಾಷ್ಟ್ರೀಯ ಶೃಂಗ ಸಮಿತಿಯ ರಚನೆ ತುರ್ತು ಪರಿಸ್ಥಿತಿಯ ಪರಿಣಾಮಗಳಲ್ಲೊಂದು. ತುರ್ತು ಪರಿಸ್ಥಿತಿಯ ಹಿನ್ನಲೆಯಲ್ಲಿ ಉತ್ಪಾದನೆಯ ಹೆಚ್ಚಳ ಇಂದಿನ ಆದ್ಯ ಆವಶ್ಯಕತೆ. ಇದಕ್ಕೋಸ್ಕರ ಕೈಗಾರಿಕಾ ರಂಗದಲ್ಲಿ ಉದ್ಭವಿಸುವ ಸಮಸ್ಯೆಗಳನ್ನು ಪರಿಹರಿಸಿ, ಕೈಗಾರಿಕಾ ಸಂಬಂಧಗಳನ್ನು ಸಂಗಮಗೊಳಿಸುವುದೇ ಈ ಶೃಂಗ ಸಮಿತಿ ರಚನೆಯ ಉದ್ದೇಶ. ಬೇರೆ ಬೇರೆ ಮಾಲಕ ಸಂಘಗಳಿಗೆ ಸೇರಿದ 11 ಮಂದಿ ಮಾಲಕರ ಪ್ರತಿನಿಧಿಗಳೂ, ಎ.ಐ.ಟಿ.ಯು.ಸಿ, ಐ.ಎನ್.ಟಿ.ಯು.ಸಿ. ಮತ್ತು ಎಚ್.ಎಂ.ಎಸ್.ಗೆ ಸೇರಿದ 11 ಮಂದಿ ಟ್ರೇಡ್ ಯೂನಿಯನ್ ಪ್ರತಿನಿಧಿಗಳೂ ಇರುವ 22 ಜನರ ಸಮಿತಿ ಇದು. ಸರಕಾರದ ಕಡೆಯ ವೀಕ್ಷಕರಾಗಿ ಕೇಂದ್ರ ಕಾರ್ಮಿಕ ಸಚಿವರಿಗೂ ಇದರಲ್ಲೊಂದು ಸ್ಥಾನವಿದೆ.

ಉದ್ದೇಶಕ್ಕೆ ವಿರೋಧ

ಆದರೆ ಯಾವ ಉದ್ದೇಶಕ್ಕಾಗಿ ಈ ಶೃಂಗ ಸಮಿತಿ ಸ್ಥಾಪಿತವಾಯಿತೋ ಅದಿನ್ನೂ ಸಫಲವಾಗಿಲ್ಲ. ಇದೇ 18-10-75 ರಂದು ದೆಹಲಿಯಲ್ಲಿ ಸೇರಿದ ಸಮಿತಿಯ ನಾಲ್ಕನೇ ಸಭೆಯಲ್ಲಿ ಟ್ರೇಡ್ ಯೂನಿಯನ್ ಪ್ರತಿನಿಧಿಗಳು, ಮುಖ್ಯವಾಗಿ ಎ.ಐ.ಟಿ.ಯು.ಸಿ ಪ್ರತಿನಿಧಿಗಳು, ಈ ಪ್ರಶ್ನೆಯನ್ನೇ ಬಲವಾಗಿ ಎತ್ತಿದರು. ಇದು ಬೋನಸ್ ಸುಗ್ರೀವಾಜ್ಞೆ ಜಾರಿಯಾದ ನಂತರ ನಡೆದ ಶೃಂಗ ಸಮಿತಿಯ ಪ್ರಥಮ ಸಭೆ. ಸಮಿತಿಯ ಮುಂದೆ ಪ್ರಶ್ನೆಯನ್ನು ಚರ್ಚಿಸದೆ, ಸರಕಾರ ಏಕಪಕ್ಷೀಯವಾಗಿ ಬೋನಸ್ ಆಜ್ಞೆ ಹೊರಡಿಸಿದುದನ್ನು ಸಮಿತಿಯ ಎಲ್ಲ ಕಾರ್ಮಿಕ ಪ್ರತಿನಿಧಿಗಳೂ ಖಂಡತುಂಡವಾಗಿ ಖಂಡಿಸಿದರು. ಕಾರ್ಮಿಕ ವರ್ಗದ ಜೀವಾಳವಾದ ಇಂತಹ ಪ್ರಮುಖ ಪ್ರಶ್ನೆಯ ಕುರಿತು ನಿರ್ಧರಿಸುವಾಗ ಶೃಂಗ ಸಮಿತಿಯ ಅಸ್ತಿತ್ವವನ್ನೇ ಸರಕಾರ ಕಡೆಗಣಿಸಿದುದರ ಅರ್ಥವೇನು? ಸಮಿತಿಯ ಸ್ಥಾಪನೆಯ ಉದ್ದೇಶವೇನು? ಹೀಗೆ ಪ್ರಶ್ನಿಸಿದ ಕಾರ್ಮಿಕ ಪ್ರತಿನಿಧಿಗಳು ಬೋನಸ್ ಆಜ್ಞೆಯನ್ನು ಹಿಂತೆಗೆಯಬೇಕೆಂದು ಸರಕಾರವನ್ನು ಒತ್ತಾಯಿಸಿದರು. ಆದರೆ ಮಾಲಕರ ಪ್ರತಿನಿಧಿಗಳು ಮಾತ್ರ ಕೇಳಿಕೆಯನ್ನು ವಿರೋಧಿಸಿ ಆಜ್ಞೆಯನ್ನು ಸ್ವಾಗತಿಸಿದರು. ಪರಸ್ಪರ ವಿರೋಧವಾದ ಈ ಎರಡು ಅಭಿಪ್ರಾಯಗಳ ನಡುವೆ ಹೊಂದಾಣಿಕೆ ಸಾಧ್ಯವೇ ಇರಲಿಲ್ಲ.



ಲೇಖಕ: ಶ್ರೀ ಯಂ ಯಸ್. ಕೃಷ್ಣನ್

ಲಾಕೌಟು ಇತ್ಯಾದಿ ಪ್ರಶ್ನೆ

ಲಾಕೌಟು, ಲೇ ಆಫ್, ರಿಟ್ರೆಂಚ್‌ಮೆಂಟ್, ಫ್ಯಾಕ್ಟರಿ ಮುಚ್ಚುವುದು ಇವೇ ಮೊದಲಾದ ಪ್ರಶ್ನೆಗಳ ಕುರಿತು ಕೂಡ ಹೀಗೆಯೇ ನಡೆಯಿತು. ಇಂದು ಉತ್ತರ ಪ್ರದೇಶದ ಕಾನ್ಪುರ, ಪಶ್ಚಿಮ ಬಂಗಾಳ ಮುಂತಾದ ಕಡೆಗಳಲ್ಲಿ ಲಾಕೌಟು, ಲೇ ಆಫ್-ಇತ್ಯಾದಿಗಳು ತಡೆಯಿಲ್ಲದೆ ನಡೆಯುತ್ತಿವೆ. ಪಶ್ಚಿಮ ಬಂಗಾಳದಲ್ಲಿ 5000 ಕೆಲಸಗಾರರುಳ್ಳ ಎರಡು ಸೆರಾಮಿಕ್ ಫ್ಯಾಕ್ಟರಿಗಳು ಮುಚ್ಚುವುದರಲ್ಲಿವೆ. ಮೋಟಾರ್ ಕೈಗಾರಿಕೆಯಲ್ಲಿ ಅನೇಕ ಕೆಲಸಗಾರರನ್ನು ಮನೆಗೆ ಕಳುಹಿಸಲಾಗಿದೆ. ಸಂಬಂಧಪಟ್ಟ ಯೂನಿಯನಿನೊಂದಿಗೆ ಚರ್ಚಿಸದೆ ಲೇ ಆಫ್ ಮಾಡಕೂಡದೆಂದು ಸಮಿತಿಯ ಹಿಂದಿನ ಸಭೆಯಲ್ಲಿ ಸರ್ವಾನುಮತದ ತೀರ್ಮಾನವಾಗಿದ್ದರೂ, ಮಾಲಕರು ಅದನ್ನು ಕಡೆಗಣಿಸಿದ್ದಾರೆ. ಆದುದರಿಂದ ಈಗ ಇರುವ ಲೇ ಆಫ್‌ಗಳನ್ನು ಬಹಿಷ್ಕರಿಸಿ, ಇನ್ನು ಮುಂದೆ ಲೇ ಆಫ್‌ಗೆ ಒಂದು ತಿಂಗಳ ಪೂರ್ವ ಸೂಚನೆ ಮತ್ತು ಫ್ಯಾಕ್ಟರಿ ಮುಚ್ಚುವುದಕ್ಕೆ 3 ತಿಂಗಳುಗಳ ಪೂರ್ವ ಸೂಚನೆ ನೀಡಬೇಕೆಂಬ ಒಂದು ಸುಗ್ರೀವಾಜ್ಞೆಯನ್ನು ತರಬೇಕೆಂದು ಟ್ರೇಡ್ ಯೂನಿಯನ್ ಪ್ರತಿನಿಧಿಗಳು ಸರಕಾರಕ್ಕೆ ಸೂಚಿಸಿದರು.

ಮಾಲಕರ ಪ್ರತಿನಿಧಿಗಳು ಇದನ್ನು ವಿರೋಧಿಸಿದರೆಂದು ಪ್ರತ್ಯೇಕ ಹೇಳಬೇಕಾಗಿಲ್ಲ. ಕಳೆದ ತೀರ್ಮಾನದ ತರುವಾಯ ಲೇ ಆಫ್ ಮೊದಲಾದವುಗಳು ನಡದೇ ಇಲ್ಲವೆಂದು ಕೂಡ ಅವರು ಸಾಧಿಸತೊಡಗಿದರು.

(8ನೇ ಪುಟ ನೋಡಿರಿ)

ದಾವಣಗೆರೆ ನಗರಸಭಾ ಸಪ್ತಾಹ ಉದ್ಘಾಟನೆ

ತಾ. 19ರಿಂದ 26ರ ವರೆಗೆ ನಡೆಯುತ್ತಿರುವ ದಾವಣಗೆರೆ ನಗರಸಭಾ ಸಪ್ತಾಹವನ್ನು ನಗರಾಧ್ಯಕ್ಷರಾದ ಶ್ರೀ ಪಂಪಾಪತಿ ಇವರು ನಗರಸಭಾ ಭವನದ ಆವರಣದಲ್ಲಿ ಉದ್ಘಾಟನೆ ಮಾಡಿದರು. ಶ್ರೀ ಪಂಪಾಪತಿ ಇವರು ಮಾತನಾಡುತ್ತಾ ದಾವಣಗೆರೆ ನಗರವನ್ನು ಸುಂದರ ನಗರವನ್ನಾಗಿ ಮಾಡಲು ನಾವು ಈಗಾಗಲೇ ನಗರದಲ್ಲಿ ಒಟ್ಟು ಎರಡೂವರೆ ಸಾವಿರ ಸಸಿಗಳನ್ನು ನೆಟ್ಟಿದ್ದೇವೆ. ಇನ್ನೂ ಒಂದು ಸಾವಿರ ಸಸಿಗಳನ್ನು ನೆಡುವ ಯೋಜನೆ ಹಾಕಿಕೊಂಡಿದ್ದೇವೆ ಎಂದರು. ಇವುಗಳನ್ನು ಕಾಪಾಡುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯ. ಅಲ್ಲದೆ ನಗರದಲ್ಲಿರುವ ಉದ್ಯಾನಗಳಲ್ಲಿ ನಾವು ಕಷ್ಟಪಟ್ಟು ಹೂವುಗಳನ್ನು ಬೆಳೆಸುತ್ತೇವೆ. ಆದರೆ ಕೇವಲ ನಾಲ್ಕಾರು ಜನ ಬೆಳಗಿನ ಜಾವ ಬಂದು ಹೂಗಳನ್ನು ಕೀಳುತ್ತಾರೆ ಇದು ಸರಿಯಲ್ಲ. ಸಾರ್ವಜನಿಕರು ಹೂಗಳನ್ನು ನೋಡಿ ಆನಂದಿಸಬೇಕೆ ಹೊರತು ಕೀಳಬಾರದು. ಹೂಗಳನ್ನು ಕೀಳುವ ಹಕ್ಕು ನಮಗಿಲ್ಲ ಎಂದರು. ಅಲ್ಲದೆ ನಗರದ ಹಿಂದುಳಿದ ಕಡೆ ಇನ್ನೂ ನೀರಿನ ಕೊರತೆ ಇದೆ. ಹೀಗಿರುವಾಗ ನಗರದ ಕೆಲವು ಜನ ನೀರನ್ನು ಪೋಲು ಮಾಡುತ್ತಾರೆ. ಇದು ಸಲ್ಲದು ಎಂದರು. ನಗರದ ಆದಾಯ ಹೆಚ್ಚಿದರೆ ಮಾತ್ರ ನಾಗರಿಕರಿಗೆ ಸೌಕರ್ಯ ಹೆಚ್ಚಿಸಬಹುದು. ಆದ್ದರಿಂದ ನಗರದ ನಿವಾಸಿಗಳು ಕಂದಾಯ ಕಟ್ಟುವುದರಲ್ಲಿ ವಿಳಂಬ ಮಾಡಬಾರದು ಎಂದು ನುಡಿದರು. ಈಗ ನಮ್ಮ ನಗರಸಭೆಗೆ ತಿಂಗಳಿಗೆ ಮೂರುವರೆ ಲಕ್ಷ ರೂ. ವರಮಾನ ಬರುತ್ತದೆ. ಕೆಲವು ಜನ ನಗರಸಭೆಯ ಸಿಬ್ಬಂದಿಗಳಿಗೆ ಕಣ್ಣಿಗೆ ಮಣ್ಣೆರಚಿ ಆಕ್ರಾಯಿ ಕಟ್ಟಲು ಮೋಸ ಮಾಡುತ್ತಾರೆ. ನಮ್ಮ ಸಿಬ್ಬಂದಿಯು ಜನತೆಯಿಂದ ತಪ್ಪಿಸಿಕೊಂಡರೆ ನಗರದ ನಾಗರಿಕರಿಂದ ತಪ್ಪಿಸಿಕೊಳ್ಳಲಾರರು ಈ ಎಲ್ಲಾ ಕಾರ್ಯಗಳಲ್ಲೂ ನಗರಸಭೆಯ ಸಿಬ್ಬಂದಿಯೊಂದಿಗೆ ನಾಗರಿಕರು ಸಹಕರಿಸಬೇಕು ಎಂದು ವಿನಂತಿಸಿದರು.

ನಗರದ ಧ. ರಾ. ಮು. ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಬಿ. ಜಿ. ನಾಗರಾಜ್ ಇವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ನಗರಸಭಾ ಸದಸ್ಯರಾದ ಶ್ರೀ ವೈ. ಎಂ. ವೀರಣ್ಣನವರು ಸ್ವಾಗತಿಸಿದರು. ಕೊನೆಯಲ್ಲಿ ನಗರಸಭಾ ಕಮೀಷನರ್ ಶ್ರೀ ನರಸೆಕರ್ ಇವರು ವಂದಿಸಿದರು. ಮನರಂಜನೆಗಾಗಿ ನಗರದ ಶ್ರೀ ಶಾರದ ಪಾರ್ಟಿಯವರ ಸಂಗೀತ ಕಾರ್ಯಕ್ರಮವಿತ್ತು.

—o—o—

‘ವೈಲಾರ್’ ನಿಧನ

ವೈಲಾರ ರಾಮ ವರ್ಮ ಕೇರಳದ ಸುಪ್ರಸಿದ್ಧ ಕವಿ. ಇವರು ಚಲಚಿತ್ರಗಳಿಗೆ ನಾಟಕಗಳಿಗೆ ಬರೆದ ಹಾಡುಗಳು ಅಸಂಖ್ಯಾತ-‘ವೈಲಾರ’ ಎಂದೇ ಪ್ರಸಿದ್ಧರಾದ ಇವರು ಇತ್ತೀಚೆಗೆ ನಿಧನ ಹೊಂದಿದರು.

ದಿ। ವೈಲಾರ್ ಪುರೋಗಾಮಿ ಚಳವಳಿಯಲ್ಲೂ ಭಾಗವಹಿಸುತ್ತಿದ್ದರು. ಅವರು ಕ್ರಾಂತಿಯ ಕವಿಗಳಾಗಿದ್ದರು. ಕೆ. ಪಿ. ಎ. ಸಿ.ಯ ನಾಟಕಗಳಿಗೆ ಹಾಡನ್ನು ರಚಿಸುತ್ತಿದ್ದವರು ಇವರೇ.

ಇವರ ನಿಧನದಿಂದ ಕೇರಳದ ಕಾವ್ಯ ಪ್ರಪಂಚಕ್ಕೆ, ಚಲಚಿತ್ರ, ನಾಟಕ ಲೋಕಕ್ಕೆ ತುಂಬಾ ನಷ್ಟವಾಗಿದೆ. ಇವರ ನಿಧನಕ್ಕಾಗಿ ಭಾರತ ಕಮ್ಯುನಿಸ್ಟ್ ಪಾರ್ಟಿಯ ಕೇಂದ್ರ ಸೆಕ್ರಿಟೇರಿಯೇಟ್ ದುಃಖವನ್ನು ವ್ಯಕ್ತಪಡಿಸಿದೆ.

ಶ್ರೀ ವಾದಿರಾಜರಿಂದ ಕೊಂಕಣಿ ಚಿತ್ರದ ತಯಾರಿಕೆ

ರಾಷ್ಟ್ರಾಧ್ಯಕ್ಷರ ಪ್ರಶಸ್ತಿ ಗಳಿಸಿದ ನಂದಾದೀಪ, ಅಂತರರಾಷ್ಟ್ರೀಯ ಖ್ಯಾತಿ ಗಳಿಸಿದ ನಾಂದಿ, ರಾಜ್ಯ ಪ್ರಶಸ್ತಿ ಪಡೆದ ನಮ್ಮ ಮಕ್ಕಳು ಇತ್ಯಾದಿ ಕನ್ನಡ ಚಿತ್ರ ನಿರ್ಮಾಪಕ ಶ್ರೀ ವಾದಿರಾಜ ಇವರು ಪರಮೇಶ್ವರಿ ಪಿಕ್ಚರ್ಸ್ ಲಾಂಛನದಡಿಯಲ್ಲಿ ಕೊಂಕಣಿ ಚಿತ್ರವೊಂದನ್ನು ತಯಾರಿಸಲಿರುವರು. ಕಳೆದ ತಾ. 30ರಂದು ಈ ಕುರಿತು ಮಂಗಳೂರಿನಲ್ಲಿ ಪತ್ರಿಕಾಕರ್ತರಿಗೆ ವಿವರಿಸಿದ ಶ್ರೀ ವಾದಿರಾಜ್ ಚಲನಚಿತ್ರಗಳು ಜನತೆಗೊಂದು ಸಂದೇಶ ನೀಡಬೇಕೆಂಬ ಗುರಿಯನ್ನು ಇಟ್ಟುಕೊಂಡವ ತಾನು. ಅದರಲ್ಲಿ ಸಿಹಿ ಕಹಿ ಅನುಭವಗಳೆರಡೂ ತನಗಾಗಿವೆ. ಡಿಸೆಂಬರ ತಿಂಗಳ ಕೊನೆಯೊಳಗೆ ತಯಾರಾಗಲಿರುವ ಈ ಕೊಂಕಣಿ ಚಿತ್ರ ‘ಎಂದರಿಂದೋ ಮಂದಾಳ್’ ಎಂಬ ತಮಿಳು ನಾಟಕದ ಸ್ಫೂರ್ತಿ ಪಡೆದಿದೆ. ಮಹಾ ವಂಚಕ ನ್ಯಾಯವಾದಿಯ ಅನ್ಯಾಯಗಳನ್ನು ಬಯಲಿಗೆಳೆಯಲು ಹೋರಾಡುವ ಚಿಕ್ಕ ಬಾಲಕನೊಬ್ಬನ ಸುತ್ತ ಹೆಣೆದಿರುವ ಈ ಕತೆಗೆ ‘ಪ್ರಭಾತ’ ಪತ್ರಿಕೆಯ ಸಂಪಾದಕರೂ ಹಲವಾರು ಕನ್ನಡ, ಕೊಂಕಣಿ ನಾಟಕಗಳನ್ನು ಬರೆದವರೂ ದಿಗ್ದರ್ಶಿಸಿದವರೂ ಆದ ಶ್ರೀ ಕುಡ್ಪಿ ವಾಸುದೇವ ಶೆಣೈಯವರು ಸಂಭಾಷಣೆಯನ್ನು ಬರೆಯುವರು ಎಂದರು.

ಆರಂಭದಲ್ಲಿ ಶ್ರೀ ನಾಗರಾಜ್ ಇವರು ಸ್ವಾಗತಿಸಿದ ನಂತರ ಪ್ರೆಸ್ ಕ್ಲಬ್‌ನ ಕಾರ್ಯದರ್ಶಿ ಶ್ರೀ ಕೆ. ಯಸ್. ಉಪಾಧ್ಯಾಯರು ಅತಿಥಿಗಳ ಪರಿಚಯ ಮಾಡಿಕೊಟ್ಟರು. ಶ್ರೀ ವಾದಿರಾಜರ ತಂದೆ ದಿ। ಯಸ್. ಯು. ಪಣಿಯಾಡಿಯವರ ವ್ಯಕ್ತಿತ್ವ ಹಾಗೂ ಎಳೆಯ ವಾದಿರಾಜರಲ್ಲಿ ಅಡಗಿದ್ದ ಕಲಾ ಪ್ರೌಢಿಮೆಗಳನ್ನು ಶ್ರೀ ಎಂ. ವಿ. ಹೆಗ್ಡೆಯವರು ಸ್ಮರಿಸಿದರು. ಕುಡ್ಪಿ ವಾಸುದೇವ ಶೆಣೈಯವರು ಮಾತನಾಡಿ ಈ ಕಥಾವಸ್ತು ಒಂದು ಉತ್ತಮ ಸಂದೇಶವನ್ನು ನೀಡುತ್ತಿದೆಯೆಂದೂ ಈ ಚಿತ್ರ ಕತೆಯನ್ನು ಓದಿದಾಗ ದೊಸ್ತೋವಸ್ಕಿಯ ‘ಕ್ರೈಮ್ ಎಂಡ್ ಪನಿಶ್‌ಮೆಂಟ್’ ಕಾದಂಬರಿಯು ನೆನಪಾಗುತ್ತಿದೆಯೆಂದೂ ಹೇಳಿದರು.

ಕೇರಳದಲ್ಲಿ 22 ಹೊಸ ‘ಮಿನಿ’ ಕೈಗಾರಿಕಾ ಎಸ್ಟೇಟ್‌ಗಳು

ಕೇರಳ ಸರಕಾರದ ಬೃಹತ್ ಔದ್ಯೋಗೀಕರಣ ಯೋಜನೆಯ ಫಲವಾಗಿ 11 ಜಿಲ್ಲೆಗಳಲ್ಲಿ ಇನ್ನೂ 22 ಹೊಸ ಕೈಗಾರಿಕಾ ಎಸ್ಟೇಟ್‌ಗಳು ಸದ್ಯದಲ್ಲೇ ಸ್ಥಾಪನೆಗೊಳ್ಳಲಿವೆ.

ನವೆಂಬರ ತಾ. 6ರಂದು ಈ ಕೈಗಾರಿಕಾ ಎಸ್ಟೇಟ್‌ಗಳಿಗೆ ಅಸ್ತಿಭಾರ ಹಾಕಲಾಗುವುದೆಂದೂ ಮುಂದಿನ ಜನವರಿಯೊಳಗೆ ಅವು ಉದ್ಘಾಟಿಸಲ್ಪಡುವವೆಂದೂ ಕೈಗಾರಿಕಾ ಸಚಿವ ಶ್ರೀ ಟಿ. ವಿ. ಥೋಮಸ್ ಹೇಳಿದ್ದಾರೆ. ಕಳೆದ ಅಕ್ಟೋಬರ 3ರಂದು ಇಂತಹ 11 ಕೈಗಾರಿಕಾ ಎಸ್ಟೇಟ್‌ಗಳಿಗೆ ಅಸ್ತಿಭಾರ ಹಾಕಿದ್ದು ಅವುಗಳ ರಚನೆ ಉತ್ತಮ ರೀತಿಯಿಂದ ನಡೆಯುತ್ತಿರುವುದಕ್ಕೆ ಶ್ರೀ ಥೋಮಸ್ ತನ್ನ ತೃಪ್ತಿಯನ್ನು ವ್ಯಕ್ತಪಡಿಸಿದ್ದಾರೆ. (ಸಿ. ಯನ್. ಯಸ್.)

ಕರೂರ್ ಕಾರ್ಮಿಕರಿಂದ ತುರ್ತು ಪರಿಸ್ಥಿತಿಗೆ ಬೆಂಬಲ

ಕರೂರ ಸದರಾನ್ ಅಜಬೆಸ್ಟಸ್ ಸಿಮೆಂಟ್ ಕಾರ್ಮಿಕರ ಸಂಘದ ವಿಸ್ತೃತ ಕಾರ್ಯಕಾರಿ ಸಮಿತಿಯ ಸಭೆಯು ಕಳೆದ ತಾ. 19ರಂದು ಸಂಜೆ 5 ಗಂಟೆಗೆ ಸಂಘದ ಆಫೀಸಿನಲ್ಲಿ ಸಭೆ ಸೇರಿತ್ತು. ಸಂಘದ ಉಪಾಧ್ಯಕ್ಷರಾದ ಶ್ರೀ ರುದ್ರಪ್ಪ ಮೊಟೆಬೆನ್ನೂರ ಇವರು ಅಧ್ಯಕ್ಷತೆ ವಹಿಸಿದ್ದರು. ಸಭೆಯಲ್ಲಿ ಸಂಘದ ಕಾರ್ಯದರ್ಶಿ ಶ್ರೀ ಎಲಿಗಾರ ಮಾಲತೇಶ ಇವರು ಕಳೆದ 3 ತಿಂಗಳ ಸಂಘದ ಚಟುವಟಿಕೆಗಳ ಬಗ್ಗೆ ವರದಿ ಮಾಡಿದರು ಮತ್ತು ತಮ್ಮ ಜವಾಬ್ದಾರಿಯನ್ನು ವಹಿಸುವಲ್ಲಿ ತಮ್ಮಿಂದಾದ ತಪ್ಪಿಗೆ ವಿಷಾದ ವ್ಯಕ್ತಪಡಿಸಿ ಮುಂದೆ ಈ ತೆರನಾದ ತಪ್ಪುಗಳಿಗೆ ಅವಕಾಶ ಕೊಡುವುದಿಲ್ಲವೆಂದು ಸಭೆಗೆ ಭರವಸೆ ವ್ಯಕ್ತಪಡಿಸಿದರು.

ಅನೇಕ ಸದಸ್ಯರು ಕಂಪೆನಿಯಲ್ಲಿ ಕೆಲಸ ಮಾಡುವ ಸಂರಕ್ಷಿತಾ ಸಲಕರಣೆ ಕೊಡದಿರುವ ಬಗ್ಗೆ ಸಭೆಯ ಗಮನಕ್ಕೆ ತಂದರು. ಸಂಘಟನೆಯನ್ನು ಮತ್ತಷ್ಟು ಬಲಪಡಿಸುವಲ್ಲಿ ಚರ್ಚೆಯಾಗಿ ಕಾರ್ಮಿಕರಿಗಾದ ತೊಂದರೆಗಳಿಗೆ ಸಂಘದ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕೆಂದು ಅಭಿಪ್ರಾಯ ಪಡಲಾಯಿತಲ್ಲದೆ ಸಂಘಟನೆಯನ್ನು ಬಲಪಡಿಸುವಲ್ಲಿ ಎಲ್ಲ ಕಾರ್ಮಿಕರು ಸಹಕರಿಸಬೇಕೆನ್ನುವ, ತುರ್ತು ಪರಿಸ್ಥಿತಿ ಘೋಷಣೆಯನ್ನೂ 20 ಅಂಶಗಳ ಕಾರ್ಯಕ್ರಮಗಳಿಗೆ ಕಾರ್ಮಿಕರ ಬೆಂಬಲವನ್ನು ಸೂಚಿಸುವ ನಿರ್ಣಯವನ್ನು ಅನುಮೋದಿತು.

ನಂತರ ಕಾರ್ಯದರ್ಶಿಯವರ ಅಭಾರ ಮನ್ನಣೆಯೊಡನೆ ಸಭೆ ಮುಕ್ತಾಯವಾಯಿತು.

ಮೋಸ್ಕೊದಲ್ಲಿ ಉ. ವಿಯೆತ್ನಾಮ್ ನಿಯೋಗ

ವಿಯೆತ್ನಾಮ್ ಪ್ರಜಾಪ್ರಭುತ್ವವಾದೀ ಗಣರಾಜ್ಯದ ವರ್ಕರ್ಸ್ ಪಾರ್ಟಿಯ ಹಾಗೂ ಸರಕಾರದ ನಿಯೋಗವೊಂದು ವರ್ಕರ್ಸ್ ಪಾರ್ಟಿಯ ಪ್ರಧಾನ ಕಾರ್ಯದರ್ಶಿ ಲೆ ದೂನ್ ಇವರ ನಾಯಕತ್ವದಲ್ಲಿ ಸೋವಿಯೆತ್ ಕಮ್ಯುನಿಸ್ಟ್ ಪಾರ್ಟಿಯ ಆಮಂತ್ರಣದ ಮೇರೆಗೆ ಮೋಸ್ಕೋಗೆ ಆಗಮಿಸಿದೆ.

ಲೆ ದೂನ್‌ರವರ ಭಾವಚಿತ್ರವನ್ನೂ ಜೀವನ ಚರಿತ್ರೆಯನ್ನೂ ಪ್ರಕಟಿಸಿರುವ ಪ್ರಾವ್ದಾ ಪತ್ರಿಕೆ ಈ ನಿಯೋಗಕ್ಕೆ ಸುಸ್ವಾಗತವನ್ನು ಬಯಸಿದೆ. ಈ ಎರಡು ದೇಶಗಳ ಸೋದರ ಸ್ನೇಹವನ್ನು ವೃದ್ಧಿ ಪಡಿಸಲಿಕ್ಕೂ ಉಭಯ ರಾಷ್ಟ್ರಗಳ ಸರಕಾರ ಹಾಗೂ ಪಾರ್ಟಿಗಳ ನಡುವಣ ಸಹಕಾರವು ಹೊಸ ಹಂತವನ್ನು ಏರಲಿಕ್ಕೂ ಜಾಗತಿಕ ಸಮಾಜವಾದೀ ಐಕ್ಯವನ್ನು ಬಲಪಡಿಸಲಿಕ್ಕೂ ಈ ನಿಯೋಗದ ಭೇಟಿ ಇನ್ನಷ್ಟು ಸಹಾಯಕವಾಗಬಲ್ಲದು ಎಂದು ‘ಪ್ರಾವ್ದಾ’ ನುಡಿದಿದೆ. (ಸಿ. ಯನ್. ಯಸ್.)

ದಕ್ಷಿಣ ಕನ್ನಡ ಫಾಸಿಸ್ಟ್ ವಿರೋಧಿ ಸಮ್ಮೇಲನಕ್ಕೆ ಸಿದ್ಧತೆಗಳು

ನವೆಂಬರ ತಾ. 16ರಂದು ಮಂಗಳೂರಿನಲ್ಲಿ ಜರಗಲಿರುವ ದ. ಕ. ಜಿಲ್ಲಾ ಫಾಸಿಸ್ಟ್ ವಿರೋಧಿ ಸಮ್ಮೇಲನಕ್ಕೆ ಸಿದ್ಧತೆಗಳು ಭರದಿಂದ ನಡೆಯುತ್ತಿವೆ. ಈ ಹಿಂದೆ ವರದಿಯಾದಂತೆ ಉಡುಪಿ, ಬಂಟ್ವಾಳಗಳಲ್ಲಿ ತಾಲೂಕು ಮಟ್ಟದ ಸಮಿತಿಗಳನ್ನು ರಚಿಸಲಾಗಿದೆಯಲ್ಲದೆ ಕಳೆದ ತಾ. 12ರಂದು ಪುತ್ತೂರು ತಾಲೂಕಿನಲ್ಲೂ ಸಿದ್ಧತಾ ಸಭೆಯೊಂದು ಭೂಸುಧಾರಣಾ ರಾಜ್ಯ ಸಚಿವ ಶ್ರೀ ಬಿ. ಸುಬ್ಬಯ್ಯ ಶೆಟ್ಟರ ಅಧ್ಯಕ್ಷತೆಯಲ್ಲಿ ಸೇರಿದ ಸಾರ್ವಜನಿಕ ಸಭೆಯಲ್ಲಿ ಜರಗಿ ಸಿದ್ಧತಾ ಸಮಿತಿಯೊಂದನ್ನು ರಚಿಸಲಾಯಿತು. ಸರ್ವಶ್ರೀ ಬೆಟ್ಟ ಈಶ್ವರ ಭಟ್, ಬಿ. ವಿ. ಕಕ್ಕಿಲ್ಲಾಯ, ಯಂ. ಯಲ್. ಎ. ಜಯಾನಂದ ದೇವಾಡಿಗ ಮೊದಲಾದವರು ಈ ಸಭೆಯನ್ನುದ್ದೇಶಿಸಿ ಮಾತನಾಡಿದರು. ಬಳಿಕ ಸಿದ್ಧತಾ ಸಮಿತಿಯೊಂದನ್ನು ರಚಿಸಲಾಯಿತು.

ತಾ. 16ರಂದು ಮಂಗಳೂರಲ್ಲಿ ನಡೆಯಲಿರುವ ಈ ಸಮ್ಮೇಲನದ ಬಹಿರಂಗ ಅಧಿವೇಶನದ ಅಧ್ಯಕ್ಷತೆಯನ್ನು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರೂ ಲೋಕಸಭಾ ಸದಸ್ಯರೂ ಆದ ಶ್ರೀ ಕೆ. ಕೆ. ಶೆಟ್ಟಿ ಇವರು ವಹಿಸುವರು. ಭಾರತ ಕಮ್ಯುನಿಸ್ಟ್ ಪಾರ್ಟಿಯ ರಾಷ್ಟ್ರೀಯ ಮಂಡಲಿ ಕಾರ್ಯದರ್ಶಿಗಳಲ್ಲೊಬ್ಬರಾದ ಶ್ರೀ ಯನ್. ರಾಜಶೇಖರ ರೆಡ್ಡಿಯವರು ಸಮ್ಮೇಲನವನ್ನು ಉದ್ಘಾಟಿಸುವರು. ಸಚಿವರುಗಳಾದ ಯಂ. ವೀರಪ್ಪ ಮೊಯ್ಲಿ, ಬಿ. ಸುಬ್ಬಯ್ಯ ಶೆಟ್ಟಿ, ಶಾಸಕ ಶ್ರೀ ಯಂ. ಯಸ್. ಕೃಷ್ಣನ್ ಭಾಷಣ ಮಾಡುವರು.

ಅಂದು ಪೂರ್ವಾಹ್ನ 10 ಗಂಟೆಯಿಂದ ಮಧ್ಯಾಹ್ನ ಗಂಟೆ 2ರ ತನಕ ಪ್ರತಿನಿಧಿ ಸಭೆಯು ಪುರಭವನದಲ್ಲಿ ಜರಗಲಿರುವುದು.

ರಾಜ್ಯ ಸಮ್ಮೇಲನ ನವೆಂಬರ 22–23ಕ್ಕೆ

ಕಳೆದ ತಾ. 25, 26 ಈ ಎರಡು ದಿನಗಳಲ್ಲಿ ನಡೆಯಬೇಕಾಗಿದ್ದ ಕರ್ನಾಟಕ ರಾಜ್ಯ ಫಾಸಿಸ್ಟ್ ವಿರೋಧೀ ಸಮ್ಮೇಲನವನ್ನು ಕಾರಣಾಂತರದಿಂದ ನವೆಂಬರ ತಾ. 22 ಮತ್ತು 23ಕ್ಕೆ ಮುಂದರಿಸಲಾಗಿದೆ ಎಂದು ವರದಿಯಾಗಿದೆ.

—೦—೦—

ವಿಟ್ಲದಲ್ಲಿ ಬೀಡಿ ಮಜೂರರಿಂದ ಪಾರ್ಟಿ ನಿಧಿಗೆ — 1000 ಬೀಡಿಯ ಕೂಲಿ ನೀಡುವ ಆಶ್ವಾಸನೆ —

ಕಮ್ಯುನಿಸ್ಟ್ ಪಾರ್ಟಿ ನಿಧಿ ಸಂಗ್ರಹದ ಕಾರ್ಯಕ್ರಮದ ಕುರಿತು ವಿವರಣೆ ನೀಡಲು ಪಾರ್ಟಿಯ ಅಳಿಕೆ ಮತ್ತು ವಿಟ್ಲ ಶಾಖೆಗಳ ಸಭೆಗಳು ತಾ. 23, 24ರಂದು ಜರಗಿದುವು. ಸಭೆಗಳಲ್ಲಿ ಪಾರ್ಟಿ ಸದಸ್ಯರಲ್ಲದೆ ಹಿತೈಷಿಗಳಾದ, ರೈತರೂ, ಬೀಡಿ ಕಾರ್ಮಿಕರೂ ಹಾಜರಿದ್ದರು. ಬೀಡಿ ಕಾರ್ಮಿಕರಿಗೆ ಈ ಪ್ರದೇಶಗಳ ಕೆಲವು ಕಂಟ್ರಾಕ್ಟ್‌ದಾರರು ಲೋಗ್ ಪುಸ್ತಕ ಕೊಡದಿರುವ, ಕಳೆದ ತಾ. 2ರಿಂದ ಮಜೂರಿ ಹೆಚ್ಚಾದರೂ, ಆ ವಾರದ ಎರಡು ದಿನಗಳ ಹೆಚ್ಚಾದ ಮಜೂರಿಯನ್ನು ಕೊಡದಿರುವ ಇತ್ಯಾದಿ ಸಮಸ್ಯೆಗಳ ಕುರಿತು ಚರ್ಚಿಸಿ ಅವುಗಳ ಪರಿಹಾರಕ್ಕಾಗಿ ಕೆಲವು ಸಲಹೆಗಳನ್ನು ಕೆ. ದಾಸಪ್ಪನವರು ಸೂಚಿಸಿದರು. ಅನಂತರ ಪಾರ್ಟಿ ನಿಧಿ ಸಂಗ್ರಹದ ಅವಶ್ಯಕತೆಯನ್ನು ದಾಸಪ್ಪನವರು ವಿವರಿಸಿದರು.

ಸಭೆಗಳಲ್ಲಿ ಹಾಜರಿದ್ದ ರೈತರು ನಗದಿ ಹಣದ ಬದಲು ಭತ್ತ ಕೊಡುವುದಾಗಿಯೂ ಬೀಡಿ ಕಾರ್ಮಿಕರು 1000 ಬೀಡಿಗಳ ಮಜೂರಿ ಕೊಡುವುದಾಗಿ ವಾಗ್ದಾನ ಮಾಡಿದರು.

ನ್ಯಾಶನಲ್ ಟೊಬೆಕ್ಕೊ ಕಂಪೆನಿಯಲ್ಲಿ ರಿಟ್ರೆಂಚ್‌ಮೆಂಟ್

ಕಲ್ಕತ್ತದಲ್ಲಿರುವ ನೇಶನಲ್ ಟೊಬೆಕೊ ಕಂಪೆನಿಯ ಅಗರಪಾರ ಕಾರ್ಖಾನೆಯಲ್ಲಿ 2598 ಕಾರ್ಮಿಕರು ಇದ್ದು ಅವರಲ್ಲಿ 1180 ಮಂದಿಯನ್ನು ರಿಟ್ರೆಂಚ್ ಮಾಡುವ ನೋಟಿಸನ್ನು ಆಡಳಿತ ವರ್ಗ ನೀಡಿದೆ. ಕಾರಣ? ಉತ್ಪಾದನೆ ಕಡಿಮೆಯಾಗುತ್ತಿದೆಯಂತೆ. ಕಾರ್ಮಿಕರ ಸಂಬಂಧವಾದ ಶೃಂಗ ಸಮಿತಿಯು ಮುಂದಿಟ್ಟ ಸೂತ್ರಗಳಿಗೇ ಆಡಳಿತದ ಈ ಕ್ರಮ ವಿರೋಧವಾಗಿದೆ.

ಈ ಕಂಪೆನಿಯ ಮೆನೇಜಿಂಗ್ ಡೈರೆಕ್ಟರ್ ಆರ್. ಪಿ. ಗೋಯೆಂಕಾ. ಈ ಕಂಪೆನಿಗೆ ಭಾರೀ ಲಾಭವಿದ್ದರೂ ತುರ್ತು ಪರಿಸ್ಥಿತಿ ಸಾರಿದ ನಂತರ ಈ ಕಾರ್ಖಾನೆ ತನ್ನ ಉತ್ಪಾದನೆಯನ್ನು ಕಡಿಮೆ ಮಾಡುತ್ತಾ ಬಂತು. ಈ ಕಂಪೆನಿಯಲ್ಲಿ ಅಂಗೀಕರಿಸಲ್ಪಟ್ಟಿರುವ ಎಐಟಿಯುಸಿ ಮತ್ತು ಇಂಟಕ್ ಯೂನಿಯನ್‌ಗಳು ಜುಲೈ 27ರಂದು ಮನವಿಯೊಂದನ್ನು ಅರ್ಪಿಸಿ ಉತ್ಪಾದನೆಯನ್ನು ಹೆಚ್ಚಿಸಲು ಹಾಗೂ ಶಿಸ್ತು ಕಾಪಾಡಲು ತಮ್ಮೆಲ್ಲ ಸಹಕಾರವನ್ನು ವ್ಯಕ್ತಪಡಿಸಿದುವು. ಆಡಳಿತ ಮತ್ತು ಕಾರ್ಮಿಕರ ಜಂಟಿ ಸಮಿತಿಯನ್ನು ರಚಿಸಬೇಕೆಂದು ವಿನಂತಿಸಿದುವು. ಆಡಳಿತ ವರ್ಗದಿಂದ ಈ ವಿಷಯದಲ್ಲಿ ಯಾವ ಉತ್ತರವೂ ಬರಲಿಲ್ಲ.

ಕಳೆದ ಸಪ್ಟೆಂಬರ 24ರಲ್ಲಿ ಯೂನಿಯನ್ ಆಡಳಿತಕ್ಕೆ ಪತ್ರ ಬರೆದು ಉತ್ಪಾದನೆಯ ಇಳಿತದ ಬಗ್ಗೆ ಪರಸ್ಪರ ಚರ್ಚೆ ನಡೆಸಬೇಕೆಂದು ತಿಳಿಸಿತ್ತು. ಹಾಗೂ ರಾಜ್ಯದ ಕಾರ್ಮಿಕ ಸಚಿವರಿಗೂ ಈ ಬಗ್ಗೆ ದೂರು ಕೊಟ್ಟಿತ್ತು.

ಆದರೆ ಒಕ್ಟೋಬರ 17ರಂದು ಈ ಕಾರ್ಖಾನೆ ಸಿಗರೇಟು ಉತ್ಪಾದನೆಯನ್ನೇ ನಿಲ್ಲಿಸಿತು. ಇದರಹಿಂದೆಯೇ ರಿಟ್ರೆಂಚ್‌ಮೆಂಟಿನ ನೋಟಿಸುಗಳನ್ನು ಕಾರ್ಮಿಕರಿಗೆ ನೀಡಲಾಯಿತು. ಈಬಗ್ಗೆ ಯೂನಿಯನಿಗೆ ಆಡಳಿತ ವರ್ಗ ಯಾವ ಸಂಗತಿಯನ್ನು ತಿಳಿಸಿರಲಿಲ್ಲ. ಇದೀಗ ತಿಳಿದುಬಂದಂತೆ ಈ ಕಾರ್ಖಾನೆಯ ಸಿಗರೇಟು ಉತ್ಪಾದನಾ ವಿಭಾಗವನ್ನೇ ಆಂಧ್ರ ಪ್ರದೇಶದ ಬಿಕ್ಕಾವೊಲು ಎಂಬಲ್ಲಿರುವ ಕಾರ್ಖಾನೆಗೆ ಸ್ಥಳಾಂತರಿಸಲಾಗುವುದು ಎಂದು ಗೊತ್ತಾಗಿದೆ. ಏಕೆಂದರೆ ಅಲ್ಲಿ ಕೂಲಿ ಕಡಿಮೆ.

ಆಡಳಿತ ವರ್ಗದ ಈ ಕ್ರಮದ ವಿರುದ್ಧ ಎಐಟಿಯುಸಿ ಮತ್ತು ಇಂಟಕ್‌ಗಳು ಪ್ರತಿಭಟನೆಯನ್ನು ನಡೆಸುತ್ತಿವೆ. ಕಳೆದ ತಾ. 21ರಲ್ಲಿ 2000ಕ್ಕೂ ಮಿಕ್ಕಿ ಕಾರ್ಮಿಕರು ಕಾರ್ಮಿಕ ಸಚಿವರಲ್ಲಿಗೆ ಮೆರವಣಿಗೆಯಲ್ಲಿ ತೆರಳಿ ಮನವಿಗಳನ್ನು ಅರ್ಪಿಸಿದರು. ಈ ಕಾರ್ಖಾನೆಯ ಆಡಳಿತದ ಈ ಕ್ರಮ ತುರ್ತು ಪರಿಸ್ಥಿತಿಯ ಉದ್ದೇಶಕ್ಕೂ ಕಾರ್ಮಿಕ ಶೃಂಗ ಸಮಿತಿಯ ನಿರ್ದೇಶಕ ಸೂತ್ರಗಳಿಗೂ ವಿರೋಧವಾಗಿದೆ.

ಕೊಲೆಗೈದ ಭೂಮಾಲಿಕನಿಗೆ ಶಿಕ್ಷೆ

ಹೆಚ್ಚು ವೇತನ ಸಿಗಬೇಕೆಂದು ಪಂಜಾಬದ ಬಾತ್ ಎಂಬಲ್ಲಿ ಕೃಷಿ ಕಾರ್ಮಿಕರು ಮುಖ್ಯವಾಗಿ ಹರಿಜನ ಕಾರ್ಮಿಕರು ಚಳವಳಿ ನಡೆಸಿದ್ದಾಗ ಬಾತ್‌ನ ಭೂಮಾಲಕರು ತಮ್ಮ ಗೂಂಡಾಗಳ ಮೂಲಕ ದಬ್ಬಾಳಿಕೆ ನಡೆಸಿದ ಪರಿಣಾಮವಾಗಿ 4 ಮಂದಿ ಕೃಷಿ ಕಾರ್ಮಿಕರು ಕೊಲ್ಲಲ್ಪಟ್ಟಿದ್ದರು.

ಈಬಗ್ಗೆ ಪೋಲಿಸರು ಖಟ್ಲೆ ಹಾಕಿದ ಪರಿಣಾಮವಾಗಿ ಈ ಖಟ್ಲೆಯ ತೀರ್ಪು ಈಗ ಹೊರಬಂದಿದೆ. 13 ಮಂದಿ ಅಪರಾಧಿಗಳಿಗೆ ತಲಾ 20 ವರುಷಗಳಂತೆ ಅಮೃತಸರ ಜಿಲ್ಲಾ ನ್ಯಾಯಾಧೀಶರು ಶಿಕ್ಷೆ ವಿಧಿಸಿದ್ದಾರೆ.

ಅಕಾಲ ನಿಧನ

ವಿಟ್ಲ ಮುಡ್ನೂರು ಗ್ರಾಮದ ಶ್ರೀ ಪೂವಣಿ ಶೆಟ್ಟಿ ಎಂಬವರು ಕೆಲವು ಸಮಯದಿಂದ ಪಕ್ಷವಾತ ಪೀಡಿತರಾಗಿದ್ದು, ಇತ್ತೀಚೆಗೆ ಉದರ ಸಂಬಂಧ ಕಾಹಿಲೆಗೆ ತುತ್ತಾಗಿ ತಾ. 22ರಂದು ನಿಧನ ಹೊಂದಿದರು. ಶ್ರೀಯುತರು ವಿಟ್ಲ ಮುಡ್ನೂರು ಗ್ರಾಮದ ರೈತ ಸಂಘದ ಕಾರ್ಯಕರ್ತರಾಗಿದ್ದರು ಮಾತ್ರವಲ್ಲ 1972ರಲ್ಲಿ ಬೆಂಗಳೂರಿಗೆ ಹೋದ ರೈತರ ಜಾಥದ ಒಬ್ಬ ಸಕ್ರಿಯ ಸ್ವಯಂಸೇವಕರೂ ಆಗಿದ್ದರು. ಇವರ ಅಕಾಲ ನಿಧನಕ್ಕಾಗಿ ರೈತ ಸಂಘವು ತನ್ನ ಶ್ರದ್ಧಾಂಜಲಿಯನ್ನರ್ಪಿಸುತ್ತದೆ.

NOTICE

IN THE COURT OF THE CIVIL JUDGE OF MANGALORE S. KANARA.

S. C. No. 89 of 1975

Between:

Y. Laxman —Plaintiff

and

Seetharam Salian —Defendant

To

Seetharama Salian,
son of A. Thimmappa, Teacher
residing at Muloor,
Udipi Taluk.

Please take notice that the above suit filed by the Plaintiff against you for the recovery of the Kist amount due by you as per your egreement executed by you in favour of the Plaintiff stands posted to 24-11-1975 for your appearance. If you fail to appear on the said date the suit will be proceeded in your absence and you will be declared exparte.

(By order of Court)

G. BALAKRISHNA PRABHU,
Advocate for Plaintiff.

Mangalore, 24-10-75

ಕಾಮ್ರೇಡ್ ಸಜ್ಜದ್ ಜಹೀರರ ಜೀವನ ಮತ್ತು ಕೃತಿಗಳು

ಸ್ವಾತಂತ್ರ್ಯ ಹೋರಾಟದ ಮುಂದಳದಲ್ಲಿದ್ದ, ಕಮ್ಯುನಿಸ್ಟ್ ಪಾರ್ಟಿಯ ನಾಯಕನಾಗಿದ್ದ, ಸುಪ್ರಸಿದ್ಧ ಸಾಹಿತಿಯಾಗಿದ್ದ ಹಾಗೂ ದೇಶದಲ್ಲಿ ಪ್ರಗತಿಶೀಲ ಸಾಹಿತ್ಯ ಚಳವಳಿಯ ಆದ್ಯ ಪ್ರವರ್ತಕರಲ್ಲಿ ಒಬ್ಬರಾಗಿದ್ದ ದಿ| ಕಾಂ| ಸಜ್ಜದ್ ಜಹೀರ್ ಇವರ ಹುಟ್ಟು ಹಬ್ಬವನ್ನು ನವೆಂಬರ ತಾ. 5ರಂದು ದೇಶಾದ್ಯಂತವಾಗಿ ಕಮ್ಯುನಿಸ್ಟರೂ ಪ್ರಗತಿಶೀಲ ಬರೆಹಗಾರರೂ ಪ್ರಜಾಪ್ರಭುತ್ವವಾದಿಗಳೂ ಆಚರಿಸುತ್ತಾರೆ. ಈ ಸಂದರ್ಭದಲ್ಲಿ ಇವರ ಜೀವನ ಕೃತಿಗಳ ಕುರಿತಾದ ಈ ಲೇಖನವನ್ನು ಪ್ರಕಟಿಸುತ್ತಿದ್ದೇವೆ.

1905ರ ನವೆಂಬರ 5ರಂದು ಲಖ್ನೋದಲ್ಲಿ ಒಂದು ಪ್ರಸಿದ್ಧ ಕುಟುಂಬದಲ್ಲಿ ಸಜ್ಜದ ಜಹೀರ್ ಜನ್ಮವೆತ್ತಿದರು. ಅವರ ತಂದೆ ಸರ್ ವಾಝಿರ್ ಹಸನ್ (ನಂತರ ಔಧ್ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರಾದರು) ಓರ್ವ ಪ್ರಮುಖ ರಾಜಕೀಯ ವ್ಯಕ್ತಿಯಾಗಿದ್ದರು. 1916ರಲ್ಲಿ ಕಾಂಗ್ರೆಸ್-ಲೀಗ್ ಒಪ್ಪಂದಕ್ಕೆ ಸಹಿಬಿದ್ದ ಕಾಂಗ್ರೆಸಿನ ಐತಿಹಾಸಿಕ ಲಖ್ನೋ ಅಧಿವೇಶನದ ಅಧ್ಯಕ್ಷತೆಯನ್ನು ಇವರು ವಹಿಸಿದ್ದರು. ಹೀಗಾಗಿ ಕ್ರಾಂತಿಕಾರಿಯಲ್ಲದಿದ್ದರೂ ಒಂದು ರಾಜಕೀಯ ಜೀವನದ ವಾತಾವರಣದಲ್ಲಿ ಎಳೆಯ ಸಜ್ಜದ್ ಜಹೀರ್ ಬೆಳೆದರು.

ಅಲಿಸೋದರರ ನೇತೃತ್ವದಲ್ಲಿ ಖಿಲಿಫತ್ ಚಳವಳಿಯಾರಂಭವಾದಾಗಲೂ, ಗಾಂಧೀಜಿಯವರ ನೇತೃತ್ವದಲ್ಲಿ ಅಸಹಕಾರ ಹೋರಾಟ ನಡೆದಾಗಲೂ ಸಜ್ಜದ್ ಜಹೀರ್ ಇನ್ನೂ ವಿದ್ಯಾರ್ಥಿಯಾಗಿದ್ದರು. ಹೋರಾಟಗಳ ಈ ಪ್ರವಾಹದಿಂದ ಆಕರ್ಷಿತನಾದರು. ಈ ಹೋರಾಟಗಳು ಅವರ ಎಳೆಯ ಹೃದಯದಲ್ಲಿ ಅಚ್ಚೊತ್ತಿತ್ತು. ಆದರೆ ಅವರ ಜೀವನದ ಹೊರ ತಿರುವು ಆರಂಭವಾದುದು 1924ರಲ್ಲಿ. ಕಾನ್‌ಪುರ ಕಮ್ಯುನಿಸ್ಟ್ ಪಿತೂರಿ ಖಟ್ಲೆಯನ್ನು ಅವರು ಈ ಸಂಬಂಧ ಹೇಳುತ್ತಿದ್ದರು. ಇಪ್ಪರಲ್ಲಿ ಅವರು ಲಖ್ನೋ ವಿಶ್ವವಿದ್ಯಾನಿಲಯವನ್ನು ಸೇರಿ 1926ರಲ್ಲಿ ಪದವೀಧರರಾದರು.

ಇಂಗ್ಲೆಂಡಿಗೆ

1927ರಲ್ಲಿ ಆಗಿನ ಕಾಲದಲ್ಲಿ ಶಿಕ್ಷಣ ಸಾಧನೆ ಮತ್ತು ಸಾಮಾಜಿಕ ಘನತೆಗಳಿಗೆ ಕಾರಣವಾಗಿದ್ದ. ಇಂಗ್ಲೆಂಡಿನ ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದ ಉನ್ನತ ಶಿಕ್ಷಣಕ್ಕಾಗಿ ಇವರ ತಂದೆ ಜಹೀರರನ್ನು ಇಂಗ್ಲೆಂಡಿಗೆ ಕಳುಹಿಸಿದರು. ಅಲ್ಲಿ 8 ವರುಷಗಳ ಕಾಲ ಶಿಕ್ಷಣ ಪಡೆದು ಬಾರ್-ಎಟ್-ರಾ ಪದವೀಧರರಾದರು.

ಮಗನನ್ನು ಇಂಗ್ಲೆಂಡಿಗೆ ಕಳುಹಿಸಿದಾಗ ಹೆತ್ತವರು ಏನೋ ಆಶೆ ಕಟ್ಟಿಕೊಂಡಿದ್ದರು. ಆದರೆ ಭಾರತಕ್ಕೆ ಹಿಂದಿರುಗುವ ಮೊದಲೇ ಈ ಯುವಕ ಇಂಗ್ಲೆಂಡಿನಲ್ಲಿ ಸಾಮ್ರಾಜ್ಯವಾದೀ ವಿರೋಧಿ ಹೋರಾಟದಲ್ಲಿ ಅಸ್ಪಷ್ಟವಾದ ಎಡ ರಾಜಕೀಯ ಪ್ರವಾಹದಲ್ಲಿ ಬೆರೆತಿದ್ದ. ಆಕ್ಸ್‌ಪರ್ಡ್‌ನಲ್ಲಿ ಕಲಿಯುತ್ತಿದ್ದಾಗಲೇ ಸೋವಿಯೆತ್ ಯೂನಿಯನಿನ ಸಾಧನೆಗಳಿಂದ ಆಕರ್ಷಿತನಾದ. 1930ರಲ್ಲಿ ಕಮ್ಯುನಿಸ್ಟ್ ಪಾರ್ಟಿಯ ಸದಸ್ಯನಾಗಿ ಇಂಗ್ಲೆಂಡಿನಲ್ಲಿ ಕಲಿಯುತ್ತಿದ್ದ ಭಾರತೀಯ ವಿದ್ಯಾರ್ಥಿಗಳ ನಡುವೆ ಮಾರ್ಕ್ಸ್‌ವಾದ ಲೆನಿನ್ ವಾದಗಳ ಸಂದೇಶವನ್ನು ಹರಡಲಾರಂಭಿಸಿದರು. ಅಷ್ಟರಲ್ಲೇ ವಿದ್ಯಾರ್ಥಿಗಳ ನಡುವೆ ಕಮ್ಯುನಿಸ್ಟ್ ಶಾಖೆಯೊಂದನ್ನು ಸ್ಥಾಪಿಸಲಾಯಿತು.

ನಾಲ್ಕು ದಶಮಾನಗಳ ಉಜ್ವಲ ನಿಷ್ಠೆ

ಇದು ಸಜ್ಜದ್ ಜಹೀರರ ಜೀವನದಲ್ಲೊಂದು ಮಹತ್ವದ ಕಾಲಘಟ್ಟವಾಗಿತ್ತು. ಏಕೆಂದರೆ ಅಂದಿನಿಂದ 1973ರ ಸ್ಪೆಪೆಂಬರದಲ್ಲಿ ತನ್ನ ಕೊನೆಯುಸಿರು ಎಳೆಯುವ ತನಕದ ನಾಲ್ಕು ದಶಮಾನಗಳಿಗೂ ಮಿಕ್ಕಿದ ಕಾಲಾವಧಿಯಲ್ಲಿ ಅವರು ಪಾರ್ಟಿಯ ನಿರ್ಣಯಗಳನ್ನು ದೃಢವಾಗಿ ಪಾಲಿಸುತ್ತಾ ಕಮ್ಯುನಿಸ್ಟ್ ಪಾರ್ಟಿಯ ನಿಷ್ಠಾವಂತ ಸದಸ್ಯನಾಗಿ-ಎಂತಹ ಮರ್ದನ ದಬ್ಬಾಳಿಕೆಗಳು ಬಂದರೂ ಸಹಿಸಿದರು.

ಇಂಗ್ಲೆಂಡಿನಲ್ಲಿ ಅವರು ಭಾರತೀಯ ವಿದ್ಯಾರ್ಥಿಗಳ ನಡುವೆ ಮಾತ್ರ ದುಡಿದುದಲ್ಲ. ಹಿಟ್ಲರ್ ಮುಲೋನಿಗಳಿಂದ ಬೆಂಬಲ ಪಡೆದ ಫಾಸಿಸ್ಟ್ ಫ್ರಾಂಕೋ ಸ್ಪೈನಿನ ಗಣರಾಜ್ಯದ ಮೇಲೆ ದಾಳಿ ನಡೆಸಿದಾಗ-ಈ ಗಣರಾಜ್ಯದ ರಕ್ಷಣೆಯ ಹೋರಾಟದಲ್ಲಿ ಸಕ್ರಿಯವಾದ ಭಾಗವಹಿಸಿದರು. 1935ರಲ್ಲಿ ಪ್ಯಾರಿಸ್‌ನಲ್ಲಿ ನಡೆದ ಸಂಸ್ಕೃತಿ ರಕ್ಷಣಾ ಹೋರಾಟ ಸಮ್ಮೇಲನಕ್ಕೆ ಪ್ರತಿನಿಧಿಯಾಗಿ ತೆರಳಿದರು. ಅಷ್ಟರಲ್ಲೇ ಉತ್ತಮ ಕವಿ ಸಮರ್ಥ ವಿಮರ್ಶಕನೆಂದು ಅವರು ಹೆಸರಾಗಿದ್ದರು. ಲಂಡನಿನಲ್ಲಿ ಪ್ರಗತಿಶೀಲ ಲೇಖಕರ ಕೂಟವೊಂದನ್ನು ಸ್ಥಾಪಿಸಿದರು. ಲೇಖಕನಾದವ ಗಾಳಿಗೋಪುರದಲ್ಲಿ ವಿಹರಿಸಲು ಸಾಧ್ಯವಿಲ್ಲ ಬದಲು ಮರ್ದನದ ವಿರುದ್ಧವಾದ ಜನತಾ ಚಳವಳಿಯಲ್ಲಿ ಭಾಗವಹಿಸಿ ಹೊಸ ಸಮಾಜ ಕಟ್ಟಲು ನೆರವಾಗಬೇಕೆಂಬ ದೃಢಾಭಿಪ್ರಾಯ ಅವರಲ್ಲಿ ಬೆಳೆಯಿತು.

ಮರಳಿ ತಾಯ್ನಾಡಿಗೆ

1935ರಲ್ಲಿ ತಾಯ್ನಾಡಿಗೆ ಹಿಂದಿರುಗಿದ ಸಜ್ಜದ್ ಜಹೀರ್ ದೇಶದ ರಾಜಕೀಯ ಹೋರಾಟದಲ್ಲಿ ಧುಮುಕಿದರು. ಸ್ವಾತಂತ್ರ್ಯ ಹೋರಾಟದಲ್ಲಿ ಎಡವಿಭಾಗವು ಮುನ್ನಡೆಯುತ್ತಿದ್ದ ಕಾಲ. ಕಮ್ಯುನಿಸ್ಟ್ ಪಾರ್ಟಿಗೆ ಬ್ರಿಟಿಷರು ಪ್ರತಿಬಂಧ ಹೇರಿದ್ದುದರಿಂದ 1934ರಲ್ಲಿ ಸ್ಥಾಪಿತವಾದ ಕಾಂಗ್ರೆಸ್ ಸೋಶಿಯಲಿಸ್ಟ್ ಪಾರ್ಟಿಯ ವೇದಿಕೆಯಲ್ಲಿ ಎಲ್ಲ ನಿಜವಾದ ಎಡವಿಭಾಗದವರೂ ನಕಲಿ 'ಎಡ' ಎಂದು ಹೇಳಿಕೊಳ್ಳುವವರೂ ಒಂದಾಗಿದ್ದರು. ಸಜ್ಜದ್ ಜಹೀರರೂ ಇತರ ಕಮ್ಯುನಿಸ್ಟರಂತೆ ಕಾಂಗ್ರೆಸ್ ಸೋಶಿಯಲಿಸ್ಟ್ ಪಾರ್ಟಿಯನ್ನು ಸೇರಿ ಅದರ ಕಾರ್ಯಕಾರೀ ಸಮಿತಿಯ ಸದಸ್ಯರಾದರು. ಆ ಪಾರ್ಟಿಯೊಳಗಿದ್ದ ಆ ಪಾರ್ಟಿಯ ಒಂದು ದೊಡ್ಡ ವಿಭಾಗವು ಕಮ್ಯುನಿಸ್ಟ್ ಪಾರ್ಟಿಯನ್ನು ಸೇರುವಂತೆ ಮಾಡುವುದರಲ್ಲಿ ಇವರು ಪ್ರಮುಖವಾದ ಪಾತ್ರವನ್ನು ವಹಿಸಿದ್ದರು. ಇದರಿಂದ ಕಾಂಗ್ರೆಸ್ ಸೋಶಿಯಲಿಸ್ಟ್ ಪಾರ್ಟಿಯಲ್ಲಿದ್ದ ಜಯಪ್ರಕಾಶ ನಾರಾಯಣ ಅಶೋಕ ಮೆಹ್ತಾ ಮಿನೂ ಮಸಾನಿಯಂತಹವರು ಸಜ್ಜದ್ ಜಹೀರರ ವಿರುದ್ಧ ಸಿಟ್ಟೆದ್ದರು.

ಜವಹರಲಾಲ್ ನೆಹರು ಕಾಂಗ್ರೆಸ್ ಅಧ್ಯಕ್ಷರಾದಾಗ

1936ರಲ್ಲಿ ಎರಡನೇ ಬಾರಿಯಾಗಿ ಜವಹರಲಾಲ್ ನೆಹರೂರವರು ಕಾಂಗ್ರೆಸ್ ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಆಗ ಅಲಹಾಬಾದ್‌ನಲ್ಲಿ ಎಐಸಿಸಿ ಸೆಕ್ರೆಟೆರಿಯೆಟ್‌ಗೆ ನೆಹರೂರವರು ಸ್ವ-ಸಮರ್ಪಣಾ ಸ್ವಭಾವದ ಮೇಧಾವಿಗಳನ್ನು ಆರಿಸಿದರು. ಅವರಲ್ಲಿ ಸಜ್ಜದ್ ಜಹೀರ್ ಇವರೂ ಒಬ್ಬರು. ಉಳಿದವರೆಂದರೆ ಡಾ| ರಶೀದ್. ಎ. ಅಹ್ಮದ್, ಡಾ| ಕೆ. ಯಂ. ಅಶ್ರಫ್. ಈ ಮಹಾ ಕಾರ್ಯದಲ್ಲಿ ಇವರು ನೆಹರೂರವರಿಗೆ ಸಹಾಯಕರಾದರು.

ಕಾಂಗ್ರೆಸಿಗನಾಗಿ ಕಮ್ಯುನಿಸ್ಟನಾಗಿ ತನ್ನ ರಾಜಕೀಯ ಚಟುವಟಿಕೆಗಳೊಂದಿಗೇ ಸಜ್ಜದ್ ಜಹೀರ್ ಪ್ರಗತಿಶೀಲ ಲೇಖಕರ ಸಂಘವನ್ನು 1936ರಲ್ಲಿ ಸ್ಥಾಪಿಸಿದರು. ಈ ಸಂಘದ ಸ್ಥಾಪನಾ ಸಮ್ಮೇಳನ ಅಧ್ಯಕ್ಷತೆಯನ್ನು ಸುಪ್ರಸಿದ್ಧ ಸಾಹಿತಿ ದಿ| ಪ್ರೇಮಚಂದ್ ಇವರು ವಹಿಸಿದ್ದರು. ವಿಶ್ವಕವಿ ಠಾಗೋರರು ಈ ಸಮ್ಮೇಳನವನ್ನು ಹರಸಿದ್ದರು. ಸಂಘದ ಕಾರ್ಯದರ್ಶಿಯಾಗಿ ಸಜ್ಜದ್ ಜಹೀರ್‌ರವರು ಆರಿಸಲ್ಪಟ್ಟರು. 1938ರಲ್ಲಿ ಸೋಹನ್ ಸಿಂಗ್ ಜೋಶ್‌ರ ಸಹಾಯದೊಂದಿಗೆ 'ಚಿಂಗಾರಿ' ಎಂಬ ಪ್ರಪ್ರಥಮ ಮಾರ್ಕ್ಸ್‌ವಾದೀ ಪತ್ರಿಕೆಯನ್ನು ಪ್ರಕಟಿಸಲಾರಂಭಿಸಿದರು.

ಯಂ. ಫರೋಕಿ

ಅ. ಭಾ. ಪ್ರಗತಿಶೀಲ ಲೇಖಕರ ಸಂಘದ ಸ್ಥಾಪನೆಯಿಂದಾಗಿ ಭಾರತದ ವಿವಿಧ ಭಾಷೆಗಳ ಕವಿಗಳು ಸಾಹಿತಿಗಳು ಈ ಸಂಘದೆಡೆಗೆ ಆಕರ್ಷಿತರಾದರು. ಈ ಸಂಸ್ಥೆ ಸಾಮ್ರಾಜ್ಯವಾದೀ ವಿರೋಧೀ ಹೋರಾಟಕ್ಕೆ ಒಂದು ಸ್ಫೂರ್ತಿಯ ಆಗರವಾಗಿತ್ತು.

ಬಂಧನ

ದ್ವಿತೀಯ ಮಹಾಯುದ್ಧ ಆರಂಭವಾದೊಡನೆ ಬ್ರಿಟಿಷ್ ಆಳರಸರು ಸಮಾಜವಾದಿಗಳನ್ನು, ಕಮ್ಯುನಿಸ್ಟರನ್ನು ಬಂಧಿಸಿದಾಗ ಸಜ್ಜದ್ ಜಹೀರ್ ಕೂಡಾ ಸೆರೆಮನೆಗೆ ಹೋಗಬೇಕಾಯಿತು. ಇದು ಇವರ ಮೂರನೇ ಬಾರಿಯ ಜೇಲುವಾಸ.

1942ರಲ್ಲಿ ಪಾರ್ಟಿಯ ಮೇಲಣ ಪ್ರತಿಬಂಧ ಹೋದಾಗ ಪಾರ್ಟಿಯ ಪ್ರಪ್ರಥಮ ಕಾನೂನುಬದ್ಧ ಕಛೇರಿ ಮುಂಬಯಿಯಲ್ಲಿ ಆರಂಭವಾಯಿತು; ಸಜ್ಜದ್ ಜಹೀರ್ ಪಾರ್ಟಿ ಕೇಂದ್ರದಲ್ಲಿ ದುಡಿಯಲು ಒಪ್ಪಿದುದಲ್ಲದೆ ಪಾರ್ಟಿಯ ಮೊದಲ ಉರ್ದು ಮುಖಪತ್ರ 'ಖ್ವಾಯಮಿಜಂಗ್' ಇದರ ಸಂಪಾದಕರಾದರು.

1943ರಲ್ಲಿ ಪಾರ್ಟಿಯ ಪ್ರಥಮ ಅಧಿವೇಶನ ಜರುಗಿದಾಗ ಜಹೀರ್ ಕೇಂದ್ರ ಸಮಿತಿಗೆ ಆರಿಸಲ್ಪಟ್ಟರು.

1947ರಲ್ಲಿ ದೇಶ ವಿಭಜನೆ ಹೊಂದಿದಾಗ ಅವರು ಪಾಕಿಸ್ತಾನದಲ್ಲಿ ಪಾರ್ಟಿಯನ್ನು ಕಟ್ಟಲು ಅಲ್ಲಿಗೆ ತೆರಳಿ ಪಾಕಿಸ್ತಾನ ಕಮ್ಯುನಿಸ್ಟ್ ಪಾರ್ಟಿಯ ಪ್ರಥಮ ಪ್ರಧಾನ ಕಾರ್ಯದರ್ಶಿಯಾದರು. ಅಲ್ಲಿ ಭೂಗತವಾಗಿ ಅಪಾಯಕಾರೀ ಪರಿಸ್ಥಿತಿಯಲ್ಲಿ ಪಾರ್ಟಿಯನ್ನು ಕಟ್ಟಬೇಕಾಗಿತ್ತು. 1951ರಲ್ಲಿ ಬಂಧಿಸಲಟ್ಟ ಇವರ ಹಾಗೂ ಪಾಕಿಸ್ತಾನದ ಸುಪ್ರಸಿದ್ಧ ಕವಿ ಫಾಯಿಜ್ ಅಹಮ್ಮದ್ ಫಾಯಿಜ್ ಮತ್ತು ಇತರ ಕೆಲ ಹಿರಿಯ ಸೈನ್ಯಾಧಿಕಾರಿಗಳ ಮೇಲೆ "ಸಂವಿಧಾನ ವಿರೋಧಿ ರೀತಿಯಲ್ಲಿ ಅಧಿಕಾರವನ್ನು ವಶಪಡಿಸಿಕೊಳ್ಳಲು ಯತ್ನಿಸಿದರೆಂಬ" ಆರೋಪದ ಮೇಲೆ ಇವರ ಮೇಲೆ ಲಾಹೋರ್ ಪಿತೂರಿ ಮೊಕದ್ದಮೆ ಎಂಬ ಖಟ್ಲೆ ಹೂಡಲಾಯಿತು. ಇವರಿಗೆ ಉಗ್ರ ಶಿಕ್ಷೆ ಕೊಡಬೇಕೆಂದು ಸರಕಾರ ಒತ್ತಾಯಿಸಿದರೂ ನ್ಯಾಯಾಲಯ ಇವರಿಗೆ 4 ವರುಷಗಳ ಕಠಿಣ ಸಜೆ ನೀಡಿತು.

ಮತ್ತೆ ಭಾರತಕ್ಕೆ

ಇವರ ಕುಟುಂಬ ಭಾರತದಲ್ಲೇ ಇದ್ದುದರಿಂದ ಅವರು ಕುಟುಂಬದಿಂದ 8 ವರುಷಗಳ ಕಾಲ ಬೇರ್ಪಟ್ಟಿದ್ದರು. ಅವರ ತಾಯಿಗೆ ತೀವ್ರ ಖಾಯಿಲೆಯಾದಾಗ ಪಾಕಿಸ್ತಾನ ಸರಕಾರ ಇವರನ್ನು ಪೆರೋಲ್‌ನ ಮೇಲೆ ಬಿಡುಗಡೆ ಮಾಡಿತು. ಇವರು ಭಾರತಕ್ಕೆ ಬಂದಾಗ ಅಲ್ಲಿನ ಸರಕಾರ ಬದಲಾವಣೆಗೊಂಡು ಈ ಖಟ್ಲೆಯ ಸಂಬಂಧದ ಎಲ್ಲ ಬಂಧಿತರನ್ನೂ ಬಿಡುಗಡೆಗೊಳಿಸಿತು. ಹೀಗಾಗಿ ಕೆಲವು ಕಾಲ ಇವರು ಯಾವ ಪೌರತ್ವವೂ ಇಲ್ಲದೆ ಭಾರತದಲ್ಲಿ ಇರಬೇಕಾಯಿತು. ಕೊನೆಗೆ ಇವರ ಹಳೆಯ ಮಿತ್ರ ಜವಹರಲಾಲ್ ಅವರು ಇವರಿಗೆ ಸಹಾಯ ನೀಡಿ ಭಾರತದ ಪೌರತ್ವವನ್ನು ಮತ್ತೆ ಕೊಡಿಸಿದರು.

ಭಾರತಕ್ಕೆ ಬಂದೊಡನೇ ಮತ್ತೆ ಪುನಃ ಸಜ್ಜದ್ ಜಹೀರ್ ಪಾರ್ಟಿಯ ಕೆಲಸದಲ್ಲಿ, ಲೇಖಕರೊಂದಿಗೆ ಸಂಪರ್ಕ ಬೆಳೆಸುವಲ್ಲಿ ನಿರತರಾದರು. ಅಮೃತಸರದಲ್ಲಿ ಜರಗಿದ ಪಾರ್ಟಿ ಅಧಿವೇಶನ ಇವರನ್ನು ಪಾರ್ಟಿಯ ರಾಷ್ಟ್ರೀಯ ಮಂಡಳಿಗೆ ಚುನಾಯಿಸಿತು. ಇದೇ ವೇಳೆ 'ಅವಾಮಿ ದೌರ್', ಎಂಬ ಉರ್ದು ಸಾಪ್ತಾಹಿಕವನ್ನು ತರುವಲ್ಲಿ ಅವರು ಪ್ರಮುಖ ಪಾತ್ರವಹಿಸಿದರು. ಅದಕ್ಕೆ ಬೇಕಾದ ಹಣಕಾಸನ್ನು ಕೂಡಿಸಿದರು-ಈ ಪತ್ರಿಕೆಯೇ ಕೊನೆ ಪಾರ್ಟಿಯ ಮುಖಪತ್ರವಾಗಿ 'ಹಯಾತ್' ಎಂಬ ಹೆಸರಿನಲ್ಲಿ ಪ್ರಕಟವಾಯಿತು. ಉರ್ದು ಪತ್ರಿಕೋದ್ಯಮಕ್ಕೆ ಒಂದು ಕ್ರಾಂತಿಕಾರೀ ಪರಂಪರೆಯನ್ನು ಸೃಷ್ಟಿಸಿದವರು ಸಯ್ಯದ್ ಜಹೀರ್.

1956ರಲ್ಲಿ ಪಾಕಿಸ್ತಾನದಿಂದ ಹಿಂದಿರುಗಿದ ಬಳಿಕ ತನ್ನ ಕೊನೆಯುಸಿರು ಎಳೆಯುವ ತನಕವೂ (1973ರ ಸಪ್ಟೆಂಬರದಲ್ಲಿ ಅಲ್ಮಆಟದಲ್ಲಿ ಅವರು ನಿಧನರಾದರು) ಸಾಮ್ರಾಜ್ಯವಾದಿಗಳ ವಿರುದ್ಧ ಶಾಂತಿ, ರಾಷ್ಟ್ರೀಯ ಸ್ವಾತಂತ್ರ್ಯ, ಸಾಮಾಜಿಕ ಪ್ರಗತಿಗಾಗಿ ಅವರು ಆಫ್ರೋ ಏಸ್ಯನ್ ಲೇಖಕರ ಸಂಘವನ್ನು ಸಂಘಟಿಸುವುದರಲ್ಲೇ ನಿರತರಾಗಿದ್ದರು. ಆಫ್ರೋ-ಏಸ್ಯನ್ ಲೇಖಕರ ಪ್ರಥಮ ಸಮ್ಮೇಲನ 1956ರಲ್ಲಿ ದೆಹಲಿಯಲ್ಲಿ ಜರಗಿತ್ತು. ನಂತರ ಕೆಲವು ವರುಷಗಳಲ್ಲಿ ಆಫ್ರೋ-ಏಸ್ಯನ್ ಲೇಖಕರ ಸಂಘ ಸ್ಥಾಪಿಸಲ್ಪಟ್ಟಿತು. ಈ ಸಂಸ್ಥೆಯ ಸಮ್ಮೇಲನ ಅಲ್ಮಆಟದಲ್ಲಿ ಜರಗುತ್ತಿರುವಾಗಲೇ ಮಾರಣಾಂತಿಕ ಹೃದಯಾಘಾತದಿಂದ ಇವರು ಮೃತರಾದುದು.

ದಿ| ಸಜ್ಜದ್ ಜಹೀರ್ ಬರೆದುದು ತುಂಬಾ. ಇವುಗಳಲ್ಲಿ ಹಲವು ಪುಸ್ತಕ ರೂಪವಾಗಿ ಪ್ರಕಟವಾಗಿವೆ.

ಮೃದುಭಾಷಿ; ತತ್ವಕ್ಕಾಗಿ ದೃಢ ಹೋರಾಟಗಾರ; ಪಾರ್ಟಿಗೆ ಮತ್ತದರ ನೀತಿಗಳಿಗೆ ಸದಾ ನಿಷ್ಟ. ಇಂತಹ ಪ್ರತಿಭಾಶಾಲಿಯನ್ನು ಸದಸ್ಯನಾಗಿ ಪಡೆದುದಕ್ಕೆ ಕಮ್ಯುನಿಸ್ಟ್ ಪಾರ್ಟಿ ಹೆಮ್ಮೆ ಪಡುತ್ತದೆ.

1938ರಲ್ಲಿ ಸಜ್ಜದ್ ಜಹೀರ್-ರಝಿಯ ಇವರನ್ನು ವಿವಾಹವಾಗಿದ್ದರು. ಇವರ ಪತ್ನಿ ಕೂಡಾ ಸುಪ್ರಸಿದ್ಧ ಉರ್ದು ಲೇಖಕಿ ಹಾಗೂ ಪಾರ್ಟಿಯ ಸದಸ್ಯೆ.

(ಸಿ. ಯನ್. ಯಸ್.)

ಸಿ. ಯನ್. ಯಸ್. ವಾರ್ತಾ ಸಂಸ್ಥೆಯೊಡನೆ ಪ್ರಧಾನಿ ಸಂದರ್ಶನ

ವಿದೇಶೀ ಸರಕಾರಗಳ ಒತ್ತಡಕ್ಕೆ ಭಾರತ ಬಗ್ಗದು; ಮೂರನೇ ರಾಷ್ಟ್ರವೊಂದರ ಸ್ನೇಹ ಭಾರತ-ಸೋವಿಯೆತ್ ಮೈತ್ರಿಯನ್ನು ಅಲುಗಿಸದು!

(1ನೇ ಪುಟದಿಂದ)

ವಿದೇಶೀ ವೃತ್ತಗಳ ಅಪಪ್ರಚಾರ

ಪ್ರಶ್ನೆ: ಪಾಶ್ಚಿಮಾತ್ಯ ರಾಷ್ಟ್ರಗಳ ಪ್ರತಿಗಾಮಿ ವೃತ್ತಗಳು ಮಾತ್ರವಲ್ಲ ಬ್ರಿಟನಿನಲ್ಲಿ ನಾವು ಕಾಣುವಂತೆ ಕೆಲವು ಮೂಲಗಳು ಕೂಡಾ ತಾವು ಭಾರತದ "ಮಿತ್ರ"ರೆಂದು ಹೇಳಿಕೊಂಡು ಯಾವುದನ್ನು ಬೆಳೆಸಲು ಜವಹರಲಾಲರು ಪ್ರಮುಖ ಪಾತ್ರ ವಹಿಸಿದ್ದರೋ ಅಂತಹ ಪ್ರಜಾಪ್ರಭುತ್ವ ಈಗ ಭಾರತದಲ್ಲಿ ರದ್ದಾಗಿದೆ ಎನ್ನುತ್ತಾರಲ್ಲ? ಈ ಹಿಂದೆ ಭಾರತಕ್ಕೆ ಸಹಾನುಭೂತಿ ತೋರಿಸುತ್ತಿದ್ದ ಬ್ರಿಟನಿನ 'ನ್ಯೂ ಸ್ಟೇಟ್ಸ್‌ಮೇನ್' ಪತ್ರಿಕೆ ಕೂಡಾ ಭಾರತದ ರಾಷ್ಟ್ರೀಯ ತುರ್ತು ಪರಿಸ್ಥಿತಿಯ ವಿರುದ್ಧ ಕೂಗಿಡುತ್ತಿದೆಯಲ್ಲ? ಪ್ರಜಾಪ್ರಭುತ್ವವನ್ನು ಸುಗಮಗೊಳಿಸುವರೆ ತುರ್ತು ಪರಿಸ್ಥಿತಿಯನ್ನು ಜ್ಯಾರಿಮಾಡಲಾಗಿದೆ ಎಂಬ ನೀವು ಪದೇ ಪದೇ ಕೊಡುತ್ತಿರುವ ಹೇಳಿಕೆಗಳನ್ನು ಕೂಡಾ ಗಣ್ಯಕ್ಕೆ ತೆಗೆದುಕೊಳ್ಳುತ್ತಿಲ್ಲವಲ್ಲ? ಈ ಪ್ರಚಾರದ ಕುರಿತು ನಿಮ್ಮ ಉತ್ತರವೇನು? 'ಪ್ರಜಾಪ್ರಭುತ್ವವನ್ನು ಸುಗಮಗೊಳಿಸುವ' ಎಂಬ ನಿಮ್ಮ ಮಾತಿನ ತಾತ್ಪರ್ಯವೇನು.

ಪ್ರಧಾನಿ: ಬ್ರಿಟನಿನಲ್ಲಿ ಭಾರತದ ನಿಜವಾದ ಮಿತ್ರರಿದ್ದಾರೆ. ಆದರೆ ಅವರು ಬದಲಾದ ಪರಿಸ್ಥಿತಿಯೊಂದಿಗೆ ಹೊಂದಿಕೊಂಡಿರುವುದಿಲ್ಲ. ದೂರದಲ್ಲಿ ಸಿಂಹಾಸನದಲ್ಲಿ ಕುಳಿತು ಅದರಲ್ಲೂ ದೇಶವನ್ನು ಒಂದಾಗಿ ನಿಲ್ಲಿಸುವ ಅದರ ಐಕ್ಯ ಒಗ್ಗಟ್ಟುಗಳನ್ನು ಸಾಧಿಸುವ ವಿಚಾರದಲ್ಲಿ ಯಾವ ಹೊಣೆಯೂ ಇಲ್ಲದಿರುವಾಗ-ಟೀಕಿಸುವುದು ಸುಲಭ. ಪ್ರಜಾಪ್ರಭುತ್ವವನ್ನು ಸುಗಮಗೊಳಿಸುವುದು ಎಂದರೆ ಪ್ರಜಾಪ್ರಭುತ್ವವನ್ನು ಕೇವಲ ಆಳುವ ಪಕ್ಷ ಮಾತ್ರ ಪಾಲಿಸಿದರೆ ಸಾಲದು, ಪ್ರತಿಪಕ್ಷಗಳೂ ಪಾಲಿಸಬೇಕು ಎಂಬ ಅರ್ಥದಲ್ಲಿ ನಾನು ಹೇಳಿರುವುದಾಗಿದೆ ಪ್ರಜಾಪ್ರಭುತ್ವಕ್ಕೂ ಸಂವಿಧಾನಕ್ಕೂ ಪಂಥಾಹ್ವಾನ ಬಂದುದು ಪ್ರತಿಪಕ್ಷಗಳಿಂದ ಎಂಬುದನ್ನು ನೀವು ನೆನಪಿನಲ್ಲಿಟ್ಟುಕೊಳ್ಳಬೇಕು. ತಾವು ಎಷ್ಟೆಲ್ಲ ಪ್ರಯತ್ನ ಮಾಡಿದರೂ ಜನಸಮೂಹದಿಂದ ವಿಶಾಲವಾದ ಬೆಂಬಲವನ್ನು ಗಳಿಸಲು ಅವಕ್ಕಾಗಲಿಲ್ಲ. ಕಳೆದ ಕೆಲವು ತಿಂಗಳುಗಳಲ್ಲಿ ಸರಕಾರಕ್ಕೆ ವಿರೋಧ ಮಾಡಿದುದು ದೇಶದ ಬಡ ಮತ್ತು ದುರ್ಬಲ ವಿಭಾಗಗಳಿಂದಲ್ಲ. ಬದಲು ಜಾತ್ಯಾತೀತತೆ, ಸಮಾಜವಾದ ಮತ್ತು ನಿರ್ಲಿಪ್ತತೆಗಳನ್ನು ವಿರೋಧಿಸುತ್ತಾ ಬಂದ ಶಕ್ತಿಗಳಿಂದ. ಇಂತಹ ಗುಂಪುಗಳ ತಂತ್ರಗಳಿಂದ ದೇಶವನ್ನು ರಕ್ಷಿಸಬೇಕು. ಹೀಗಿರುವಾಗ ಪ್ರಜಾಪ್ರಭುತ್ವವನ್ನು ಹತ್ತಿಕ್ಕುವುದರ ಮೂಲಕವಲ್ಲ ಪ್ರಜಾಪ್ರಭುತ್ವವನ್ನು ಬಲಗೊಳಿಸುವುದರ ಮೂಲಕ ಜನತೆಯಲ್ಲಿ ತಿಳಿವಳಿಕೆಯನ್ನು ಹೆಚ್ಚಿಸುವ ಮೂಲಕ ಈ ಶಕ್ತಿಗಳನ್ನು ಇದಿರಿಸಬೇಕು. ನಮ್ಮ ವ್ಯವಸ್ಥೆಯನ್ನು ಅತ್ಯಂತ ಜಾಗರೂಕತೆಯಿಂದ ಯೋಚಿಸಿ ನಿರ್ಮಿಸಿದ್ದಾಗಿದೆ. ಈ ಮೂಲಕ ಭಿನ್ನತೆಯಲ್ಲಿ ಏಕತೆಯನ್ನು ಕಾಪಾಡಲು ಉದ್ದೇಶಿಸಲಾಗಿದೆ. ಸಾಮಾಜಿಕ ನ್ಯಾಯ ಒದಗಿಸುವಲ್ಲಿ, ನ್ಯಾಯಾಂಗದ ತಡೆ, ರಾಜಕೀಯ ಸಮತೋಲನಗಳು ನಿಧಾನಗೊಳಿಸಿವೆ ಎಂಬುದೂ ನಿಜ.

ಪ್ರತಿಪಕ್ಷಗಳನ್ನು ಬಗ್ಗು ಬಡೆಯುತ್ತಿಲ್ಲ

ಪ್ರಶ್ನೆ: ನೀವು ಪ್ರತಿಪಕ್ಷಗಳನ್ನು ಬಗ್ಗುಬಡೆಯುತ್ತಿದ್ದೀರಿ ಎಂದು ಕೆಲವು ಪಾಶ್ಚಿಮಾತ್ಯ ಪತ್ರಿಕೆಗಳು ಸದಾ ಬರೆಯುತ್ತಿವೆ. ಇದು ಸತ್ಯವಲ್ಲವೆಂದು ನಮಗೂ ಗೊತ್ತಿದೆ ಈ ವಿಷಯದಲ್ಲಿ ನಿಮ್ಮ ಅಭಿಪ್ರಾಯಗಳನ್ನು ಕೇಳಲು ಪಾಶ್ಚಿಮಾತ್ಯ ದೇಶಗಳ ಕೆಲವರು ಆಸಕ್ತಿ ತೋರಿದ್ದಾರೆ

ಪ್ರಧಾನಿ: ಈ ಪ್ರಶ್ನೆಗೆ ನಾನು ಪ್ರತಿ ಪ್ರಶ್ನೆಯೊಂದನ್ನು ಕೇಳುತ್ತೇನೆ. ಯಾರನ್ನೂ ಬಗ್ಗುಬಡೆಯದೆ ಇರುವ ರಾಷ್ಟ್ರಗಳು ಅದರಲ್ಲೂ ತಾವು ಪ್ರಜಾಪ್ರಭುತ್ವವಾದಿಗಳೆಂದು ಕರೆದುಕೊಳ್ಳುವ ರಾಷ್ಟ್ರಗಳು ಯಾವುದಾದರೂ ಇವೆಯೇ? ಉದಾಹರಣೆಗೆ ಬ್ರಿಟನಿನಲ್ಲಿ ಕಮ್ಯುನಿಸ್ಟರು ಸರಕಾರದಲ್ಲಿ ಉದ್ಯೋಗಗಳಿಸಲಾರರು. ಹಾಗೆಯೇ ಪ್ರತಿಯೊಂದು ದೇಶಕ್ಕೂ ತನ್ನದೇ ಆದ ನಿಯಮಗಳಿವೆ. ಅಮೇರಿಕಾದ ಮ್ಯಾಕಾರ್ಥಿ ಕಾಲದ ಅನುಭವ ನಮಗಿದೆ. ಯುರೋಪ್ ರಾಷ್ಟ್ರಗಳ ವಿಷಯವೂ ಹೀಗೆಯೆ ಆದರೆ ಭಾರತದಲ್ಲಿ ಮನ್ನಣೆ ಹೊಂದಿದ ಒಂದೇ ಒಂದು ರಾಜಕೀಯ ಪಕ್ಷವನ್ನೂ ಪ್ರತಿಬಂಧಿಸಿಲ್ಲ. ನಮ್ಮ ದೇಶದ 2 ಪ್ರಮುಖ ರಾಜ್ಯಗಳಲ್ಲಿ ಪ್ರತಿಪಕ್ಷಗಳ ಸರಕಾರಗಳಿವೆ. ಕೆಲವೊಂದು ಪ್ರತಿಪಕ್ಷಗಳ ಪ್ರಮುಖ ನಾಯಕರ ಹೊರತು ಪ್ರತಿಪಕ್ಷಗಳ ಸಾಧಾರಣ ಸದಸ್ಯರು ಸ್ವತಂತ್ರರಿದ್ದಾರೆ. ಅವರ ಚಟುವಟಿಕೆಗಳನ್ನು ನಡೆಸುತ್ತಿದ್ದಾರೆ. ಸರಕಾರವನ್ನು ಅಸ್ತವ್ಯಸ್ತಗೊಳಿಸಲು ಬೇಕಾದ ಚಳವಳಕ್ಕೆ ಸಂಬಂಧಪಟ್ಟ ಮುಖಂಡರುಗಳನ್ನು ಮಾತ್ರ ಬಂಧಿಸಲಾಗಿದೆ. ಹೆಚ್ಚಿನ ಬಂಧನಗಳು ನಡೆದುದು ಬಹಿಷ್ಕೃತವಾದ ಸಂಸ್ಥೆಗಳ ಮುಖಂಡರನ್ನು. ನಿಮಗೆ ತಿಳಿದಂತೆ ಇವು ರಾಜಕೀಯ ಸಂಸ್ಥೆಗಳಲ್ಲ. ಇವುಗಳು ಬೇರೆ ಬೇರೆ ಮುಖವಾಡ ಹಾಕಿಕೊಂಡ ಸಂಸ್ಕೃತಿ ಧರ್ಮಗಳ ಹೆಸರಿನ ಸಂಸ್ಥೆಗಳು.

ಕೈದಿಗಳನ್ನು ನಿಕೃಷ್ಟವಾಗಿ ನೋಡಿಕೊಳ್ಳಲಾಗುತ್ತಿದೆ ಎಂಬ ತೀರಾ ಸುಳ್ಳಾದ ವರದಿಗಳೂ ಇವೆ. ಕೆಲವು ಸೆರೆಮನೆಗಳು ಕಿಕ್ಕಿರಿದು ತುಂಬಿರಬಹುದು. ಆದರೆ ಯಾವುದೇ ರೀತಿಯ ತೊಂದರೆಗಳನ್ನೂ ಕೈದಿಗಳಿಗೆ ನೀಡಬಾರದೆಂದು ಸ್ಪಷ್ಟವಾದ ಆಜ್ಞೆ ನೀಡಲಾಗಿದೆ. ತೊಂದರೆಗಳು ಕೊಡಲಾಗುತ್ತಿದೆ ಎಂಬ ಪ್ರಶ್ನೆ ನನ್ನ ಗಮನಕ್ಕೆ ಯಾರಾದರೂ ತಂದರೆ ನಾನು ಈ ವಿಷಯವನ್ನು ಸ್ವತಃ ಪರಾಂಬರಿಸುತ್ತೇನೆ. ಯಾವುದೂ ನಡೆಯಬಾರದೆಂದು ನಾವು ಇಚ್ಛಿಸುತ್ತೇವೆ. ಅಂತಹ ಕೆಲವೊಂದು ಘಟನೆಗಳು ಎಂದರೆ ತೊಂದರೆ ಕೊಡುವ ಘಟನೆಗಳು ಕೆಲವೊಮ್ಮೆ ನಡೆಯುತ್ತವೆ. ಅವು ತುರ್ತು ಪರಿಸ್ಥಿತಿಯೆಂಬ ಕಾರಣದಿಂದಲ್ಲ. ಅವನ್ನು ಹೋಗಲಾಡಿಸಲು ನಾವು ಸದಾ ಯತ್ನಿಸಿದ್ದೇವೆ. ಅವನ್ನು ಸುಧಾರಿಸಿದ್ದೇವೆ. ಸ್ಥಾನಬದ್ಧತೆಯಲ್ಲಿರುವ ಪ್ರತಿಪಕ್ಷಗಳ ಮುಖಂಡರಿಗೆ ಯೋಗ್ಯ ವೈದ್ಯಕೀಯ ವ್ಯವಸ್ಥೆಯ ಬಗ್ಗೆ ನಾವು ವಿಶೇಷ ಗಮನ ತೆಗೆದುಕೊಂಡಿದ್ದೇವೆ.

ರಾಜಕೀಯ ಪ್ರಚಾರ-ಆರ್ಥಿಕ ನೆರವು

ಪ್ರಶ್ನೆ: ರಾಜಕೀಯ ಮಟ್ಟದಲ್ಲಿ ಈ ಪಾಶ್ಚಾತ್ಯ ವೃತ್ತಗಳು ಭಾರತ ವಿರೋಧಿ ಪ್ರಚಾರ ನಡೆಸುತ್ತಿರುವಾಗ ತಾವು ಭಾರತದ ಆರ್ಥಿಕ ಬೆಳವಣಿಗೆಗೆ ಸಹಾಯ ಮಾಡಲು ಆಸಕ್ತಿ ಹೊಂದಿದಂತೆ ತೋರಿಸಿಕೊಳ್ಳುತ್ತಿವೆ. ಒಂದಕ್ಕೊಂದು ವೈರುಧ್ಯವಾದ ಈ ಪ್ರಶ್ನೆಯನ್ನು ನೀವು ಹೇಗೆ ಕಾಣುತ್ತೀರಿ? ಈ ಎರಡು ಪ್ರಶ್ನೆಗಳನ್ನೂ ಪ್ರತ್ಯ ಪ್ರತ್ಯೇಕವಾಗಿ ಕಾಣಬಹುದೆಂದು ನೀವು ತಿಳಿಯುವಿರೇನು?

ಪ್ರಧಾನಿ: ರಾಜಕೀಯವಾಗಿಯೂ ಎಲ್ಲ ರಾಷ್ಟ್ರಗಳೊಂದಿಗೂ ಸ್ನೇಹದಿಂದ ಇರಬೇಕೆಂದು ನಾವು ಇಚ್ಛಿಸುತ್ತೇವೆ. ಸಹಜೀವನದ ಮುಖ್ಯ ಅಂಶವೇ ಇದು. ಈ ದೇಶಗಳ ಟೀಕೆಗಳ ಕುರಿತು ನಾವು ಹೆಚ್ಚಾಗಿ ಗಮನಿಸಬೇಕೆಂದು ನಾನು ಭಾವಿಸುವುದಿಲ್ಲ. ನಾವು ಒತ್ತಡಗಳಿಗೆ ಬಾಗುವ ದೇಶವಲ್ಲವೆಂದು ಈ ಎಲ್ಲ ದೇಶಗಳೂ ಈಗ ತಿಳಿದುಕೊಂಡಂತೆ ಕಾಣುತ್ತದೆ. ಇನ್ನು ಆರ್ಥಿಕವಾಗಿ ಹೇಳುವುದಾದರೆ ಲೋಕದ ಎಲ್ಲ ದೇಶಗಳೂ - ಪ್ರತ್ಯ ಪ್ರತ್ಯೇಕ ರಾಜಕೀಯ ವ್ಯವಸ್ಥೆ ಮತ್ತು ಗುರಿಗಳುಳ್ಳ ದೇಶಗಳು ನಮ್ಮೊಡನೆ ಆರ್ಥಿಕ ಸಂಬಂಧವನ್ನು ಬಲಗೊಳಿಸಲು ಯತ್ನಿಸುತ್ತಿವೆ. ಆದುದರಿಂದ ಇವನ್ನು ದೀರ್ಘಕಾಲೀನ ಹಿತಾಸಕ್ತಿಗಳನ್ನು ಪ್ರತ್ಯೇಕಿಸಿ ಯಾಕೆ ನೋಡಬೇಕೋ ನನಗೆ ತಿಳಿಯದು.

ಅಮೇರಿಕಾದ ಮನೋಭಾವ

ಪ್ರಶ್ನೆ: ಇತ್ತೀಚೆಗೆ ಭಾರತ-ಅಮೇರಿಕ ಜಂಟಿ ಆಯೋಗದ ಸಭೆ ನಡೆದರೂ ಕೂಡಾ ಅಮೇರಿಕಾದ ಆಡಳಿತದಲ್ಲಿ, ಭಾರತದಲ್ಲಿ "ಪ್ರಜಾಪ್ರಭುತ್ವ ನಿಧನ ಹೊಂದಿದೆ" ಎಂಬ ಸಿದ್ಧಾಂತವೇ ಉಳಿದುಕೊಂಡಂತೆ ಕಾಣುತ್ತದೆ. ಆದುದರಿಂದ ಪರಸ್ಪರ ಗೌರವ ಮತ್ತು ಸಮಾನತೆಯ ಆಧಾರದಲ್ಲಿ ಭಾರತ-ಅಮೇರಿಕನ್ ಸಹಕಾರಕ್ಕೆ ಅಡ್ಡಿಯಾದೀತೆಂದು ನೀವು ಭಾವಿಸುವಿರಾ?

ಉತ್ತರ: ನಾನೀಗಾಗಲೇ ಹೇಳಿದಂತೆ ಈ ಹೇಳಿಕೆಗಳನ್ನು ಕುರಿತು ನನಗೆ ಚಿಂತೆಯೇ ಇಲ್ಲ. ಈ ದೇಶಗಳು ಬೇರೆ ಕೆಲವು ದೇಶಗಳ ಸಂಬಂಧವಾಗಿ ಮಾಡಿದ ಹೇಳಿಕೆಗಳನ್ನೋ ಕೈಕೊಂಡ ಕ್ರಮಗಳನ್ನೋ ತಿಳಿವಳಿಕೆ ಇರುವವರು ಖಂಡಿತ ಹೋಲಿಸಿ ನೋಡಬಲ್ಲರು. ಆದುದರಿಂದ ಈ ವಿಷಯಗಳನ್ನು ಸಾರ್ವಜನಿಕರೇ ತಮ್ಮೊಳಗೆ ತೀರ್ಮಾನಿಸಲಿ. ಅದೇವೇಳೆ ತಮ್ಮ ಹಿಂದಿನ ಹೇಳಿಕೆಗಳನ್ನು ತಿದ್ದಲು ಪ್ರಯತ್ನಿಸುವ ಹೇಳಿಕೆಗಳು ಬರುತ್ತಿವೆ ಎಂಬುದನ್ನು ನಾವು ನೋಡಬೇಕು. ನಾವದನ್ನು ಅಲ್ಲಿಗೇ ಬಿಡೋಣ. ಭಾರತ ಮತ್ತು ಇತರ ದೇಶಗಳಂತೆಯೇ ಭಾರತ ಮತ್ತು ಅಮೇರಿಕಾ ಕೂಡಾ ಪರಸ್ಪರ ಅಭಿಪ್ರಾಯಗಳನ್ನು ತಿಳಿದುಕೊಳ್ಳುವ ಯತ್ನ ಮಾಡಬೇಕು.

ಸಿಐಎ-ಬಹು ರಾಷ್ಟ್ರೀಯ ಕಂಪೆನಿಗಳು

ಪ್ರಶ್ನೆ: ಭಾರತದ ಆಂತರಿಕ ಭದ್ರತೆಯನ್ನು ಕೆಲವೊಂದು ಶಕ್ತಿಯುತವಾದ ವಿದೇಶಿ ರಾಷ್ಟ್ರಗಳು ಬೆದರಿಸುತ್ತಿವೆಯೆಂದು ಹೇಳಿರುವ ನೀವು ಈ ಸಂದರ್ಭದಲ್ಲಿ ಇತರ ದೇಶಗಳಲ್ಲಿ ನಡೆಯುತ್ತಿರುವ ಸಿಐಎ ಚಟುವಟಿಕೆಗಳನ್ನು ನಮೂದಿಸಿದ್ದೀರಿ. ಬಹುರಾಷ್ಟ್ರೀಯ ಕಂಪೆನಿಗಳನ್ನು ಇತರ ದೇಶಗಳಲ್ಲಿ ಇಂತಹ ಚಟುವಟಿಕೆಗಳನ್ನು ನಡೆಸಲು ಗುಪ್ತವಾಗಿ ಉಪಯೋಗಿಸುತ್ತಿವೆ ಎಂಬುದು ನಿಮ್ಮ ಗಮನಕ್ಕೆ ಬಂದಿದೆಯೇ? ಹೀಗಿರುವಾಗ ಅಮೇರಿ

(9ನೇ ಪುಟ ನೋಡಿರಿ)

ಬೋನಸ್ ತುರ್ತು ಆಜ್ಞೆಗೆ ಸರ್ವರಿಂದಲೂ ಆಕ್ಷೇಪ

(6ನೇ ಪುಟದಿಂದ)

ಏಳು ದಿನಗಳ ಕೆಲಸ

ಉತ್ಪಾದನೆಯನ್ನು ಹೆಚ್ಚಿಸುವ ಹೆಸರಿನಲ್ಲಿ 7 ದಿನಗಳಲ್ಲೂ ಕಾರ್ಖಾನೆಗಳನ್ನು ನಡೆಸಬೇಕೆಂದು ಮಾಲಕರು ಸಮಿತಿಯ ಮುಂದಿಟ್ಟ ಸೂಚನೆಯನ್ನು ಎ. ಐ. ಟಿ. ಯು. ಸಿ. ಪ್ರತಿನಿಧಿಗಳು ಮಾತ್ರ ವಿರೋಧಿಸಿದರು. ಎಷ್ಟೋ ಮಾಲಕರು ತಮ್ಮ ಕಾರ್ಖಾನೆಗಳಲ್ಲಿ ಇರುವ ಸಾಮರ್ಥ್ಯವನ್ನೇ ಪೂರ್ಣ ವಿನಿಯೋಗಿಸದೆ ಉತ್ಪಾದನೆಯನ್ನು ಕುಂಠಿತಗೊಳಿಸುತ್ತಿರುವುದು ಎಲ್ಲರೂ ತಿಳಿದಿರುವ ವಿಚಾರ. ಪರಿಸ್ಥಿತಿ ಹೀಗಿರುವಾಗ, ಏಳು ದಿನಗಳ ಕೆಲಸ ಎನ್ನುವುದು ಕಾರ್ಮಿಕರನ್ನು ರಿಟ್ರೆಂಚ್ ಮಾಡಲು ಹೂಡಿದ ಒಂದು ಉಪಾಯ ಎಂದು ಅವರು ವಾದಿಸಿದರು. ಆದರೆ ಐ ಯನ್. ಟಿ. ಯು. ಸಿ. ಪ್ರತಿನಿಧಿಗಳು ಸೂಚನೆಗೆ ಬೆಂಬಲ ನೀಡಿದುದರಿಂದ ಬಹುಮತದಿಂದ ಅದು ಮಂಜೂರಾಯಿತು. ಆದರೂ ಸೂಚನೆಯನ್ನು ಕಾರ್ಯಗತಗೊಳಿಸುವುದಕ್ಕೆ ಮುಂಚೆ, ಕಾರ್ಖಾನೆಗಳು 3 ಶಿಫ್ಟ್ ಕೆಲಸ ಮಾಡಿ ಇರುವ ಸಾಮರ್ಥ್ಯವನ್ನು ಮೊದಲು ಸಂಪೂರ್ಣ ವಿನಿಯೋಗಿಸಬೇಕೆಂದೂ, ಇದರಿಂದಾಗಿ ಲೇ ಆಫ್ ಅಥವಾ ರಿಟ್ರೆಂಚ್‌ಮೆಂಟ್‌ಗಳಿಗೆ ಅವಕಾಶವಾಗಬಾರದೆಂದೂ ಇದರ ಲಾಭಾಂಶದಲ್ಲಿ ಕಾರ್ಮಿಕರಿಗೆ ಪಾಲು ದೊರೆಯಬೇಕೆಂದೂ ಸಮಿತಿ ನಿರ್ಧರಿಸಿತು. ಮಾಲಿಕರು ಎಷ್ಟರ ಮಟ್ಟಿಗೆ ಈ ಶರ್ತಗಳನ್ನು ಪರಿಪಾಲಿಸುವರೆಂದು ನೋಡಬೇಕಷ್ಟೆ.

ಆಡಳಿತದಲ್ಲಿ ಪಾಲು

ಆಡಳಿತದಲ್ಲಿ ಇದೀಗ ಕಾರ್ಮಿಕರಿಗೆ ಪಾಲು ನೀಡುವ ಪ್ರಶ್ನೆ ಬಂದಾಗ ಈ ಕುರಿತು ಸರ್ಕಾರ ಒಂದು ಸುಗ್ರೀವಾಜ್ಞೆಯನ್ನು ತರಲು ಯೋಚಿಸುತ್ತಿದೆಯೆಂದು ಸಭೆಯಲ್ಲಿ ಉಪಸ್ಥಿತರಿದ್ದ ಕೇಂದ್ರ ಕಾರ್ಮಿಕ ಸಚಿವ ರಘುನಾಥ ರೆಡ್ಡಿಯವರು ತಿಳಿಸಿದರು. ಇಂತಹ ಆಜ್ಞೆ ಹೊರಡಿಸುವುದಕ್ಕೆ ಮುನ್ನ ಸಮಿತಿಯೊಂದಿಗೆ ಅದರ ವಿವರಗಳನ್ನು ಮೊದಲು ಚರ್ಚಿಸಬೇಕೆಂದು ಸರಕಾರವನ್ನು ಕೇಳಿಕೊಳ್ಳಲಾಯಿತು.

ಕೈಗಾರಿಕಾ ರಂಗಕ್ಕೆ ಸಂಬಂಧಿಸಿದ ಪ್ರಶ್ನೆಗಳ ಕುರಿತು ಏಕಪಕ್ಷೀಯವಾಗಿ ಸರಕಾರ ನಿರ್ಧಾರಗಳನ್ನು ಕೈಗೊಂಡರೆ ಅಥವಾ ಶೃಂಗ ಸಮಿತಿಯ ತೀರ್ಮಾನಗಳನ್ನು ಮಾಲಿಕರು ಕಡೆಗಣಿಸಿದರೆ, ಸಮಿತಿಯನ್ನು ಸ್ಥಾಪಿಸಿದ ಉದ್ದೇಶ ಸಫಲವಾಗಲಾರದು. ಹಾಗೆಯೇ ಕರ್ನಾಟಕದ ಸಮೇತ 9 ರಾಜ್ಯ ಸರಕಾರಗಳು ರಾಜ್ಯ ಮಟ್ಟದ ಶೃಂಗ ಸಮಿತಿಗಳನ್ನು ಇನ್ನೂ ರಚಿಸಿಲ್ಲ. ಈ ಎಲ್ಲ ನ್ಯೂನತೆಗಳನ್ನೂ ಸರ್ಕಾರ ಸರಿಪಡಿಸಬೇಕಾದುದು ಅಗತ್ಯ. ('ಕುಂಬಾವುಟ'ದಿಂದ)

ಸಿ.ಐ.ಎ. ವಿರುದ್ಧ ಸರಕಾರ ಮತ್ತು ಜನತೆ ಎಚ್ಚರದಿಂದಿರಬೇಕು- ತುರ್ತು ಪರಿಸ್ಥಿತಿಗೆ ದುಡಿವ ವರ್ಗ ಬೆಂಬಲ ನೀಡಿದೆ ಎಂದು ಪ್ರಧಾನಿ

(8ನೇ ಪುಟದಿಂದ)

ಕಾ ಮತ್ತು ಕೆಲವು ಪಾಶ್ಚಿಮಾತ್ಯ ದೇಶಗಳೊಡನೆ ಆರ್ಥಿಕ ಸಂಬಂಧಗಳನ್ನು ರೂಪಿಸುವಾಗ ಈ ವಿಷಯವನ್ನು ಗಮನಿಸಬೇಕೆಂದು ನೀವು ಭಾವಿಸುವುದಿಲ್ಲವೇ?

ಪ್ರಧಾನಿ: ಈ ಬಹುರಾಷ್ಟ್ರೀಯ ಕಂಪೆನಿಗಳ ಮತ್ತು ಸಿಐಎ ಚಟುವಟಿಕೆಗಳ ಕುರಿತು ಭಾರೀ ದೊಡ್ಡ ಪ್ರಮಾಣದಲ್ಲಿ ಸಾಹಿತ್ಯಗಳು ಪ್ರಕಟವಾಗಿವೆ. ಪ್ರಕಟವಾಗುತ್ತಿವೆ. ಇವುಗಳಲ್ಲಿ ಹೆಚ್ಚಿನವು ಅಮೇರಿಕಾದ ವಿದ್ವಾಂಸರೋ ಅಥವಾ ಈ ಸಂಘಟನೆಗಳ ಮಾಜೀ ಸದಸ್ಯರೋ ಬರೆದಂತಹವುಗಳು. ಯಾವ ಮೂಲಗಳಿಂದಾಗಲಿ ಇಂತಹ ಹಸ್ತಕ್ಷೇಪ ನಡೆದಾಗ ಇವನ್ನು ಇದಿರಿಸಲು ಸರಕಾರವೂ ಜನತೆಯೂ ಹೆಚ್ಚು ಜಾಗರೂಕತೆಯಿಂದಿರಬೇಕು. ಈ ಪರಿಸ್ಥಿತಿಯ ಬಗ್ಗೆ ಎಚ್ಚರದಿಂದಿರಬೇಕು.

ಮೂರನೇ ದೇಶವೊಂದು ಭಾರತ-ಸೋವಿಯೆತ್ ಸ್ನೇಹವನ್ನು ಅಲುಗಿಸದು

ಪ್ರಶ್ನೆ: ಭಾರತ - ಅಮೇರಿಕಾ ಜಂಟಿ ಆಯೋಗದ ಸಭೆಯ ಕುರಿತು ಚೀನಾವು ಸಂತೋಷಗೊಂಡಂತೆ ಕಾಣುತ್ತಿದೆಯೆಂದು ಹಾಂಕ್‌ಕಾಂಗ್‌ನಿಂದ ಹ್ಸಿನಾ ವಾರ್ತಾ ಸಂಸ್ಥೆಯನ್ನು ಉದ್ಧರಿಸಿ ಬಂದ ವಾರ್ತೆ ತಿಳಿಸುತ್ತದೆ. ಚೀನಾದ ಹೃದಯ ಪರಿವರ್ತನೆಗೊಂಡಿದೆಯೆಂದು ಕೆಲವರು ಇದಕ್ಕೆ ಅರ್ಥಕಟ್ಟುತ್ತಾರೆ. ಇಂತಹ ತೀರ್ಮಾನಕ್ಕೆ ಬರಲು ಏನಾದರೂ ಆಧಾರಗಳಿವೆಯೆಂದು ನೀವು ಭಾವಿಸುತ್ತೀರಾ? ಇಲ್ಲವಾದರೆ ಭಾರತ ಸೋವಿಯೆತ್ ಸ್ನೇಹದ ವಿರುದ್ಧ ಈಗಲೂ ವಿಷ ಕಾರುತ್ತಿರುವ ಚೀನಾವು ಭಾರತ-ಅಮೇರಿಕಾ ಸಭೆಯ ಫಲಿತಾಂಶದ ಪರವಾಗಿ ಏಕೆ ಈ ಅಭಿಪ್ರಾಯ ವ್ಯಕ್ತಪಡಿಸಿದೆ?

ಪ್ರಧಾನಿ: ಚೀನಾದ ಯೋಚನಾ ಗತಿಯನ್ನು ನಾನು ಅರ್ಥಮಾಡಿಕೊಂಡಿದ್ದೇನೆಂದು ನಾನೆಂದೂ ಹೇಳಲಾರೆ. ಚೀನಾದ ಹೆಗ್ಗಳಿಕೆ ಅಥವಾ ಅದರ ಟೀಕೆಗಳ ಕುರಿತು ನಾವೇನೂ ತಲೆಕೆಡಿಸಬೇಕಾಗಿಲ್ಲ. ಎಲ್ಲ ದೇಶಗಳೊಂದಿಗೂ ನಮ್ಮ ಸ್ನೇಹವನ್ನು ಬೆಳೆಸಬೇಕೆಂಬುದೇ ನಮ್ಮ ನಿಲುವು. ಕೆಲವೊಂದು ಜಾಗತಿಕ ಪ್ರಶ್ನೆಗಳಲ್ಲಿ ಮುಖ್ಯವಾಗಿ ನಮ್ಮ ಪ್ರದೇಶಕ್ಕೆ ಸಂಬಂಧಪಟ್ಟ ಪ್ರಶ್ನೆಗಳಲ್ಲಿ ನಮಗೂ ಅಮೇರಿಕಾಕ್ಕೂ ಭಿನ್ನಾಭಿಪ್ರಾಯವಿದೆ. ಹೀಗಿದ್ದರೂ ಕೂಡಾ ಅದರೊಡನೆ ಸಮಾನತೆ ಪರಸ್ಪರ ಪ್ರಯೋಜನಗಳ ಆಧಾರದಲ್ಲಿ ಸಹಕಾರವನ್ನು ಬೆಳೆಸಬೇಕೆಂಬುದು ನಮ್ಮ ನಂಬಿಕೆ.

ಭಾರತ–ಅಮೇರಿಕಾ ಜಂಟಿ ಆಯೋಗದ ಇತ್ತೀಚೆಗಿನ ಸಭೆಯಲ್ಲಿ ಸಹಕಾರದ ಈ ಪ್ರಶ್ನೆಗಳನ್ನು ಸ್ಪಷ್ಟವಾದ ರೀತಿಯಲ್ಲಿ ಚರ್ಚಿಸಲಾಯಿತು. ಚೀನಾದ ಮಟ್ಟಿಗೂ ನಮ್ಮ ಸಂಬಂಧಗಳನ್ನು ಬಲಪಡಿಸಬೇಕೆಂಬುದು ನಮ್ಮ ಇಚ್ಛೆ. ಆದರೆ ಇದಕ್ಕೆ ಚೀನಾದಿಂದ ಯಾವುದೇ ಪ್ರತಿಕ್ರಿಯೆ ಇಲ್ಲ.

ಸೋವಿಯೆತ್ ಯೂನಿಯನ್‌ನೊಂದಿಗಿರುವ ನಮ್ಮ ಸಂಬಂಧವು ಸಂಪೂರ್ಣವಾಗಿ ಬೇರೆ ರೂಪದ್ದು. ಅದು ದೃಢವಾದ ಸ್ನೇಹದ ಆಧಾರದಿಂದ ಕೂಡಿದ್ದು ಕಾಲನ ಸತ್ವ ಪರೀಕ್ಷೆಯಲ್ಲಿ ತೇರ್ಗಡೆಹೊಂದಿದೆ. ಏಕೆಂದರೆ ನಮ್ಮ ಎಲ್ಲ ಕಷ್ಟದ ಸಮಯಗಳಲ್ಲೂ ಅದು ನಮ್ಮೊಂದಿಗೆ ಐಕ್ಯವನ್ನು ಪ್ರದರ್ಶಿಸಿದೆ. ಹೀಗಿರುವಾಗ ಮೂರನೇ ಒಂದು ದೇಶದ ಮನೋಭಾವವು ಈ ಸ್ನೇಹಕ್ಕೆ ಭಂಗ ತರುವಂತಿಲ್ಲ.

ಪ್ರಶ್ನೆ: ಶಾಸನ ಸಭೆ ಅಥವಾ ಪಾರ್ಲಿಮೆಂಟುಗಳ ಚುನಾವಣೆಗಳಲ್ಲಿ ಪ್ರತಿಪಕ್ಷಗಳ ವಿರುದ್ಧ ಗೆದ್ದ ಮಾತ್ರಕ್ಕೆ ಅಥವಾ 'ಪ್ರಚಂಡ ಬಹುಮತ ಪಡೆದ ಮಾತ್ರಕ್ಕೆ ಈ ತೀರಾ ಪ್ರತಿಗಾಮಿ ಮತ್ತು ಫ್ಯಾಸಿಸ್ಟ್ ಶಕ್ತಿಗಳು ಅನಪಾಯಕಾರಿ ಎಂದು ಭಾವಿಸಿ ಕೂಡ್ರುವಂತಿಲ್ಲ ಎಂಬುದನ್ನು ಅನುಭವವೇ ತೋರಿಸಿಕೊಟ್ಟಿದೆ. ಹೀಗಿರುವಾಗ ಅವುಗಳ ಸಾಮಾಜಿಕ ಮತ್ತು ಆರ್ಥಿಕ ತಳಹದಿಯನ್ನು ಮುರಿಯಬೇಕೆಂಬ ಕೇಳಿಕೆ ಸ್ವಾಭಾವಿಕ. ಈ ಗುರಿಯನ್ನು ಸಾಧಿಸಲಿಕ್ಕೆ ತನ್ಮೂಲಕ ಈ ಅಪಾಯವು ಮತ್ತೆ ಮರುಕಳಿಸದಂತೆ ಮಾಡಲಿಕ್ಕೆ ಈ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ನಿಮ್ಮ ಸರಕಾರವು ಯಾವ ಕ್ರಮಗಳನ್ನು ಕೈಗೊಳ್ಳಲಿದೆ?

ಪ್ರಧಾನಿ: ನಮ್ಮ ಭಾರೀ ಬಹುಮತಿಯರನ್ನೇ ಜಾತೀಯ ಘರ್ಷಣೆಗೆ ಪ್ರೇರೇಪಿಸಿದ್ದು; ಅತಿರೇಕ ಎಡವಾದಿಗಳು ಸಂವಿಧಾನಬಾಹಿರ ಮತ್ತು ಪ್ರಜಾಪ್ರಭುತ್ವವಿರೋಧೀ ವಿರೋಧಿ ಕೃತ್ಯಗಳಿಗೆ ತೊಡಗಿದ್ದು ಅವುಗಳ ನಿಜವಾದ ಬಣ್ಣದಲ್ಲಿ ನಾವು ಅವನ್ನು ಜನತೆಗೆ ತೋರಿಸಬೇಕಾಗಿದೆ. ಉದಾಹರಣೆಗೆ ಆನಂದಮಾರ್ಗವು ಧಾರ್ಮಿಕ ಸಂಘಟನೆಯೆಂದು ತಿಳಿದುಕೊಳ್ಳುವ ಮಂದಿ ಇನ್ನೂ ಇದ್ದಾರೆ. ಪ್ರಜಾಪ್ರಭುತ್ವ ಜಾತ್ಯತೀತತೆ ಪ್ರಗತಿ ಇವನ್ನು ಒಪ್ಪುವ ಎಲ್ಲ ಪಕ್ಷಗಳೂ ಸಂಸ್ಥೆಗಳೂ ವ್ಯಕ್ತಿಗಳೂ ಈ ಜಾತೀಯವಾದಿಗಳ ವಿರುದ್ಧ ಅಪ್ಪಟ ಪ್ರತಿಗಾಮಿಗಳ ವಿರುದ್ಧ ಒಂದೆಡೆ ಎಡ ಅತಿರೇಕವಾದಿಗಳ ವಿರುದ್ಧ ಇನ್ನೊಂದೆಡೆ ಅವಿಶ್ರಾಂತವಾದ ಹೋರಾಟವನ್ನು ನಡೆಸಬೇಕು. ಏಕೆಂದರೆ ಈ ಎರಡು ಶಕ್ತಿಗಳೂ ಹಿಂಸಾಚರಣೆಯ ಮೂಲಕ ಸರಕಾರವನ್ನು ಕಿತ್ತೊಗೆಯಲು ಬೋಧಿಸುತ್ತವೆ.

ಪ್ರಶ್ನೆ: ಪ್ರಧಾನಿಯವರೇ, ಜಯಪ್ರಕಾಶ ನಾರಾಯಣರ ನೇತೃತ್ವದ ಚಳವಳವನ್ನು ಎತ್ತಿ ಹಿಡಿಯಲು ದಿನಾ ರಾತ್ರಿ ದುಡಿದ ಕೆಲವೊಂದು ಗುತ್ತೇದಾರಿ ಪತ್ರಿಕೆಗಳು ಇದೀಗ 20 ಅಂಶಗಳ ಕಾರ್ಯಕ್ರಮದ ಹೆಸರಲ್ಲಿ ಪ್ರಮಾಣ ಮಾಡಲು ತೊಡಗಿವೆ. ಈ ಗುತ್ತೇದಾರಿಗಳ ಹೃದಯ ಪರಿವರ್ತನೆಯಾಗಿದೆ ಎಂದು ನೀವು ನಂಬುತ್ತೀರಾ?

ಪ್ರಧಾನಿ: ಪ್ರತಿಪಕ್ಷಗಳ ಶಕ್ತಿ ಮತ್ತು ಅವಕಾಶಗಳನ್ನು ಇವುಗಳಲ್ಲಿ ಕೆಲವು ಪತ್ರಿಕೆಗಳು ಭಾರಿ ಹೆಚ್ಚೆಂದು ತಿಳಿದುಕೊಂಡುವು. ನಿಜವಾಗಿ ಹೇಳುವುದಿದ್ದರೆ ಕೆಲವು ಪತ್ರಿಕೆಗಳು ಈ ಪ್ರತಿಪಕ್ಷಗಳ ನಾಯಕತ್ವದ ಹೊಣೆಯನ್ನೇ ವಹಿಸಿಕೊಂಡುವು. ಇದೊಂದು ಸಂಕುಚಿತ ನೀತಿ ಎಂದು ಅವು ತಿಳಿದುಕೊಳ್ಳಲಿಲ್ಲ. ಅವುಗಳಲ್ಲಿ ಕೆಲವು ಈಗ ವಾಸ್ತವಿಕತೆಯನ್ನು ಅರಿತುಕೊಂಡಿರಬಹುದು; ಆದರೆ ಇನ್ನು ಕೆಲವರು ಈಗಲೂ ಬದಲಾಗಿಲ್ಲ.

ಪ್ರಶ್ನೆ: ಎಷ್ಟೋ ಮ್ಯಾಲಕರುಗಳು ಮುಖ್ಯವಾಗಿ ಹಿರಿಯ ಗುತ್ತೇದಾರಿಗಳು ಕೆಲಸಗಾರರ ಶ್ರಮಭಾರ ಹೆಚ್ಚಿಸುವ, ಲಾಕೌಟು, ಕಾರ್ಖಾನೆ ಮುಚ್ಚುವಿಕೆ, ಲೇಆಫ್ ಮೊದಲಾದ ಕ್ರಮಗಳನ್ನು ತುರ್ತು ಪರಿಸ್ಥಿತಿಯನ್ನು ಉಪಯೋಗಿಸಿ ನಡೆಸುತ್ತಿದ್ದಾರೆಂದು ವಿವಿಧ ಕೈಗಾರಿಕಾ ಕೇಂದ್ರಗಳಿಂದ ವರದಿಗಳು ನಮಗೆ ಬಂದಿವೆ. ಇಂತಹ ಕಾರ್ಯಗಳು ತುರ್ತು ಪರಿಸ್ಥಿತಿಯ ಮೂಲ ಉದ್ದೇಶವನ್ನೇ ಸೋಲಿಸುವುದಿಲ್ಲವೆ? ಈ ಪರಿಸ್ಥಿತಿಯನ್ನು ತಮ್ಮ ಸ್ವಂತ ರಾಜಕೀಯ ಗುರಿಗಾಗಿ ಉಪಯೋಗಿಸಿಕೊಳ್ಳಲು ಈ ಪ್ರತಿಗಾಮಿ ಶಕ್ತಿಗಳಿಗೆ ಹಾದಿ ಮಾಡಿಕೊಡುವುದಿಲ್ಲವೆ? ಹೀಗಿರುವಾಗ ತುರ್ತು ಪರಿಸ್ಥಿತಿಯ ಈ ದುರುಪಯೋಗವನ್ನು ತಡೆಯಲು ಏನಾದರೂ ಕಾರ್ಯಕ್ರಮವನ್ನು ವಹಿಸಲಾಗಿದೆಯೆ?

ಪ್ರಧಾನಿ: ತಮ್ಮ ಸ್ವಂತ ಉದ್ದೇಶಕ್ಕಾಗಿ ಯಾರೇ ಆಗಲಿ ತುರ್ತು ಪರಿಸ್ಥಿತಿಯನ್ನು ದುರುಪಯೋಗಗೊಳಿಸಬಾರದೆಂಬುದೂ ಈ ಉದ್ದೇಶಗಳಿಗಾಗಿ ಕೆಲಸಗಾರರನ್ನು ಶೋಷಿಸಬಾರದೆಂದೂ ನನ್ನ ಸ್ಪಷ್ಟ ನಿಲುವು. ಈ ವಿಷಯದಲ್ಲಿ ನಾನು ರಾಜ್ಯಗಳ ಮುಖ್ಯ ಮಂತ್ರಿಗಳೊಡನೆ ಕೇಂದ್ರ ಮಂತ್ರಿ ಮಂಡಲದ ನನ್ನ ಸಹೋದ್ಯೋಗಿಗಳೊಡನೆ ಹಾಗೂ ಸಂಬಂಧಪಟ್ಟ ಇತರರೊಡನೆ ಸ್ವಂತವಾಗಿ ಮಾತನಾಡಿದ್ದೇನೆ, ಪತ್ರ ಬರೆದಿದ್ದೇನೆ. ತುರ್ತು ಪರಿಸ್ಥಿತಿಯನ್ನು ದುರುಪಯೋಗಗೊಳಿಸದಂತೆ ವಿಶೇಷ ಜಾಗರೂಕತೆ ವಹಿಸಬೇಕೆಂದೂ, ವಿವಿಧ ಮಟ್ಟಗಳಲ್ಲಿ ಸಂಬಂಧಪಟ್ಟವರೊಡನೆ ಮಾತನಾಡಬೇಕೆಂದೂ ನಾನು ವಿನಂತಿಸಿದ್ದೇನೆ. ಟ್ರೇಡ್ ಯೂನಿಯನ್‌ಗಳೂ, ಕಾರ್ಮಿಕರೂ ಕೂಡಾ ರಾಷ್ಟ್ರೀಯ ಹಿತವನ್ನು ಗಮನಿಸಿ ಉತ್ಪಾದನೆಯನ್ನು ಹೆಚ್ಚಿಸುವರೆಂದು ನಾವು ನಿರೀಕ್ಷಿಸುತ್ತೇವೆ.

ಇಲ್ಲಿ ಇನ್ನೊಂದು ವಿಷಯವನ್ನು ಒತ್ತಿ ಹೇಳಬೇಕಾಗಿದೆ.

ಕೆಲವೊಂದು ವಿಧದ ಸಾಮಾಗ್ರಿಗಳನ್ನು ಕೊಂಡುಕೊಳ್ಳುವುದಕ್ಕೆ ನಾವು ಉತ್ತೇಜನ ನೀಡುವುದಿಲ್ಲ. ಪರಿಣಾಮವಾಗಿ ಕೆಲವು ಕೈಗಾರಿಕಾ ಘಟಕಗಳು ಉತ್ಪಾದನೆಯನ್ನು ನಿಧಾನಿಸಿರಬಹುದು; ಅಥವಾ ಘಟಕಗಳನ್ನೇ ಮುಚ್ಚಿರಬಹುದು. ಉದಾಹರಣೆಗೆ ಕೆಲವೊಂದು ವಿಲಾಸೀ ಸಾಮಾಗ್ರಿಗಳು, ರೆಫ್ರಿಜಿರೇಟರಗಳು, ಹವಾ ನಿಯಂತ್ರಣ ಯಂತ್ರಗಳನ್ನು ಕೊಳ್ಳುವವರಿಲ್ಲವೆಂದು ಇತ್ತೀಚೆಗಷ್ಟೇ ನನ್ನ ಗಮನಕ್ಕೆ ತರಲಾಯಿತು. ಹಾಗಾದರೆ ಅವು ಹೇಗೆ ನಡೆಯಬೇಕು. ಈ ಸಮಸ್ಯೆಗಳನ್ನು ಕೈಗಾರಿಕಾ ಖಾತೆ ಪರಿಶೀಲಿಸುತ್ತಿದೆ.

ಪ್ರಶ್ನೆ: ಆದರೆ ಇಂಜಿನಿಯರಿಂಗ್ ಉತ್ಪಾದನೆಗಳು ರಬ್ಬರ್, ಸಣಬು ಉತ್ಪಾದನೆಗಳು ಇವುಗಳ ಕುರಿತೇನು?

ಪ್ರಧಾನಿ: ಸಣಬು ಕೈಗಾರಿಕೆಗೆ ಬೇರೆ ಸಮಸ್ಯೆಗಳಿವೆ. ಪ್ರತಿಯೊಂದು ಕೈಗಾರಿಕೆಗೂ ಬೇರೆ ಬೇರೆ ಸಮಸ್ಯೆಗಳಿವೆ. ಸಂಬಂಧಪಟ್ಟ ಸಚಿವರುಗಳು ಒಟ್ಟಿಗೆ ಕಲೆತು ಪರಿಸ್ಥಿತಿಯನ್ನು ಅಭ್ಯಸಿಸಿ ಅದಕ್ಕೆ ಪರಿಹಾರ ಹುಡುಕುವಂತೆ ನಾವು ಕೆಲವು ಏರ್ಪಾಡು ಮಾಡಿದ್ದೇವೆ.

ಪ್ರಶ್ನೆ: 20 ಅಂಶಗಳ ಕಾರ್ಯಕ್ರಮಗಳಲ್ಲಿ ಒಂದಂಶವು ಕೈಗಾರಿಕೆಗಳ ಆಡಳಿತಗಳಲ್ಲಿ ಎಲ್ಲ ಮಟ್ಟಗಳಲ್ಲೂ ಕಾರ್ಮಿಕರು ಭಾಗವಹಿಸಬೇಕೆಂಬುದಾಗಿದೆ. ಆದರೆ ಕೇರಳದ ಹೊರತು ಈ ಗುರಿಯನ್ನು ಸಾಧಿಸಲು ಬೇರೆಲ್ಲೂ ಯೋಗ್ಯ ಕ್ರಮವನ್ನು ಕೈಗೊಂಡಿಲ್ಲ. ಹೀಗಿರುವಾಗ ಈ ಕ್ರಮವನ್ನು ಕೈಗೊಳ್ಳುವಲ್ಲಿ ತಡೆಯಾದುದು ಯಾವುದು ಎಂಬುದನ್ನು ವಿವರಿಸುವಿರಾ?

ಪ್ರಧಾನಿ: ಒಂದೊಂದು ಕೈಗಾರಿಕೆಯಲ್ಲಿ ಹಲವಾರು ಟ್ರೇಡ್‌ಯೂನಿಯನ್‌ಗಳಿರುವುದರಿಂದ ಕಾರ್ಮಿಕರ ಪ್ರತಿನಿಧಿಗಳನ್ನು ಆರಿಸಲು ಕಷ್ಟವಾಗುತ್ತದೆ. ಇದು ಒಂದು ಪ್ರಶ್ನೆ. ಒಂದು ಗುಂಪು ಸೂಚಿಸಿದ ವಿಧಾನವನ್ನು ಇನ್ನೊಂದು ಗುಂಪು ವಿರೋಧಿಸುತ್ತದೆ. ಈ ಬಗ್ಗೆ ತುಂಬಾ ಯೋಚಿಸಿ ಒಂದು ಯೋಜನೆಯನ್ನು ಸಿದ್ಧಪಡಿಸುತ್ತೇವೆ. ಅದನ್ನು ಸದ್ಯದಲ್ಲೇ ಪ್ರಕಟಿಸುತ್ತೇವೆ.

ಇದರಲ್ಲಿ ಬದಲಾವಣೆ ತರುವುದಕ್ಕೂ, ಕಾರ್ಯರೂಪಕ್ಕೆ ತರುವುದಕ್ಕೂ ತುಂಬಾ ಅವಕಾಶಗಳಿವೆ. ಇದಕ್ಕಿಂತಲೂ ಹೆಚ್ಚಿನ ಶಿಕ್ಷಣ ಕಾರ್ಮಿಕರಿಗೆ ಬೇಕು ಎಂಬುದಾಗಿ ನನ್ನ ಅಭಿಪ್ರಾಯ. ಇಂದು ಕಾರ್ಮಿಕ ಶಿಕ್ಷಣವೆಂಬುದು ಕಾರ್ಮಿಕರಿಗೆ ಭಾರತ ದರ್ಶನ ಮಾಡಿಸುವಂತಹ ರೀತಿಯಲ್ಲಿ ಕೊನೆಗೊಳ್ಳುತ್ತದೆ. ಅವರು ಕೆಲವು ಕಾರ್ಖಾನೆಗಳನ್ನು ಸಂದರ್ಶಿಸುತ್ತಾರೆ. ಅಲ್ಲಿಗೆ ಮುಗಿಯಿತು. ಕಾರ್ಮಿಕರು ತಾವು ದುಡಿಯುವ ಕೆಲಸಗಳನ್ನಷ್ಟೇ ತಿಳಿದರೆ ಸಾಲದು. ಅವರು ತನ್ನ ಕಾರ್ಖಾನೆಯಲ್ಲಿ ಏನು ನಡೆಯುತ್ತಿದೆ ಎಂಬುದನ್ನು ತಿಳಿದುಕೊಳ್ಳಬೇಕು. ಆಯಾ ಕಾರ್ಖಾನೆಯಲ್ಲಿ ಏನೆಲ್ಲ ಉತ್ಪಾದನೆಯಾಗುತ್ತದೆ. ಉತ್ಪಾದನೆಯನ್ನು ಹೆಚ್ಚಿಸುವ ಮಹತ್ವವೇನು? ತನ್ನ ಪಾತ್ರವೇನು? ಎಂಬುದನ್ನು ಆತ ತಿಳಿದುಕೊಳ್ಳಬೇಕು. ಈ ತರದ ಶಿಕ್ಷಣವನ್ನು ನಾವು ಕಾರ್ಮಿಕರಿಗೆ ನೀಡಿದರೆ ಅವರಿಗೆ ಆಡಳಿತದಲ್ಲಿ ಪಾಲ್ಗೊಳ್ಳಲು ಸುಲಭವಾಗುತ್ತದೆ. ಏಕೆಂದರೆ ಕೈಗಾರಿಕೆಗಳ ಕುರಿತು ಅವರಿಗೆ ಗೊತ್ತಿರುತ್ತದೆ. ಹೀಗೆ ಅವರು ಭಾಗವಹಿಸಿದಾಗ ಯಾರನ್ನಾದರೂ ಕೆಲಸದಿಂದ ಅವಮಾನತು ಮಾಡಲಾಗಿದೆಯೊ? ಮ್ಯಾನೇಜರರನ್ನು ಕಿತ್ತುಹಾಕಲಾಗಿದೆಯೋ ಎಂಬುದು ತಿಳಿಯುತ್ತದೆ. ಹೀಗೆ ಆಡಳಿತದಲ್ಲಿ ಭಾಗವಹಿಸುವುದೆಂದರೆ ಇಷ್ಟೇ ಅಲ್ಲ. ಉತ್ಪಾದನೆಯ ಹೆಚ್ಚಳದಲ್ಲಿ ತಾನೂ ಭಾಗಿದಾರ ಎಂದಾತ ತಿಳಿದುಕೊಳ್ಳಬೇಕು ಮಾತ್ರವಲ್ಲ ಉತ್ಪಾದಿತ ವಸ್ತುಗಳು ಯೋಗ್ಯ ಜನರ ಕೈಗಳಿಗೇ ಹೋಗುವಂತೆಯೂ ಮಾಡಬೇಕು.

ಪ್ರಶ್ನೆ: ತುರ್ತು ಪರಿಸ್ಥಿತಿಗೆ ಕಾರ್ಮಿಕರು ಮಹತ್ವ ರೀತಿಯ ಯೋಗ್ಯ ಪ್ರತಿಕ್ರಿಯೆಯನ್ನು ತೋರಿಸಿದ್ದಾರೆ, ಆದರೆ ಬೋನಸು ಸುಗ್ರೀವಾಜ್ಞೆ ಅವರಿಗೊಂದು ಆಘಾತದಂತೆ ಬಂದಿದೆ. ಇಂಟಕ್‌ನ ಸಮೇತ ಎಲ್ಲ ಪ್ರಮುಖ ಟ್ರೇಡ್ ಯೂನಿಯನ್‌ಗಳೂ ಈ ಬೋನಸ್ ಆಜ್ಞೆಯನ್ನು ವಿರೋಧಿಸಿದ ಹಿನ್ನೆಲೆಯಲ್ಲಿ ಈ ಸುಗ್ರೀವಾಜ್ಞೆಯ ಕುರಿತು ಪುನರ್ ಪರಿಶೀಲಿಸಲಾಗುವುದೆ?

ಪ್ರಧಾನಿ: ಬೋನಸ್ ಕುರಿತಾದ ಆಜ್ಞೆ ಕಾರ್ಮಿಕರ ಹಿತಗಳಿಗೆ ವಿರೋಧವಾದುದೇನೂ ಅಲ್ಲ. ಉತ್ಪಾದನೆ, ಉತ್ಪಾದಕತೆ, ಅಥವಾ ಉಳಿತಾಯಗಳನ್ನು ಲೆಕ್ಕಿಸದೇ ಬೋನಸ್ ನೀಡಿದರೆ ಇದರಿಂದ ಕಾರ್ಮಿಕರ ಮೇಲೂ ಇತರರ ಮೇಲೂ ವಿರುದ್ಧ ಪರಿಣಾಮವುಂಟಾಗುತ್ತದೆ. ಬೋನಸು ತುಟ್ಟಿ ಭತ್ತೆ ಅಥವಾ ವೇತನ ಹೆಚ್ಚಳಗಳನ್ನು ಪ್ರತ್ಯೇಕವಾಗಿ ಬೇರ್ಪಟ್ಟು ಪರಿಶೀಲಿಸುವಂತಿಲ್ಲ. ಒಟ್ಟಿನ ಪರಿಸ್ಥಿತಿಯನ್ನು ಗಮನಕ್ಕೆ ತೆಗೆದುಕೊಂಡು ಪ್ರತಿಯೊಂದು ನಿರ್ಣಯವನ್ನೂ, ಹೆಜ್ಜೆಯನ್ನೂ ಕೈಗೊಳ್ಳಬೇಕು. ಏಕೆಂದರೆ ಒಟ್ಟಿನ ಆರ್ಥಿಕ ಪರಿಸ್ಥಿತಿಯು ಹದಗೆಟ್ಟರೆ ಇದರಿಂದ ಕಷ್ಟಕ್ಕೊಳಗಾಗುವವರು ದುರ್ಬಲ ವರ್ಗದವರು ಮತ್ತು

(10ನೇ ಪುಟ ನೋಡಿರಿ)

The Editor,
Prabhat"
Mangalore-1.

ಬೋನಸ್‌ಗಾಗಿ ದುಡಿವ ವರ್ಗದ ಕಾರ್ಯಾಚರಣೆ

ಬೋನಸ್ ಕಡಿತದ ವಿರುದ್ಧ ಕಾರ್ಮಿಕ ವರ್ಗ ಶಾಂತ ರೀತಿಯಿಂದ ತಮ್ಮ ಪ್ರತಿಭಟನೆಯನ್ನು ವ್ಯಕ್ತಪಡಿಸುತ್ತಿದ್ದಾರೆ. ಹಿಟ್ಟು ಗಿರಣಿಗಳಲ್ಲಿ ನೀಡಲಾಗುವ ಶೇ. 4 ರಷ್ಟು ಬೋನಸನ್ನು ನಿರಾಕರಿಸಬೇಕೆಂದು ಎಐಟಿಯುಸಿ ಮತ್ತು ಇಂಟಕ್ ಯೂನಿಯನ್‌ಗಳು ನಿರ್ಣಯಿಸಿವೆ. ಕಳೆದ ಹಲವಾರು ವರುಷಗಳಿಂದ ಹಿಟ್ಟು ಗಿರಣಿಗಳು ಶೇ. 20ರಷ್ಟು ಬೋನಸನ್ನು ನೀಡುತ್ತಿದ್ದವು ಎಂಬುದು ಗಮನಾರ್ಹ. ಆದರೆ ಹೊಸ ಸುಗ್ರೀವಾಜ್ಞೆ ಬಂದೊಡನೇ ಅವು ಬೋನಸಿನ ಪ್ರಮಾಣವನ್ನು ಇಳಿಸಿದುವು.

ರಾಜಸ್ತಾನದ ಭಿಲ್ವಾರ ಜಿಲ್ಲೆಯಲ್ಲಿ ಎಐಟಿಯುಸಿ ಮತ್ತು ಇಂಟಕ್ ಇವುಗಳ ಮುಖಂಡರು ಜಂಟಿ ಹೇಳಿಕೆಯೊಂದನ್ನು ನೀಡಿ ಕನಿಷ್ಟ ಬೋನಸ್‌ನ ಅಂಶವನ್ನು ಶೇ 8.33ಕ್ಕೆ ಹೆಚ್ಚಿಸಬೇಕೆಂದು ಸರಕಾರವನ್ನು ಒತ್ತಾಯಿಸಿದ್ದಾರೆ. ಹೈದರಾಬಾದಿನ ಸಿಂತೆಟಿಕ್ ಡ್ರಗ್ ಫ್ಯಾಕ್ಟರಿಯಲ್ಲಿ ಬೋನಸ್‌ಗಾಗಿ ಕಾರ್ಮಿಕರು ಕಳೆದ ತಾ. 6ರಂದು ಶಾಂತರೀತಿಯ ಮತಪ್ರದರ್ಶನ ನಡೆಸಿದರು. ಈ ಸಂಸ್ಥೆ ಬೋನಸ್‌ನ ಪ್ರಮಾಣವನ್ನು ಈತನಕ ಪ್ರಕಟಿಸಿಲ್ಲ.

ಜನರಲ್ ಇನ್ಶ್ಯೂರೆನ್ಸ್

ಜನರಲ್ ಇನ್ಶ್ಯೂರೆನ್ಸ್ ನೌಕರರ ಅಖಿಲಭಾರತ ಸಂಘವು ಶೇ 4ರಂತೆ ಕೊಡುವ ತಾತ್ಕಾಲಿಕ ಬೋನಸನ್ನು ನಿರಾಕರಿಸಬೇಕೆಂದು ತನ್ನೆಲ್ಲ ನೌಕರರಿಗೆ ಕರೆಕೊಟ್ಟಿದೆ.

ಅಕ್ಟೋಬರ ತಾ. 17ರಂದು ಕೈಗಾರಿಕಾ ಇಲಾಖೆಯ ಕಾರ್ಯದರ್ಶಿ ಶ್ರೀ ಸೋಂಧಿಯವರು ಹರಿದ್ವಾರದಲ್ಲಿರುವ ಬಿ. ಯಚ್. ಇ. ಯಲ್.ಗೆ ಭೇಟಿನೀಡಿದಾಗ ಅಲ್ಲಿನ 5000 ಕಾರ್ಮಿಕರು ಕಪ್ಪು ಬ್ಯಾಜುಗಳನ್ನು ಧರಿಸುವ ಮೂಲಕ ಬೋನಸ್ ಆಜ್ಞೆಗೆ ತಮ್ಮ ಅಸಮ್ಮತಿಯನ್ನು ಸೂಚಿಸಿದರು. ಹಾಗೂ ಬೋನಸ್ ಕಡಿತ ಆಜ್ಞೆಯನ್ನು ಹಿಂದೆಗೆಯಬೇಕೆಂದು ಒತ್ತಾಯಿಸಿದರು.

ಹರ್ಯಾನದಲ್ಲಿ

ಹರ್ಯಾನದಲ್ಲಿ ಈ ಬೋನಸ್ ಕಡಿತ ಆಜ್ಞೆಯನ್ನು ಹಿಂದೆಗೆಯುವಂತೆ ಕಾರ್ಮಿಕರ ನಡುವೆ ಸಹಿ ಚಳವಳಿ ನಡೆಯುತ್ತಿದೆ. ಭಿವಾನಿ, ಪಾಣಿಪತ ಮತ್ತಿತರ ಕೈಗಾರಿಕಾ ಕೇಂದ್ರಗಳಲ್ಲಿ ಕಾರ್ಮಿಕರು ಸಭೆಗಳನ್ನು ನಡೆಸುತ್ತಿದ್ದಾರೆ.

ಇನ್ನು ಇಲ್ಲಿನ ಎರಡು ಸೆಣಬು ಗಿರಣಿಗಳಲ್ಲೂ ಎಐಟಿಯುಸಿಗೆ ಸೇರಿದ 4500 ಕಾರ್ಮಿಕರು ಬೋನಸನ್ನು ನಿರಾಕರಿಸಿದ್ದಾರೆ. ಇಂಟಕ್ ಕೂಡಾ ಪ್ರತ್ಯೇಕವಾಗಿ ಬೋನಸ್ ಆಜ್ಞೆಯ ವಿರುದ್ಧ ಚಳವಳಿ ನಡೆಸುತ್ತಿದೆ. (ನ್ಯೂಏಜ್‌ನಿಂದ)

ಬ್ಯಾಂಕ್ ನೌಕರರ ಐಕ್ಯದಲ್ಲಿ ಒಡಕು ತರಲು 'ಇನ್‌ಬೆಕ್' ಯತ್ನ

ರಾಜಕೀಯ ದುರುದ್ದೇಶದಿಂದ ಅ.ಭಾ. ಬ್ಯಾಂಕ್ ನೌಕರರ ಸಂಘದ ಅಧ್ಯಕ್ಷ ಮತ್ತು ಕಾರ್ಯದರ್ಶಿಗಳ ನಿವಾಸದ ಮೇಲೆ ಆದಾಯಕರ ಅಧಿಕಾರಿಗಳು ದಾಳಿ ಮಾಡಿ ಇದಕ್ಕೆ ಭಾರೀ ಪ್ರಚಾರ ಕೊಟ್ಟಿದ್ದರಷ್ಟೆ? ಈ ಸಂದರ್ಭದಲ್ಲಿ ಇಂಡಿಯನ್ ನ್ಯಾಶನಲ್ ಬ್ಯಾಂಕ್ ಎಂಪ್ಲಾಯಿಸ್ ಎಸೋಸಿಯೇಶನ್ (ಇಂಟಕ್) ಇದೀಗ ತನ್ನ ಸದಸ್ಯರಿಗೆ ಗುಪ್ತ ಸರ್ಕಿಲಾರ್ ಒಂದನ್ನು ಕಳುಹಿಸಿ ಈ ಸಂದರ್ಭವನ್ನು ಉಪಯೋಗಿಸಿ ಎಐಬಿಇಎ ಇದರ ನಾಯಕರ ಮೇಲೆ ಕಳಂಕ ಹೊರಿಸಬೇಕೆಂದೂ, ಎಐಬಿಇಎಗೆ ಕೊಟ್ಟ ಅಂಗೀಕಾರವನ್ನು ಹಿಂದೆಗೆಯುವಂತೆ ಮಾಡಬೇಕೆಂದೂ ತಿಳಿಸಿದೆ.

ಕಳೆದ 20 ವರುಷಗಳಿಂದ ಬ್ಯಾಂಕ್ ನೌಕರರ ನಡುವೆ ಕುಪ್ರಸಿದ್ಧರಾದ ವ್ಯಕ್ತಿಗಳು ಇದೀಗ ಇಂಟಕ್‌ನ ಈ 'ಇನ್‌ಬೆಕ್' ನೊಳಗೆ ಸೇರಿ ಬ್ಯಾಂಕಿಂಗ್ ಕೈಗಾರಿಕೆಯ ನೌಕರರ 'ಸೇವೆ'ಗೆ ತೊಡಗಿದ್ದಾರೆ. ಈ ವ್ಯಕ್ತಿಗಳು ಜಯಪ್ರಕಾಶರೊಡನೆ ಕೂಡಾ ಸೇರಿಕೊಂಡಿದ್ದರೆಂದೂ, ಅವರ ಚಳವಳಿಕ್ಕೆ ನಿಧಿಯನ್ನು ಕೂಡಾ ಸಂಗ್ರಹಿಸಿದ್ದರೆಂದೂ ತಿಳಿದು ಬಂದಿದೆ.

ಇದೀಗ ರಾಜಕೀಯ ದುರುದ್ದೇಶದ ಆದಾಯಕರ ದಾಳಿ ನಡೆದ ನಂತರ ಇವರು ಬ್ಯಾಂಕ್ ನೌಕರರ ಐಕ್ಯದಲ್ಲಿ ಒಡಕು ತರಲು ನೋಡುತ್ತಿದ್ದಾರೆ. ಕಳೆದ ಅಕ್ಟೋಬರ 6 ರಂದು 'ಇನ್‌ಬೆಕ್' ತಾರಾಚಂದ ಗುಪ್ತ ಎಂಬವರು ಸಹಿ ಹಾಕಿದ ಗುಪ್ತ ಸರ್ಕಿಲಾರ್ ಒಂದನ್ನು ಕಳುಹಿಸಿತು. ಅದರಲ್ಲಿ:

"ಎ ಐ ಬಿ ಇ ಎ ಯೂನಿಯನ್‌ಗಳಿಗೆ ಬ್ಯಾಂಕ್ ಮೆನೇಜ್‌ಮೆಂಟ್‌ಗಳು ತತ್ವಭ್ರಷ್ಟ ರೀತಿಯಲ್ಲಿ ಮನ್ನಣೆಕೊಟ್ಟ ನಂತರ ಬ್ಯಾಂಕ್ ನೌಕರರ ಟ್ರೇಡ್ ಯೂನಿಯನ್ ಚಳವಳಿಯಲ್ಲಿ ಭ್ರಷ್ಟಾಚಾರವು ಮುತ್ತಿರುವುದನ್ನು ನೋಡಿ ನಮಗೆ ತುಂಬಾ ಕಳವಳವಾಗಿದೆ. ಎಐಬಿಇಎಯ ಇತರ ಮುಖಂಡರ ಹಾಗೂ ಬ್ಯಾಂಕ್ ಆಡಳಿತದಲ್ಲಿ ನೌಕರರ ಪರವಾಗಿರುವ ಡೈರೆಕ್ಟರುಗಳ ಆಸ್ತಿಪಾಸ್ತಿಗಳ ಕುರಿತು ತೀವ್ರ ತನಿಖೆ ನಡೆಸಬೇಕೆಂದು ನಾವು ಒತ್ತಾಯಿಸಿದ್ದೇವೆ. ನಮ್ಮ ಮುಂದಿನ ಸರ್ಕಿಲಾರ್‌ನ್ನು ನಿರೀಕ್ಷಿಸಿರಿ!" ಎಂದಿದೆ.

ಸುಳ್ಳು ಪ್ರಚಾರ

ಈ ಮುಖಂಡರು ಎಐಬಿಇಎ ನಾಯಕರ ಚಾರಿತ್ರ್ಯದ ಕೊಲೆಗೆ ವಿಷ ಪ್ರಚಾರವನ್ನು ನಡೆಸುತ್ತಿದ್ದಾರೆ. ಇಂತಿಂತಹ ಎಐಬಿಇಎ ನಾಯಕರನ್ನು ಭ್ರಷ್ಟಾಚಾರದ ಆರೋಪದಲ್ಲಿ ಬಂಧಿಸಲಾಗಿದೆ ಎಂಬ ಸುಳ್ಳು ಪ್ರಚಾರ ನಡೆಸುತ್ತಿರುವಾಗಲೇ ಇನ್ನೊಂದೆಡೆ ಎಐಬಿಇಎಯ ಅಂಗೀಕಾರವನ್ನು ಹಿಂದೆ ಪಡೆಯಬೇಕೆಂದು ಒತ್ತಾಯ ತರುತ್ತಿದ್ದಾರೆ.

ಬ್ಯಾಂಕ್ ಆಡಳಿತದ ಬೆಂಬಲ

ಇನ್‌ಬೆಕ್‌ನ ಈ ಒತ್ತಡಕ್ಕೆ ಬ್ಯಾಂಕ್‌ಗಳ ಆಡಳಿತದ ಒಂದು ವಿಭಾಗವೂ ಬೆಂಬಲಿಸುತ್ತಿದೆ. ಕೆಲವು ಕಡೆಗಳಲ್ಲಿ ಬ್ಯಾಂಕ್ ಆಡಳಿತ ಯಂತ್ರಗಳನ್ನು ಉಪಯೋಗಿಸಿ ಈ ತರಹ ಪ್ರಚಾರ ನಡೆಸಲಾಗುತ್ತಿದೆ. ಹೀಗೆ ಪ್ರಚಾರ ನಡೆಸದ ಬ್ಯಾಂಕ್ ಆಡಳಿತ ವರ್ಗಕ್ಕೆ ಇನೆಬೆಕ್ ಬೆದರಿಕೆ ಹಾಕುತ್ತಿರುವ ವರದಿಯೂ ಇದೆ.

ಇದೀಗ ಇನೆಬೆಕ್‌ನ ಆದೇಶದ ಮೇರೆಗೆ ಸರಕಾರವು ನಡೆಯುವಂತೆ ಕಾಣುತ್ತಿದೆ. ಎಐಬಿಇಎಗೆ ಬ್ಯಾಂಕ್ ಕೈಗಾರಿಕೆಯಲ್ಲಿರುವ ಅಪೂರ್ವ ಸ್ಥಾನಮಾನವನ್ನು ಕಿತ್ತುಹಾಕುವ ಪ್ರಯತ್ನ ನಡೆಯುತ್ತಿದೆ.

(ನ್ಯೂಏಜ್‌ನಿಂದ)

(9ನೇ ಪುಟದಿಂದ)

ಕಾರ್ಮಿಕರು. ಇಂದಿನ ಪರಿಸ್ಥಿತಿಯಲ್ಲಿ ಸಂಬಂಧಪಟ್ಟ ಪ್ರತಿಯೊಬ್ಬರೂ ಆದಷ್ಟು ಸಂಯಮದಿಂದ ಇರಬೇಕು. ಹೆಚ್ಚು ಉಳಿತಾಯ ಮತ್ತು ಹಣ ತೊಡಗುವಿಕೆ ಹಾಗೂ ಉದ್ಯೋಗ ಅವಕಾಶಗಳನ್ನು ಹೆಚ್ಚಿಸುವುದು ಇಂದಿನ ಪ್ರಮುಖ ಕರ್ತವ್ಯ.

ಈ ಅಗತ್ಯದಲ್ಲಿ ಕಾರ್ಮಿಕ ವರ್ಗ ಇತರ ಎಷ್ಟೋ ಜನಕ್ಕಿಂತ ಬಹುಷ ಅವರ ಕೆಲ ಮುಖಂಡರಿಗಿಂತಲೂ ಹೆಚ್ಚು ಉತ್ತಮ ತಿಳುವಳಿಕೆಯನ್ನು ವ್ಯಕ್ತಪಡಿಸಿದೆ. ಈ ವಿಷಯದಲ್ಲಿ ನೀವು ಹೇಳಿದ್ದು ಸರಿ. ತುರ್ತು ಪರಿಸ್ಥಿತಿಯ ಘೋಷಣೆಯ ಬಳಿಕ–ಕಾರ್ಮಿಕರು ತಾವು ಕಳೆದ ಕೆಲವು ವರುಷಗಳಿಂದ ಅನುಸರಿಸಿಕೊಂಡು ಬಂದಿದ್ದ ಕೆಲವೊಂದು ಅಭ್ಯಾಸಗಳನ್ನು ತೊರೆದಿದ್ದಾರೆ. ಈ ಅಭ್ಯಾಸಗಳು ಸಾಮರ್ಥ್ಯಕ್ಕೆ ಅಡ್ಡಬರುತ್ತಿತ್ತು. ನಿರಂತರ ಉತ್ಪಾದನೆಗೆ ಧಕ್ಕೆಯಾಗುತ್ತಿತ್ತು. ಸಾರ್ವಜನಿಕರಿಗೆ ಉತ್ತಮ ಸೇವೆ ಸಲ್ಲಿಸಲು ಆತಂಕವಾಗುತ್ತಿತ್ತು. ಪರಿಸ್ಥಿತಿಯನ್ನು ಅರಿತುಕೊಂಡ ಈ ಕಾರ್ಮಿಕರನ್ನು ಅಭಿನಂದಿಸುತ್ತೇನೆ ಅವರು ನೀಡುತ್ತಿರುವ ಬೆಂಬಲವನ್ನು ಪ್ರತಿಯೊಂದು ಕಷ್ಟಕಾಲದಲ್ಲೂ ನೀಡುವರೆಂದು ನಂಬುತ್ತೇನೆ.

ಲಂಡನಿನ ಟ್ರೇಡ್ ಯೂನಿಯನ್ ಕಾಂಗ್ರೆಸಿನಲ್ಲಿ ನಡೆಯುತ್ತಿದ್ದ ವಾದವೊಂದನ್ನು ನಾನು ನಿನ್ನೆಯಷ್ಟೇ ಲಂಡನಿನ 'ಟೈಮ್ಸ್' ನಲ್ಲಿ ಓದಿದೆ. ಟ್ರೇಡ್ ಯೂನಿಯನ್ ಕಾಂಗ್ರೆಸಿನ ಪ್ರಧಾನ ಕಾರ್ಯದರ್ಶಿ ಲೆನ್ ಮುರ್ರೆಯವರು ಸರಕಾರದ ಪಕ್ಷವಾಗಿದ್ದುಕೊಂಡು ಕಾರ್ಮಿಕರ ಹಕ್ಕುಗಳ ಪರವಾಗಿ ನಿಲ್ಲಲಿಲ್ಲ ಎಂದು ಆರೋಪಿಸಲಾಯಿತು. ಅವರೇನೆಂದರು ಎಂಬುದನ್ನು ಅವರ ಮಾತಿನಲ್ಲೇ ಹೇಳುತ್ತೇನೆ. "ಟ್ರೇಡ್ ಯೂನಿಯನ್ ಕಾಂಗ್ರೆಸ್ ಎಂಬುದು ಸರಕಾರದ ಬಾಗಿಲಲ್ಲಿರುವ ಕಾಲೊರೆಸುವ ವಸ್ತ್ರದಂತೆ ವರ್ತಿಸಿದೆ ಎಂಬುದು ಸತ್ಯವಲ್ಲ; ಸತ್ಯಕ್ಕಿಂತ ದೂರವಾದ ಸಂಗತಿ. ದುಡಿಯುವ ಜನರ ಹಿತಾಸಕ್ತಿಗಳನ್ನು ಕಾಪಾಡುವುದು ನಮ್ಮ ಕರ್ತವ್ಯ; ಹಣದುಬ್ಬರದ ಮಟ್ಟವನ್ನು ತಗ್ಗಿಸುವುದು; ಉದ್ಯೋಗಗಳನ್ನು ಕಾಪಾಡುವುದು ಇವು ಸರಕಾರಕ್ಕೆ ಬೆಂಬಲ ನೀಡಿದಂತಾಗುವುದಿಲ್ಲ.

(ಮುಂದುವರಿಯುವುದು)

ಮಹಾರಾಷ್ಟ್ರ: ಋಣ ವಿಮೋಚನೆಗಾಗಿ ಚಳವಳಿ

ಗ್ರಾಮಾಂತರಗಳ ಬಡವರ ಋಣ ವಿಮೋಚನೆಯ ತುರ್ತು ಆಜ್ಞೆಯನ್ನು ಮಹಾರಾಷ್ಟ್ರ ಸರಕಾರ ಹೊರಡಿಸಿದೊಡನೆ ಈ ಆಜ್ಞೆಯನ್ನು ವಸ್ತುಶಃ ಕಾರ್ಯರೂಪಕ್ಕೆ ತರುವುದಕ್ಕಾಗಿ ಕಮ್ಯುನಿಸ್ಟ್ ಪಾರ್ಟಿ ಮತ್ತು ಕಾಂಗ್ರೆಸ್ ಪಕ್ಷಗಳು ಒಂದು ಚಳವಳಿಯನ್ನೇ ಆರಂಭಿಸಿವೆ ಬಡ ರೈತರೂ, ಕೃಷಿ ಕಾರ್ಮಿಕರೂ, ಕೆಲಸಗಾರರೂ ಇತರ ವಿಭಾಗಗಳ ಜನರೂ ಮಾಡಿದ್ದ ಸಾಲಗಳ ರದ್ದಿಯಾತಿಗಾಗಿಯೂ ಅವರು ಒತ್ತೆಯಿಟ್ಟ ಸಾಮಾಗ್ರಿಗಳನ್ನು ಮತ್ತೆ ಹಿಂದೆ ಪಡೆಯುವುದಕ್ಕಾಗಿಯೂ ಈ ಚಳವಳ ನಡೆಸುತ್ತಿವೆ

ಔರಂಗಾಬಾದ್ ಜಿಲ್ಲೆಯಲ್ಲಿ ಗ್ರಾಮಾಂತರಗಳಲ್ಲಿ ಸಾಹುಕಾರುಗಳಲ್ಲಿ ಬಡ ಜನರು ಗಿರವಿಯಿಟ್ಟ ಸಾಮಾಗ್ರಿಗಳನ್ನು ಹಿಂದೆ ಪಡೆಯಲು ಕಮ್ಯುನಿಸ್ಟ್ ಮತ್ತು ಕಾಂಗ್ರೆಸ್ ಕಾರ್ಯಕರ್ತರು ಒಂದು ಪ್ರಕ್ಷೋಭೆಯನ್ನೇ ಹೂಡಿದ್ದಾರೆ. ಲಾತೂರು, ಗಂಗಾಪುರ, ಜಿತಾಗಾಂವ್, ಪಿಶೋರೆ, ಕರಂಜಬೇಡಾ ಮೊದಲಾದ ಕಡೆಗಳಲ್ಲಿ ಹಳ್ಳಿಯ ಬಡವರು ಒತ್ತೆಯಿಟ್ಟ ಸುಮಾರು 3 ಲಕ್ಷ ರೂ. ಮೌಲ್ಯದ ಸಾಮಾಗ್ರಿಗಳನ್ನು ಹಿಂದೆ ಪಡೆಯಲು ಸಾಧ್ಯವಾಯಿತು.

ಜಲಗಾಂವ್‌ನಲ್ಲಿ

ಈ ತುರ್ತು ಆಜ್ಞೆ ಬಂದೊಡನೆ ಜಲಗಾಂವ್ ನಗರದಲ್ಲಿ ಗಿರವಿದಾರರ ಮನೆಗಳ ಇದಿರಿನಲ್ಲಿ ತಮ್ಮ ಸೊತ್ತುಗಳನ್ನು ಒತ್ತೆ ಇಟ್ಟವರು ಕಮ್ಯುನಿಸ್ಟ್ ಪಾರ್ಟಿಯ ನೇತೃತ್ವದಲ್ಲಿ ದೊಡ್ಡ ದೊಡ್ಡ ಕ್ಯೂ ನಿಂತುದನ್ನು ಕಾಣಬಹುದಿತ್ತು. ಮೊದಲು ಈ ತುರ್ತು ಆಜ್ಞೆಯ ಮಹತ್ವವನ್ನು ಕಮ್ಯುನಿಸ್ಟ್ ಕಾರ್ಯಕರ್ತರು ಈ ಬಡ ಸಾಲಗಾರರಿಗೆ ವಿವರಿಸಿದರು. ಹೀಗೆ ಸಾಲಪಡೆದ 3000 ಮಂದಿ ಕಮ್ಯುನಿಸ್ಟ್ ಪಾರ್ಟಿಯೊಡನೆ ತಮ್ಮ ಹೆಸರು ದಾಖಲೆ ಮಾಡಿಸಿಕೊಂಡರು. ಈ ಗಿರವಿದಾರರಲ್ಲಿ ಶೇ 60 ಮಂದಿ ಸರಕಾರದೊಡನೆ ತಮ್ಮ ಧಂಧೆಯ ಬಗ್ಗೆ ಲೈಸನ್ಸ್ ಪಡೆಯದೆ ಕಾನೂನುಬಾಹಿರವಾದ ವ್ಯಾಪಾರ ನಡೆಸುತ್ತಿದ್ದವರು. ಆದರೆ ಇಷ್ಟರಲ್ಲೇ ಈ ಗಿರವಿದಾರರು ನ್ಯಾಯಾಲಯಕ್ಕೆ ಹೋಗಿ ಸರಕಾರದಿಂದ ತಡೆಯಾಜ್ಞೆ ಪಡೆದರು.

ಕೊಲ್ಲಾಪುರ ಜಿಲ್ಲೆಯಲ್ಲಿ ಈ ತುರ್ತು ಆಜ್ಞೆಯ ಬಗ್ಗೆ ಸುಮಾರು ಒಂದು ವಾರ ಪ್ರಚಾರ ಮಾಡಿದ ಕಮ್ಯುನಿಸ್ಟ್ ಪಾರ್ಟಿಯು ಹೀಗೆ ಸಾಲದ ಪಡೆದವರ ಹೆಸರು ದಾಖಲೆ ಮಾಡಿಕೊಳ್ಳಲು ಹಲವಾರು ಕೇಂದ್ರಗಳನ್ನು ತೆರೆಯಿತು. ಸಹಸ್ರಗಟ್ಟಲೆ ಬಡವರು ತಮ್ಮ ಹೆಸರನ್ನು ದಾಖಲೆ ಮಾಡಿಕೊಂಡಿದ್ದು ಇಲ್ಲಿ ಬಡ್ಡಿಯ ದರ ಶೇ. 25 ಕ್ಕಿಂತಲೂ ಹೆಚ್ಚು ಎಂದು ತಿಳಿದು ಬಂದಿದೆ.

ಖಿರ್ವಾಡ್ ನಗರದಲ್ಲೂ ಸುತ್ತಲಿನ ಐದು ಮುಖ್ಯ ನಗರಗಳಲ್ಲೂ ಒತ್ತೆಯಿಟ್ಟ ಸಾಮಾಗ್ರಿಗಳನ್ನು ಹಿಂದಕ್ಕೆ ಪಡೆಯಲು ಕಮ್ಯುನಿಸ್ಟ್ ಪಾರ್ಟಿ ಭಾರೀ ಚಳವಳಿಯನ್ನು ನಡೆಸಿತು. ಈ ವರದಿ ಬರುವ ತನಕ 216 ಮಂದಿ ಒತ್ತೆಯಿಟ್ಟ 25000 ರೂ. ಮೌಲ್ಯದ ಸೊತ್ತುಗಳನ್ನು ಹಿಂದೆ ಪಡೆಯಲಾಗಿದೆ. ಇನ್ನು 2000 ಅರ್ಜಿಗಳು ಇತ್ಯರ್ಥಕ್ಕೆ ಬಾಕಿ ಇವೆ.

(ಸಿ. ಯಸ್. ಯಸ್.)

Printed by U. N. Srinivas Bhat at Aruna Press, Canara High School Road, Dongerkery, Mangalore—575003
and Edited & Published by him at 62, Central Market, A. Shantharam Pai Road, Mangalore—575001 (Phone: 3806)